ಪುಸ್ತಕ ಪ್ರಪಂಚ

ಫೆಬ್ರವರಿ - ೧೯೯೮

50



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೮ ಸಂಚಿಕೆ-೫

ಫೆಬ್ರವರಿ-೧೯೯೮

ಮುಖ ಚಿತ್ರ
ಚಿರ ಶಾಂತಿಯಲ್ಲಿ ಗಾಂಧೀಜಿ

ಪರಿವಿಡಿ

PUSTAKA PRAPANCHA : Monthly

Published and printed by Karnataka State Adult Education Council, Mysore-6. Price : Rupees Six

ಬಿಡಿಪ್ರತಿ : ರೂ. ೬

ವಾರ್ಷಿಕ ಚಂದಾ : ರೂ. ೬೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೪೦೦

ಸಂಸ್ಥೆಗೆ : ರೂ. ೬೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು—೫೭೦ ೦೦೬

ಗಾಂಧೀಜಿ ಹಂತಕರು ನಾವು

ಸುವರ್ಣ ಸ್ವಾತಂತ್ರ್ಯೋತ್ಸವದ ಒಂದು ವರ್ಷದ ಅವಧಿಯೊಳಗೆ ಗಾಂಧೀಜಿ ಹುತಾತ್ಮತೆಯ ಶತಮಾನಾರ್ಧಪೂರ್ತಿಯ ದಿನಾಂಕವೂ ಸೇರಿಕೊಂಡಿರುವುದು ನಾಡಿನ ದುರಂತವೆಂದೋ ವಿಧಿಯ ಅಣಕವೆಂದೋ ಕರೆಯಬೇಕಾಗಿದೆ. ಗದ್ದುಗೆಯನ್ನೇರಿದ ಜನ ರಾಷ್ಟ್ರಪಿತನನ್ನಿರಲಿ, ದೇಹದಾತ ಪಿತರನ್ನೂ ಮರೆಯುವುದು ಲೋಕರೂಢಿಯಾಗಿದೆ. ವಾಸ್ತವವಾಗಿ ಗಾಂಧಿಯನ್ನು ಕೊಂದವರು ಅವರ ಅನುಯಾಯಿಗಳೆ; ಗಾಂಧಿತತ್ವವನ್ನು ಚಿತೆಗೇರಿಸಿ, ನೆಲದ ಮೇಲೆ ಕಿಂಚಿತ್ತೂ ಭಸ್ಮಧೂಳಿ ಉಳಿಯದಂತೆ ಗುಡಿಸಿ ಗೋರಿ ನದಿಯಲ್ಲಿ ಬಿಟ್ಟವರೂ ಅವರೆ. ಜನಾಪವಾದದ ಭಯದಿಂದ, ಜನರ ಕಣ್ಣಿಗೆ ಮಂಕುಬೂದಿ ಎರಚುವ ಸಲುವಾಗಿ, ವರ್ಷಕ್ಕೊಮ್ಮೆಯೋ ಇಮ್ಮೆಯೋ ಸಮಾಧಿಯ ಮೇಲೆ ಹೂ ಚೆಲ್ಲುವ ಶಾಸ್ತ್ರವನ್ನಾಚರಿಸಿ, ಊರೂರುಗಳಲ್ಲಿ ನಾಲ್ಕಾರು ಜನರನ್ನು ಸಭೆ ಸೇರಿಸಿ, ಶೂದ್ರವಿವಾಹದಲ್ಲಿ ಪುರೋಹಿತ ಮಂತ್ರಗಳನ್ನು ತೊದಲಿಸುವಂತೆ, ಎಂದೋ ಕಂಡುಕೇಳಿದ ನಾಲ್ಕು ಮಾತುಗಳನ್ನಾಡಿ, ಗಾಂಧಿಯನ್ನು ಗೌರವಿಸುವ ಮಾನೋವಿ ನಾಟಕವನ್ನಾಡಿ, ಸದ್ಯ ಈ ವರ್ಷದ ಹಗರಣ ಮುಗಿಯಿತಲ್ಲ ಎಂದು ನಿಟ್ಟುಸಿರೆಳೆದು, ಅವರನ್ನೂ ಅವರ ಸಿದ್ಧಾಂತಗಳನ್ನೂ ಮರೆಯುವ ಜನರೇ ಜಾಸ್ತಿ. ಕ್ಯಾಲೆಂಡರಿನಲ್ಲಿ ಸರ್ವೋದಯ ಜಯಂತಿ ದಿನಗಳು ಮುದ್ರಣಗೊಳ್ಳುವುದರಿಂದ ಅವೆಲ್ಲ ಮಾಮೂಲಿ ರಾಜಕೀಯ ನಾಟಕದ ಚೋಹಗಳಾಗಿವೆ.

ಗಾಂಧೀಜಿ ಸತ್ತಾಗ ಆಗಿನ ಲೋಕನಾಯಕರು ಅವರ ಹೆಸರಿಗೆ ಅನೇಕ ಗುಣವಾಚಕಗಳನ್ನು ಸೇರಿಸಿ ಹಾಡಿ ಪಾಡಿ ಹೊಗಳಿದರು, ನಿಜ. 'ಕ್ರಿಸ್ತನ ಎರಡನೆಯ ಅವತಾರ'ವೆಂದು ರೋಮಾ ರೋಲಾ ನುಡಿದರು. ಹೌದು, ಈ ಕ್ರಿಸ್ತನನ್ನು ಗಳಿಗೆ ಗಳಿಗೆಗೂ ಕ್ರೂಸೆಗೇರಿಸುತ್ತಿದ್ದೇವೆ; ಅದರಲ್ಲೂ ಪ್ರತಿ ಜನವರಿ ೩೦ ರಂದು ಮತ್ತು ಪ್ರತಿ ಅಕ್ಟೋಬರ್ ೨ ರಂದು ತಪ್ಪದೆ. ಅವರನ್ನು ಇಪ್ಪತ್ತನೆಯ ಶತಮಾನದ ಬುದ್ಧ ಎಂದು ಕರೆದವರು ವಿಲ್ ಡ್ಯೂರೆಂಟ್. ಸತ್ತಮೇಲೆ ಭಾರತೀಯರು ಅವರನ್ನು ಗಡೀಪಾರು ಮಾಡುತ್ತಾರೆಂಬುದನ್ನು ಮೊದಲೇ ಅರಿತಿದ್ದ ಡ್ಯೂರೆಂಟರು ಮಹಾ ಜ್ಯೋತಿಷಿಯೆ ದಿಟ. ರಕ್ತ ಮಾಂಸಗಳಿಂದ ಕೂಡಿದ ಇಂಥೊಬ್ಬ ವ್ಯಕ್ತಿ ಧರೆಯ ಮೇಲೆ ನಡೆದಾಡಿದ್ದುಂಟು ಎಂದರೆ ಮುಂದಿನ ಪೀಳಿಗೆಗಳು ನಂಬುವುದಿಲ್ಲವೆಂದು ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ಹೇಳಿದ್ದನ್ನು ನಾವೀಗಲೇ ನಿಜಮಾಡಿ ತೋರಿಸಿದ್ದೇವೆ. 'ದೀಪ ಆರಿಹೋಯಿತು. ನಮಗೆ, ದೇಶಕ್ಕೆ, ಜಗತ್ತಿಗೆ ದಾರಿ ತೋರಿಸುತ್ತಿದ್ದ ದೀಪ ಅಸ್ತಂಗತವಾಯಿತು' ಎಂದು ನುಡಿದ ಜವಾಹರರ ಮಾತನ್ನು ಸಹ ದಿಟಗೊಳಿಸಿದ್ದೇವೆ. ಆರಿಹೋದ ದೀಪವನ್ನೀಗ ಕಟ್ಟಿಕೊಂಡೇನಾಗಬೇಕಾಗಿದೆ.

ಅದು ಆರಿಹೋದ ನಂತರ ಅದರ ದಾರಿ ಅದಕ್ಕೆ, ನಮ್ಮ ದಾರಿ ನಮಗೆ ಆ ಸ್ವಾತಂತ್ರ್ಯದಾತ ನಮಗೆ ಪೂರ್ಣ ಸ್ವಾತಂತ್ರ್ಯವನ್ನು ದಯಪಾಲಿಸಿ ಹೋಗಿದ್ದಾರೆ. ಅವರಿಗೆ ನಮೋ ನಮಃ !

ತಾವು ಬದುಕಿದ್ದಾಗ ಗಾಂಧೀಜಿ ಸತ್ಯವೇ ತಾಯಿ ತಂದೆ, ಅದೇ ದೇವರು ಎನ್ನುತ್ತಿದ್ದರು. ಸತ್ಯ ಸಾಕ್ಷಾತ್ಕಾರವೇ ಅವರ ಜೀವನ ಧ್ಯೇಯವಾಗಿತ್ತು; ಪ್ರತಿ ಕ್ಷಣದ ಸಾಧನಾ ಕರ್ಮವಾಗಿತ್ತು. ಜಾತೀಯತೆ, ಅಸ್ಪೃಶ್ಯತೆ, ದಾರಿದ್ರ್ಯ, ನಿರಕ್ಷರತೆ, ಮೌಢ್ಯ, ನರ ನರರ ನಡುವಣ ಅಸಮತೆ ಮತ್ತು ಶೋಷಣೆಗಳು ಹಿಂಸಾಮೂಲವೆಂದು ಸತ್ಯ ವಿರೋಧಿಗಳೆಂದವರು ನಂಬಿದ್ದರು. ಅಹಿಂಸೆ ಮತ್ತು ಸತ್ಯ ವಿಭಿನ್ನವಲ್ಲವೆಂದು ಅವರು ತಿಳಿದಿದ್ದರು. ಅವರ ರಾಜಕೀಯಾರ್ಥಿಕ ಸಾಮಾಜಿಕ ಚಿಂತನೆಗಳಿಗೆ ಸತ್ಯಸೂರ್ಯನೇ ಕೇಂದ್ರಶಕ್ತಿ.

ಪ್ರಾಣಿ ಸಮೂಹದಲ್ಲಿ ಹಾಗೂ ಸಸ್ಯ ಸಮುದಾಯದಲ್ಲಿ ಕಾಣೆಯಾದ ಸ್ವಾರ್ಥ ಮೂಲವಾದ ಶೋಷಕ ಪ್ರವೃತ್ತಿ ಮಾನವ ಸಮಾಜದಲ್ಲಿ ಭೀಕರ ಪ್ರಮಾಣದಲ್ಲಿದೆಯೆಂಬುದನ್ನು ಅಲ್ಲಗಳೆಯುವಂತಿಲ್ಲ. ಈ ಪ್ರವೃತ್ತಿ ದೇವರು, ಧರ್ಮ, ಪವಿತ್ರಗ್ರಂಥ, ಸ್ಮೃತಿ ಆಗಮ, ವಿಧಿ, ನಿಷೇಧಗಳು, ಕಟ್ಟುಪಾಡುಗಳು, ಆಚರಣೆಗಳು, ಮಠ ಮಂದಿರ, ರಾಜಕಾರಣ, ಸಾಂಸ್ಕೃತಿಕ, ವ್ಯಾಪಾರ ವಾಣಿಜ್ಯಾದಿ ಸಂಸ್ಥೆಗಳು, ಡೋಂಗಿ ವೇಷಗಳು, ಮೇಳಗಳು, ಕಾರ್ಖಾನೆಗಳು, ಲಾಂಛನಗಳು, ನಾನಾ ಜಡವ್ಯವಸ್ಥೆಗಳು, ಇವೇ ಮೊದಲಾದ ನೂರಾರು ಸಾವಿರಾರು ಮಾಧ್ಯಮಗಳ ಮೂಲಕ ಹೆಡೆಯೆತ್ತುತ್ತಿದೆ. ಭರತಖಂಡದ ಹಿನ್ನೆಲೆಯಲ್ಲಿ ಅತ್ಯಂತ ಮಾರಕವಾದ ಶೋಷಣ ಮಾಧ್ಯಮಗಳ ಕಡೆಗೆ ಗಾಂಧೀಜಿ ನಾಯಕರ, ವಿಜ್ಞಾನಿಗಳ, ಯಂತ್ರಬ್ರಹ್ಮರ, ಯೋಜಕರ, ಅರ್ಥಶಾಸ್ತ್ರಗಳ ಗಮನ ಸೆಳೆದಿದ್ದರೂ, ಅವರ ಮಾತಿಗೆ ಬೆಲೆ ಕೊಡಲಿಲ್ಲವಾದ್ದರಿಂದ, ಎಂದಾದರೊಮ್ಮೆ ಅವರ ಪ್ರತಿಮೆ ಭಾವಚಿತ್ರಗಳಿಗೆ ಹೂಮಾಲೆ ಹಾಕಿ, ಕೈಮುಗಿದು, ಭಾದ್ರಪದ ಚೌತಿಯ ವಿನಾಯಕನ ವಿಸರ್ಜನೆಯಂತೆ, ಗಾಂಧಿಯನ್ನು ವಿಸರ್ಜಿಸಲಾಗಿ, ನಾಡಿನ ಸಮಸ್ಯೆಗಳು ದಿನೇ ದಿನೇ ತೀವ್ರವಾಗುತ್ತಿವೆ, ಉಲ್ಬಣಗೊಳ್ಳುತ್ತಿವೆ.

ಸ್ವಾತಂತ್ರ್ಯನಂತರದ ಪ್ರಪ್ರಥಮ ಗಣರಾಜ್ಯೋತ್ಸವ ಸಂದರ್ಭದಲ್ಲಿ, ತಾವು ಹುತಾತ್ಮರಾಗುವುದಕ್ಕೆ ನಾಲ್ಕು ದಿನಗಳ ಮುಂಚೆ ಅವರು ಹೇಳಿದ್ದೇನು? ಜೀತದಿಂದ ಮುಕ್ತರಾಗಿದ್ದಾರೆಂದು, ಪಟ್ಟಣನಗರಗಳ ಸೇವೆಗಾಗಿ ಮಾತ್ರ ಅವರು ಹುಟ್ಟಿಲ್ಲವೆಂದು, ಅವರು ಭರತಭೂಮಿಯ ಮೂಲಾಧಾರಶಕ್ತಿಯೆಂದು ರೈತರಿಗೆ, ಹಳ್ಳಿಯ ಅಂತ್ಯಜರಿಗೆ ಮನದಟ್ಟು ಮಾಡಿಕೊಟ್ಟಾಗ ಸ್ವಾತಂತ್ರ್ಯ ಅರ್ಥವತ್ತಾಗುತ್ತದೆ. ಸಂಖ್ಯಾ ಪ್ರಮಾಣ ಮತ್ತು ಪ್ರಭಾವ

ಗುಣದಿಂದ ಎಷ್ಟೇ ಅಧೋಸ್ಥಾನದಲ್ಲಿರಲಿ, ಯಾವುದೇ ಜಾತಿ ಮತ ಪಂಗಡಕ್ಕೆ ಸೇರಿರಲಿ, ಎಲ್ಲರೂ ಸಮಾನ, ಒಂದು ಜಾತಿಯವರಾಗಲಿ ಮತದವರಾಗಲಿ ಮತ್ತೊಂದು ಜಾತಿ ಮತದವರ ಮೇಲೆ ಅಧಿಕಾರ ಚಲಾಯಿಸಬಾರದೆಂಬುದು ಸ್ವಾತಂತ್ರ್ಯದ ಸಂದೇಶವಾಗಬೇಕು. ಶ್ರಮಜೀವಿಗಳು ತಮ್ಮ ಘನತೆ ಮತ್ತು ಸಾಮರ್ಥ್ಯಗಳನ್ನು ಅರ್ಥಮಾಡಿಕೊಳ್ಳುವಂತಾಗಬೇಕು. ಅವರೊಡನೆ ಹೋಲಿಸಿದರೆ ಬಂಡವಾಳಗಾರರಿಗೆ ಘನತೆಯೂ ಇಲ್ಲ, ಸಾಮರ್ಥ್ಯವೂ ಇಲ್ಲ. ಬುದ್ಧಿಜೀವಿಗಳೂ, ವಿಜ್ಞಾನಿಗಳೂ, ಪ್ರಾಧ್ಯಾಪಕರೂ ಅಷ್ಟೋ ಇಷ್ಟೋ ಶಾರೀರಕ ಶ್ರಮ ಪೂರೈಸಬೇಕೆಂದು ಅವರು ನುಡಿಯುತ್ತಾರೆ. ಸ್ವಾತಂತ್ರ್ಯ ಅಸಮಾನತೆಯ ರೋಗಕ್ಕೆ ಔಷಧಿಯಾಗಬೇಕು, ಶ್ರಮಿಕರಿಗೆ ವರವಾಗಬೇಕು. ಆ ದಿನ ಗಾಂಧೀಜಿ ನಾಡಿಗೆ ನೀಡಿದ ಸಂದೇಶವಿದು. ದೇಶದ ಮೂರನೆಯ ಒಂದು ಭಾಗ ಜನ ನಿರುದ್ಯೋಗಿಗಳಾಗಿರುವಾಗ, ಮತ್ತಷ್ಟು ಜನ ಸೋಮಾರಿಗಳಾಗಿರುವಾಗ, ಅಂದರೆ ಬೆವರು ಸುರಿಸದೆ ಸುಖವನ್ನನುಭವಿಸುತ್ತಿರುವಾಗ ದೇಶದ ಪ್ರಗತಿ ಸಾಧ್ಯವಿಲ್ಲವೆಂದವರು ಸ್ಪಷ್ಟಪಡಿಸಿದ್ದಾರೆ.

ಗಾಂಧೀಜಿ ಯಂತ್ರ ಸಂಸ್ಕೃತಿಯನ್ನು ಸಂಪೂರ್ಣವಾಗಿ ತಿರಸ್ಕರಿಸುವುದಿಲ್ಲ. ಶೋಷಣೆಯ ಸಾಧನವಾಗಿರುವ, ನಿರುದ್ಯೋಗವನ್ನು ಹೆಚ್ಚಿಸುವ, ಸೋಮಾರಿತನವನ್ನು ಅಧಿಕಗೊಳಿಸುವ, ಅಸಮಾನತೆಯನ್ನು ಉಲ್ಬಣಗೊಳಿಸುವ, ವರ್ಗಗಳನ್ನು ಸೃಷ್ಟಿಸುವ ಭಾರಿ ಯಂತ್ರಗಳು ಬೇಡವೆಂಬುದೇ ಅವರ ಸಲಹೆ. ವಿನಾಶಕ್ಕವಕಾಶವಿಲ್ಲದ ವಿಕಾಸಕ್ಕವರು ಸ್ವಾಗತ ನೀಡುತ್ತಾರೆ. ಅನಿವಾರ್ಯವಾದೆಡೆ ಅವನ್ನು ಬೇಡವೆನ್ನುವುದಿಲ್ಲ. ಉತ್ಪನ್ನಗಳನ್ನು ಉತ್ತಮಗೊಳಿಸುವ ಸಲುವಾಗಿ ಗ್ರಾಮ ಕೈಗಾರಿಕಾ ಯಂತ್ರಗಳನ್ನು ತಿದ್ದಿ ಉಜ್ಜಿ ಹರಿತಗೊಳಿಸುವುದಾದರೆ ಅವನ್ನವರು ಪ್ರೋತ್ಸಾಹಿಸುತ್ತಾರೆ. ಇಂಡಿಯಾ ದೇಶದ ದಾರಿದ್ರ್ಯವನ್ನು ಸಂಪೂರ್ಣವಾಗಿ ನಿವಾರಿಸಿ, ಸೋಮಾರಿತನವನ್ನು ತಡೆಗಟ್ಟಿ, ಪರಿಸರ ಮಾಲಿನ್ಯವನ್ನು ತೊಡೆಯುವುದಾದರೆ ಕೈಗಾರಿಕೀಕರಣಕ್ಕೆ ಪ್ರೋತ್ಸಾಹ ನೀಡುವಲ್ಲಿ ಅವರು ಹಿಂಜರಿಯುವುದಿಲ್ಲ.

ಸಿಂಗರ್ ಹೊಲಿಗೆಯಂತ್ರದ ಬಗ್ಗೆ ಅವರಿಗೆ ತುಂಬ ಮೆಚ್ಚುಗೆ. ಅದರ ನಿರ್ಮಾಣದ ಹಿನ್ನೆಲೆಯಲ್ಲಿ ಪ್ರೇಮಕತೆಯೂ ಇದೆ. ಕೈಯಲ್ಲಿ ಬಟ್ಟೆಯನ್ನು ಹೊಲಿಯುತ್ತಿದ್ದ ತನ್ನ ಹೆಂಡತಿಯ ಕಷ್ಟವನ್ನು ನೋಡಲಾರದೆ, ಪತಿ ಸಿಂಗರ್ ಹೊಲಿಗೆಯಂತ್ರವನ್ನು ನಿರ್ಮಿಸುತ್ತಾನೆ. ಪ್ರೇಮಕ್ಕೆ ಅದೊಂದು ಸಂಕೇತವೆಂದರೂ ತಪ್ಪಲ್ಲ. ಅಷ್ಟರ ಮಟ್ಟಿಗೆ ಅದು ಸರಿ. ಅದರಿಂದ ನಿರುದ್ಯೋಗ ಸಮಸ್ಯೆ ತೀವ್ರವಾಗುವುದಿಲ್ಲ. ಹೊಲಿಯುವವನು ಶ್ರಮ ಜೀವಿಯಾಗಲೇ ಬೇಕು. ಇಲ್ಲಿ ಪ್ರೇಮದ ಪರಾಕಾಷ್ಠೆಯ ಅನುಭವವಿದೆ; ಸೃಜನಶೀಲ ಪ್ರತಿಭೆಯ ತೇಜಸ್ಸಿದೆ; ಶ್ರಮಜೀವನದ ಮಾಂತ್ರಿಕತೆಯಿದೆ; ಯಂತ್ರ

ವಿಜ್ಞಾನದ ಮೊಗವಾಡವೂ ಇದೆ. ಆದರೆ ಬೃಹತ್ಪ್ರಮಾಣದಲ್ಲಿ ತಯಾರಿಸುವ ಬಟ್ಟೆಯಂತ್ರಗಳನ್ನು ಗಾಂಧೀಜಿ ಒಪ್ಪುವುದಿಲ್ಲ. ಸಿಂಗರ್ ಹೊಲಿಗೆಯಂತ್ರವನ್ನು ತಯಾರಿಸುವಾಡಲು ಬೃಹತ್ ಕಾರ್ಖಾನೆ ಬೇಕಲ್ಲವೆ ಎಂದು ಯಾರಾದರೂ ಪ್ರಶ್ನಿಸುವುದಾದರೆ, ಬೇಕು ನಿಜ; ಅವುಗಳ ತಯಾರಿಕೆಯ ಹೊಣೆಯನ್ನು ಸರ್ಕಾರ ವಹಿಸಿಕೊಳ್ಳಬೇಕೆಂದು ಗಾಂಧೀಜಿ ಹೇಳುತ್ತಾರೆ.

ಅಂದಮೇಲೆ ಸೌಂದರ್ಯ ಪ್ರಜ್ಞೆ, ಮಾನವೀಯತೆ, ಜನಸಮುದಾಯದ ಯೋಗಕ್ಷೇಮ, ಸತ್ಯಾನ್ವೇಷಣೆ, ಸೃಜನಶೀಲ ಪ್ರತಿಭೆ ಮೊದಲಾದ ದೈವೀ ಪ್ರವೃತ್ತಿಗಳಿಗೆ ಧಕ್ಕೆಯೊದಗದಂತೆ ಉಚಿತ ಮಿತಪ್ರಮಾಣದಲ್ಲಿ ಯಾಂತ್ರೀಕರಣ ಅಗತ್ಯವೆಂಬುದನ್ನವರು ಒಪ್ಪಿಕೊಳ್ಳುತ್ತಾರೆ. ಭರತಖಂಡದ ಹೊಲಗದ್ದೆಗಳನ್ನುಳುವ, ಕೋಟ್ಯಂತರ ರೈತರನ್ನು ನಿಷ್ಕ್ರಿಯಗೊಳಿಸುವ, ಬೃಹದ್‌ಯಂತ್ರಗಳು ಬೇಡ. ಈಗ ಚಾಲ್ತಿಯಲ್ಲಿರುವ ನೇಗಿಲಿಗೆ ವಿದ್ಯುಚ್ಛಕ್ತಿಯನ್ನಳವಡಿಸುವುದಾದರೆ ತಪ್ಪಲ್ಲವೆಂಬುದು ಅವರ ಮತ. ವಿಜ್ಞಾನಿ ತಪಸ್ವಿಯೂ ಹೌದು, ಸತ್ಯಾನ್ವೇಷಕನೂ ಹೌದು. ಸತ್ಯಾನ್ವೇಷಣೆ ಸತತವಾಗಿ ನಡೆಯಲೇಬೇಕು; ಅದು ನೈತಿಕಮೌಲ್ಯಗಳ ಗಡಿಯೊಳಗೆ, ಔಚಿತ್ಯ ಮತ್ತು ಮಿತಪ್ರಮಾಣ ಸಿದ್ಧಾಂತಗಳನ್ನು ಗಮನದಲ್ಲಿಟ್ಟುಕೊಂಡು ನಡೆಯಬೇಕೆಂಬುದು ಅವರ ಇಚ್ಛೆ.

ಅಂತ್ಯೋದಯವನ್ನೊಳಗೊಂಡ ಸರ್ವೋದಯ ಸಮಾಜ ಸೃಷ್ಟಿಯೇ ಅವರ ಸಕಲಸಾಧನೆಗಳ ಚರಮಪರಮಗಂತವ್ಯ. ಈ ಗಂತವ್ಯವನ್ನು ಮುಟ್ಟುವ ಯಾವ ಮಾರ್ಗವಾದರೂ ಅವರ ದೃಷ್ಟಿಯಿಂದ ನಿಷಿದ್ಧವಲ್ಲ. ಸರ್ವೋದಯ ಸಮಾಜದಲ್ಲಿ ಹಿಂಸೆ, ಅಶಾಂತಿ, ಅಸಮತೆ, ಶೋಷಣೆ, ಅಮಾನವೀಯತೆ, ಕೇಂದ್ರೀಕರಣ ಮೊದಲಾದ ಆಸುರೀಪ್ರವೃತ್ತಿ ವೃತ್ತಿಗಳಿಗವಕಾಶವೇ ಇಲ್ಲ. ಅಂಥ ಸಮಾಜದಲ್ಲಿ ಮಾನವ ಮಾನವರ ನಡುವಣ ಸಂಬಂಧ ಮಧುರ ಮನೋಹರವಾಗಿರುತ್ತದೆ ಮಾತ್ರವಲ್ಲ, ಪ್ರಾಣಿ ಸಸ್ಯ ಸಮೃದ್ಧವಾದ ನಿಸರ್ಗಮಾನವ ಸಂಬಂಧವೂ ಸುರಮ್ಯವಾಗಿರುತ್ತದೆ. ಅಂಥ ಸಮಾಜದಲ್ಲಿ ಮನುಷ್ಯ ಅನಾವಶ್ಯಕವಾಗಿ ಸಸ್ಯಗಳಿಗೂ ಹಿಂಸೆ ಕೊಡುವುದಿಲ್ಲ. ಅಹಿಂಸೆ ಮಾನವ ಸಂಸ್ಕೃತಿಯ ಮೂಲಧಾತುವಾಗಿರುತ್ತದೆ. ತ್ಯಾಗಮಯ ಪರಸ್ಪರ ಸಹಕಾರ ಮತ್ತು ಸಮನ್ವಯ ಮೈತ್ರಿ ಆ ಸಮಾಜದ ಚಾಲಕ ಶಕ್ತಿಯಾಗಿರುತ್ತವೆ. ಜಾತಿ ಲಿಂಗ ಮತವರ್ಗ ವರ್ಣ ಅಥವಾ ಯಾವುದೇ ಭೇದಗಳಿಗಲ್ಲಿ ಅವಕಾಶವಿರುವುದಿಲ್ಲ. ಅಲ್ಲಿ ದಾರಿದ್ರ್ಯ ಶ್ರೀಮಂತಿಕೆಗಳ ನಡುವಣ ಗೆರೆ ತಾನಾಗಿಯೇ ಅಳಿಸಿಹೋಗುತ್ತದೆ. ವಿಜ್ಞಾನ ಮತ್ತು ಆತ್ಮವಿಜ್ಞಾನಗಳ ಸಂಗಮ ಅಭೇದ್ಯವಾಗಿರುತ್ತದೆ. ಮಾನವನ ಮತಿಶಕ್ತಿಗೆ ಪಾರವಿಲ್ಲ. ತಂತ್ರಜ್ಞಾನ, ಜೀವತಂತ್ರಜ್ಞಾನ, ಆಕಾಶ ತಂತ್ರಜ್ಞಾನ, ತಳಿತಂತ್ರಜ್ಞಾನ ಹಾಗೂ ವಾರ್ತಾತಂತ್ರಜ್ಞಾನಗಳ ಕ್ಷೇತ್ರದಲ್ಲಿ ನಡೆದಿರುವ ನಡೆಯುತ್ತಿರುವ

ವಿಸ್ಮಯಕಾರಿ ಆವಿಷ್ಕಾರಗಳನ್ನು ನೋಡಿದಾಗ ಮಾನವನ ಆಧ್ಯಾತ್ಮಿಕ ಮತ್ತು ಬೌದ್ಧಿಕ ಸಾಮರ್ಥ್ಯಕ್ಕೆ ಮೇರೆಯೇ ಇಲ್ಲವೆನಿಸುತ್ತದೆ. ಗಾಂಧೀಜಿಯ ಕೃತಿಗಳನ್ನೋದಿದವರಿಗೆ ಈ ವಿಚಾರಧಾರೆ ಅವಗತವಾಗದಿರದು.

ಆದರೆ ಪರಿಸರ ಮಾಲಿನ್ಯಕ್ಕೆ ಕಾರಣವಾಗುವ ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆಯನ್ನವರು ವಿರೋಧಿಸುತ್ತಾರೆ. ತಂತ್ರಜ್ಞಾನದ ಪ್ರಗತಿಯ ಪರಿಣಾಮವಾಗಿ ಮನುಷ್ಯನ ಸುಖಭೋಗಾನುಕೂಲಗಳು ಹೆಚ್ಚಿವೆ ನಿಜ. ಆ ಅನುಕೂಲಗಳು ಕೆಲವೇ ಕೆಲವರನ್ನು ತಲುಪಿವೆಯೆ ಹೊರತು, ಮಿಲಿಯ ಬಿಲಿಯ ಜನರು ಕ್ಷುತ್ಪಿಪಾಸಾ ರೋಗಬಾಧೆಗಳಿಂದ ನರಳುತ್ತಿದ್ದಾರೆ. ಅರಣ್ಯಗಳು ನಾಶವಾಗಿ, ವಿಷಾನಿಲ ಸರ್ವವ್ಯಾಪಕವಾಗಿ ಹರಡಿ, ಓಜೋನ್ ಪದರದ ತೂತು ದಿನೇ ದಿನೇ ಅಗಲವಾಗುತ್ತಿದೆ; ಋತುಮಾನಗಳೇ ಬದಲಾವಣೆಗೊಳ್ಳುತ್ತಿವೆ. ಕಾರು ವಿಮಾನಾದಿ ಯಾನ ಸೌಕರ್ಯಗಳಿಂದ ಹಿಡಿದು ಬೃಹದ್ ಯಂತ್ರಗಳು ಹೊರಚೆಲ್ಲುವ ಕಶ್ಮಲಗಳಿಂದ ಜೀವಜಂತುಗಳ ಉಸಿರುಕಟ್ಟುತ್ತಿದೆ; ಎಬೋಲಾದಿ ಹೊಸ ಹೊಸ ರೋಗಗಳು ಮತ್ತು ಕ್ರಿಮಿಕೀಟಗಳು ಉತ್ಪತ್ತಿಯಾಗುತ್ತಿವೆ. ಹಿಂದೆಂದೂ ಕಂಡರಿಯದ ಹುಚ್ಚುದನ, ಹಂದಿಜ್ವರ, ಹಕ್ಕಿರೋಗ, ನಾಯಿಪೀಡೆ, ಸಸ್ಯರುಜೆಗಳು ಮಾನವನನ್ನು ದುರ್ಬಲಗೊಳಿಸುತ್ತಿವೆ, ಕಂಗೆಡಿಸುತ್ತಿವೆ. ರೋಗ ವಾಹನಾಪಘಾತ ಜಾತೀಯ ಮತೀಯ ಕಲಹ ಆತ್ಮಹತ್ಯೆಗಳಿಂದ ಪರಿಣಮಿಸುತ್ತಿರುವ ಜನಮರಣ ಸಂಖ್ಯೆ ಮಹಾ ಸಂಗ್ರಾಮಗಳ ಮರಣಸಂಖ್ಯೆಗಿಂತ ಹತ್ತುಪಟ್ಟು, ನೂರುಪಟ್ಟು ಹೆಚ್ಚಾಗುತ್ತಿದೆ.

ನಾಗರಿಕತೆಯ ಜತೆಜತೆಗೆ ದ್ವೇಷ ಮಾತ್ಸರ್ಯಾದಿ ಆಸುರೀಪ್ರವೃತ್ತಿಗಳು ಅಧಿಕಗೊಂಡು, ಪರಿಸರ ಮಾಲಿನ್ಯ ಹೆಚ್ಚಲು ಕಾರಣಗಳಾಗಿವೆ. ಇವುಗಳಿಂದೊದಗುವ ಮಾಲಿನ್ಯ ಅನ್ಯಕಾರಣಗಳಿಂದೊದಗುವ ಮಾಲಿನ್ಯಕ್ಕಿಂತ ಹೆಚ್ಚು ಕ್ರೂರವಾದುವೆಂದೇ ಹೇಳಬೇಕಾಗುತ್ತದೆ. ಇವುಗಳಿಂದಾಗಿ ಹಳ್ಳಿಗಳಲ್ಲಿಯೂ ಶಾಂತಿಯಿಲ್ಲ. ದಿನೇ ದಿನೇ ಅಲ್ಲಿಯ ವಾತಾವರಣವೂ ಹದಗೆಟ್ಟು ಜನ ಕಂಗಾಲಾಗುತ್ತಿದ್ದಾರೆ. ಪಟ್ಟಣಿಗರು ಮುಂದುವರಿದಂತೆಲ್ಲ ಹಳ್ಳಿಗರು ಹಿಂದುಳಿಯುತ್ತಿದ್ದಾರೆ. ಸರಿಯಾದ ಆರೈಕೆಯಿಲ್ಲದೆ ಹಳ್ಳಿಮಕ್ಕಳ ಬುದ್ಧಿಶಕ್ತಿ ಕುಂಠಿತವಾಗುತ್ತಿದೆ. ಭ್ರೂಣಸ್ಥಾವಧಿಯಿಂದಲೇ ಮಗುವಿನ ಬುದ್ಧಿಶಕ್ತಿ ವಿಕಾಸ ಮುಖವಾಗುವುದರಿಂದ ಹಳ್ಳಿಯ ತಾಯಂದಿರ ಪೌಷ್ಟಿಕತೆಯ ಕಡೆಗೆ ಬುದ್ಧಿವಂತ ಜನರ ಗಮನ ಹರಿಯುತ್ತಿದೆಯೇ? ಹೀಗಾಗಿ ಹಳ್ಳಿ ಮತ್ತು ಪಟ್ಟಣ ಮಕ್ಕಳ ನಡುವಣ ಅಂತರ ಎಲ್ಲಕಾಲಕ್ಕೂ ಉಳಿದೇ ಉಳಿಯುತ್ತದೆ. ನೂರು ಜನರಲ್ಲಿ ಎಂಬತ್ತು ಜನ ದುರ್ಬಲರಾಗಿರುವಾಗ ಅಷ್ಟರಮಟ್ಟಿಗೆ ದೇಶವೂ ದುರ್ಬಲವಾಗಿರುತ್ತದೆಂಬುದನ್ನು ಬುದ್ಧಿಜೀವಿಗಳು, ವಿಜ್ಞಾನಿಗಳು, ತಂತ್ರಜ್ಞರು ಮತ್ತು ರಾಜಕಾರಣಿಗಳು ಅರಿಯುವುದು ಮೇಲು.

ಗಾಂಧೀಜಿಯವರಿಗೆ ಈ ಎಲ್ಲದರ ಅರಿವಿತ್ತು. ಗೋಚರ–ಅಗೋಚರಾತ್ಮಕ ಹಿಂಸೆಯಲ್ಲಿ, ಅನೀತಿ ಅನ್ಯಾಯ ಶೋಷಣೆಗಳಲ್ಲಿ, ಜಾತಿ ಮತ ವರ್ಗಗಳ ಪ್ರತಿಷ್ಠೆಯಲ್ಲವರು ಪರಿಸರ ಮಾಲಿನ್ಯದ ಆಧಿಪತ್ಯವನ್ನು ಗುರುತಿಸಿದ್ದರು. ಆ ವಿವಿಧ ಮಾಲಿನ್ಯಗಳಿಗೆ ಪರಿಹಾರವನ್ನವರು ಅಧ್ಯಾತ್ಮ ಸಾಧನೆಯಲ್ಲಿ, ನೈತಿಕ ಮಾಧ್ಯಮಗಳಲ್ಲಿ, ಸರಳ–ಶ್ರಮ ಜೀವನದಲ್ಲಿ ಕಂಡುಕೊಂಡಿದ್ದರು. ಸರ್ವವಿಧ ಪರಿಸರ ಮಾಲಿನ್ಯಕ್ಕೆ ಕಾರಣವಾದ ವಿಜ್ಞಾನ ತಂತ್ರಜ್ಞಾನಗಳನ್ನು ವಿವೇಕದಿಂದ ಅಧ್ಯಾತ್ಮ ವಿದ್ಯೆಯ ಚೌಕಟ್ಟಿನೊಳಗೆ ಬಳಸುವಂತಾದರೆ, ಗೀತೆ ಬೈಬಲ್ ಕುರಾನ್‌ಗಳನ್ನು ಒಂದೇ ಕಡೆ ಪಠಿಸುವ, ಕೃಷ್ಣ ಕರೀಮ್‌ರನ್ನು ಒಂದೇ ಕಡೆ ಪೂಜಿಸುವ ಪರಿಸ್ಥಿತಿ ನಿರ್ಮಾಣವಾದರೆ ದೇಶದಲ್ಲಿ ಮಾತ್ರವಲ್ಲ ಇಡೀ ವಿಶ್ವದಲ್ಲಿಯೇ ಶಾಂತಿ ನೆಲಸುತ್ತದೆಂಬುದು ಅವರ ಹೆಬ್ಬಯಕೆಯಾಗಿತ್ತು. ಅವರ ಆ ಹೆಬ್ಬಯಕೆ, ಅವರ ಸಚ್ಚಾರಿತ್ರ್ಯ ಹಾಗೂ ವಿಶ್ವ ಮಾನವತ್ವವೇ ಅವರ ದುರಂತಕ್ಕೆ ಕಾರಣವಾಯಿತು. ಅವರ ಬದುಕಿನ ಅರ್ಥವನ್ನು ತಿಳಿಯಲಾರದ, ಮುಸ್ಲಿಮರು ಅವರನ್ನು ಹಿಂದೂವೆಂದು ಕರೆದರೆ, ಅವರು ಮುಸ್ಲಿಮರ ಪರವೆಂದು ಹಿಂದೂಗಳು ಆಪಾದಿಸಿದರು. ಕೊನೆಗೆ ಹಿಂದೂವಿನ ಕೈಯಿಂದಲೇ ಹತರಾದರು. ಜಗತ್ತಿನ ಇತಿಹಾಸ ಕಂಡ ದುರಂತಗಳಲ್ಲಿ ಇದಕ್ಕಿಂತ ಘೋರತರವಾದದ್ದು ಮತ್ತೊಂದಿರಲಾರದು!

ಇಂಥ ದುರಂತದಿಂದಾದರೂ ಮನುಕುಲದಲ್ಲಿ ವಿವೇಕ ಮೂಡುತ್ತದೆಯೆ?

ದೇಜಗೌ

ಕಡೆಗುಂ ಪೊಲಸಾದುದೀ ಭಾರತ ಸಂಗ್ರಾಮಂ

ಏಳು ದಶಕಗಳ ಹಿಂದೆ ಕವಿ ಪ್ರವಾದಿಯೊಬ್ಬರು ಮಾಡಿದ ಈ ಘೋಷಣೆ ಅತ್ಯುಚಿತವಾಗಿ ಇಂದಿನ ಭಾರತಕ್ಕನ್ವಯಿಸುತ್ತದೆ. ಸ್ವಾತಂತ್ರ್ಯಾನಂತರ ಹತ್ತು-ಹದಿನೈದು ವರ್ಷದ ತನಕ ವ್ಯಕ್ತಿ ಪ್ರಭಾವವೊ, ಸ್ವಾತಂತ್ರ್ಯದ ಅಮಲೊ, ರಾಜಕೀಯ ಲಾಭ ಪ್ರಜ್ಞೆಯ ಅಭಾವವೊ ಕಾರಣವಾಗಿ ಆಡಳಿತ ಹಳಿ ತಪ್ಪದೆ ಸಾಗುತ್ತಿತ್ತು. ಅಲ್ಲಿಂದೀಚೆಗೆ ಧನವ್ಯಾಮೋಹ, ಅಧಿಕಾರ ದಾಹ, ಜಾತಿ ವೈಷಮ್ಯಗಳ ಜ್ವಾಲೆ ಧಗಧಗಿಸುತ್ತ, ದ್ವೇಷ ಮಾತ್ಸರ್ಯಗಳು ಭುಗಿಲು ಗೊಂಡು, ಯಾದವೀಕಲಹ ಪ್ರಲಯಾಗ್ನಿ ದೇಶವನ್ನೆಲ್ಲ ಮುಕ್ಕುತ್ತಿದೆ. ದಿನಬೆಳಗಾದರೆ ಹಿಂಸೆ ಕೊಲೆ ರಕ್ತಪಾತ ಲೂಟಿ ದರೋಡೆ ಬಾಂಬುಸಿಡಿತ ಅಗ್ನಿಸ್ಪರ್ಶ ಗೂಂಡಾತನ ಲಂಡಭಂಡತನ ಮೊದಲಾದ ರಾಕ್ಷಸೀ ಕೃತ್ಯಗಳು ಸರ್ವತ್ರ ಬೆತ್ತಲೆ ಕುಣಿಯುತ್ತಿವೆ. ಗೋಚರಾಗೋಚರ ಭ್ರಷ್ಟಾಚಾರ ಮಾಲಿನ್ಯ ಸರ್ವಮಾಲಿನ್ಯಗಳನ್ನು ಮೀರಿಸಿದೆ. ರಕ್ಷಕರೆ ಭಕ್ಷಕರಾದರೆ, ಪಾಲಕರೆ ಶೋಷಕರಾದರೆ, ಅಧ್ಯಕ್ಷರೆ ವಿಧ್ವಂಸಕರಾದರೆ, ದೇಶದ ಉಳಿವು ಸಾಧ್ಯವೆ? ಹಿಂದೆ ನೆಲದ ಮೇಲೆ ನಡೆಯುತ್ತಿದ್ದ ಯುದ್ಧ ಈಗ ಪತ್ರಿಕೆಗಳ ನ್ನಾವರಿಸಿಕೊಂಡಿದೆ. ಗ್ರಾಮೀಣ ಮುಗ್ಧರಿಗೂ ನಾಚಿಕೆಯಾಗುವಂತೆ, ಕಾಡುಪ್ರಾಣಿಗಳಿಗೂ ಅಸಹ್ಯವಾಗುವಂತೆ, ಮರ್ಯಾದೆಯನ್ನು ಮೀರಿ ಕೂಗಾಡುವ, ಲಂಗುಲಗಾಮಿಲ್ಲದೆ ಪರಸ್ಪರ ಮೂದಲಿಕೆ ನಿಂದೆಗಳಲ್ಲಿಯೇ ಮುಳುಗಿರುವ ಅಸಭ್ಯ, ಅನಾಗರಿಕ ಜನರಿಂದಾಗಿ 'ಕಡೆಗುಂ ಪೊಲಸಾದುದೀ ಭಾರತ ಭೂಭಾಗಂ' ಎಂದು ಹೇಳುವಂತಾಗುತ್ತದೆ.

ರಾಜಕೀಯ ಅಸ್ಪೃಶ್ಯವಲ್ಲ. ಅದು ಕೇವಲ ರಾಜಕಾರಣಿಗಳಿಗೆ ಮೀಸಲಲ್ಲ. ಪ್ರತಿಯೊಬ್ಬನೂ ತನ್ನ ಸ್ಥಾನಮಾನಗಳಿಗೆ ತಗುವಂತೆ, ಔಚಿತ್ಯಕ್ಕೆ ಭಂಗ ಬರದಂತೆ, ಕರ್ತವ್ಯಕ್ಕೆ ಚ್ಯುತಿ ಬರದಂತೆ ನಿರಕ್ಷರಿಗಳಿಂದ ಹಿಡಿದು ಬುದ್ಧಿಜೀವಿ ಗಳ ತನಕ ರಾಜಕಾರಣಿಗಳಿಗೆ ಸರಿಯಾಗಿ ಬುದ್ಧಿ ಕಲಿಸಿದ್ದರೆ, ಪರಿಸ್ಥಿತಿ ಇಷ್ಟೊಂದು ಕೆಡುತ್ತಿರಲಿಲ್ಲ. ಈ ಹೊತ್ತಿನ ದುರ್ಗತಿಗೆ ರಾಜಕಾರಣಿಗಳು ಮಾತ್ರವಲ್ಲ, ಅವರನ್ನು ನಿಯಂತ್ರಿಸಲಾರದೆ ಮೌನವನ್ನಪ್ಪಿಕೊಂಡು ಹೇಡಿ ಗಳಂತೆ ವರ್ತಿಸುತ್ತಿರುವ ಎಲ್ಲ ಪ್ರಜೆಗಳೂ, ಮುಖ್ಯವಾಗಿ ಬುದ್ಧಿಜೀವಿಗಳೂ ಕಾರಣ. ಹೇಡಿತನ ಸಾತ್ವಿಕತೆಯ, ನೀತಿವಂತಿಕೆಯ ಧಾರ್ಮಿಕತೆಯ ಲಕ್ಷಣ ವಲ್ಲ. ಇಂದು ಭ್ರಷ್ಟಾಚಾರ ಮುಕ್ತವಾಗಿರುವ ಪಕ್ಷಗಳೇ ಇಲ್ಲ. ನೌಕರಿ-ಷಾಹಿಯೂ ಸೇರಿಕೊಂಡಂತೆ ಭ್ರಷ್ಟಾಚಾರ ಎಲ್ಲೆಲ್ಲ ಎಂದು ಕೇಳಬೇಕಾಗಿದೆ. ಇರುವೆಗೆ ಇರುವೆ ಹೆಜ್ಜೆ ಗೊತ್ತಾಗುವಂತೆ, ಕಳ್ಳರಿಗೆ ಮಾತ್ರ ಕಳ್ಳರ ಹೆಜ್ಜೆಯ ಸುಳುಹು ಸಿಗುತ್ತದೆ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಕಣ್ಣು ಹಾಯಿಸಿದಾಗ ವೈಯಕ್ತಿಕ ದ್ವೇಷಮಾತ್ಸರ್ಯಗಳೇ ಇಂದಿನ ಎಲ್ಲಾ ಗೊಂದಲ

ಗಳಿಗೆ ಮೂಲವೆಂದು ತಿಳಿಯದಿರದು. ಯಾರೋ ಮಾರಿಯಂಥ ಒಬ್ಬನ ಸ್ವಾರ್ಥಕ್ಕಾಗಿ, ಪ್ರತಿಷ್ಠೆಗಾಗಿ, ಅಹಂಕಾರಕ್ಕಾಗಿ, ಉಳಿದ ಜನ ಕುರಿಗಳಂತೆ ಬಲಿಯಾಗುತ್ತಾರೆ. ಎಲ್ಲ ಕಲಹಗಳ ಮೂಲವಲ್ಲಿ ಒಬ್ಬಾನೊಬ್ಬ ವ್ಯಕ್ತಿಯ ಕೈವಾಡವಿರುತ್ತದೆಂಬುದನ್ನು ನೆಪೋಲಿಯನ್, ಹಿಟ್ಲರ್, ಮುಸಲೋನಿಯಂಥವರ ಘಾತಕತನವಿರುತ್ತದೆಂಬುದನ್ನು ಇತಿಹಾಸ ಸಾರುತ್ತದೆ.

ರಾಜಕೀಯ ಕ್ಷೇತ್ರ ಆಶ್ರಮವೂ ಅಲ್ಲ, ಯಾತ್ರಾ ಕೇಂದ್ರವೂ ಅಲ್ಲವೆನ್ನುವುದನ್ನು ಒಪ್ಪಿಕೊಳ್ಳಲೇಬೇಕು. ಕೌಟಿಲ್ಯ ಕಾಮಂದಕ ಮೆಕಿಯವೆಲ್ಲಿ ಶುಕ್ರ ಮೊದಲಾದವರು ನಿರೂಪಿಸಿರುವ ರಾಜನೀತಿಯ ರೂಪ ಸ್ವರೂಪಗಳನ್ನು ಲಕ್ಷಿಸಿದಾಗ ಎಲ್ಲ ಧುರೀಣರೂ ಪುಢಾರಿಗಳೂ ಅದೇ ಮಾರ್ಗಮಾನಕಗಳನ್ನನುಸರಿಸುತ್ತಿದ್ದಾರೆಂಬುದೂ, ಪ್ರಾಚೀನ ರೀತಿ ನೀತಿ ನಿಯಮಗಳನ್ನು ಕಾಲ ಕಾಲಕ್ಕೆ ಬದಲಾಯಿಸಿಕೊಂಡಿದ್ದಾರೆಂಬುದೂ ನಿಜವೆ. ಆದರೆ ದೇಶದ ಹಿತ, ಮಾನವೀಯತೆಯ ಕನಿಷ್ಠ ಮೌಲ್ಯಗಳನ್ನಾದರೂ ಕಣ್ಣೆಲೆಯಲ್ಲಿರಿಸಿಕೊಳ್ಳದೆ, ದುಂಡಾವರ್ತಿಯಿಂದ ಲಾಭಕೋರತನದಿಂದ, ದೀನದಲಿತ ಅಲ್ಪಸಂಖ್ಯಾತರನ್ನು ಬಲಿ ತೆಗೆದುಕೊಂಡು ಪ್ರಜೆಗಳು ನೀಡಿರುವ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವುದು ನ್ಯಾಯವಲ್ಲ. ಈಗ ರಾಜಕೀಯ ಕೇವಲ ಹವ್ಯಾಸವಾಗುಳಿದಿಲ್ಲ; ಅದೊಂದು ವೃತ್ತಿಯಾಗಿದೆ. ಅದು ತಕ್ಕಮಟ್ಟಿಗೆ ನಿರುದ್ಯೋಗ ಸಮಸ್ಯೆಯನ್ನೂ ಬಗೆಹರಿಸಿದೆ. ಪ್ರತಿಯೊಂದು ಪಕ್ಷದವರೂ ತಂತಮ್ಮ ಬುದ್ಧಿ ಶಕ್ತಿಗನುಗುಣವಾಗಿ, ಪಕ್ಷದ ಸ್ಥಾನಮಾನಗಳಿಗನುಗುಣವಾಗಿ ಕೈಬಿಸಿಮಾಡಿಕೊಳ್ಳುತ್ತಾರೆ. ಹೊಸ ಪಕ್ಷವೊ, ಗುಂಪೊ ಉದಯವಾಯಿತೆಂದರೆ, ನೂರಾರು ಮಂದಿಗೆ ನಿರುದ್ಯೋಗ ಸಮಸ್ಯೆ ಬಗೆಹರಿಯುತ್ತದೆ. ಅವರವರ ಅಂತಸ್ತಿಗನುಗುಣವಾಗಿ ತಾಲ್ಲೂಕು ಅಧಿಕಾರಿಗಳು ಯಾವು ಯಾವುದೋ ನೆಪದಲ್ಲಿ ರಾಜಕೀಯ ಸೇವಾಧುರೀಣರಿಗೆ ಕಾಣಿಕೆ ಸಲ್ಲಿಸಬೇಕಾಗಿದೆಯೆಂದು ಅಧಿಕಾರಿಗಳೆ ರಾಜಾರೋಷವಾಗಿ ಹೇಳುತ್ತಾರೆ. ಇಂಥ ಅಗೋಚರ ಸೂಕ್ಷ್ಮ ಪರಿಸರ ಮಾಲಿನ್ಯಗಳನ್ನು ತಡೆಗಟ್ಟುವುದು ಸಾಧ್ಯವೆ?

ಪ್ರಜಾಪ್ರಭುತ್ವದಲ್ಲಿ ವ್ಯಕ್ತಿ ಸ್ವಾತಂತ್ರ್ಯಕ್ಕವಕಾಶವಿರಬೇಕು ನಿಜ. ಆದರದು ಪ್ರತಿಗಾಮಿ ಸ್ವಾಚ್ಛಂದ್ಯವಾಗಬಾರದು. ಹತ್ತಾರು ವರ್ಷಗಳಿಂದ ಪಕ್ಷದಿಂದೊದಗಬಹುದಾದ ಸಕಲ ಸೌಭಾಗ್ಯಗಳನ್ನನುಭವಿಸಿ, ವಿಧಾನಸಭೆಗೋ ಸಂಸತ್ತಿಗೊ ಒಮ್ಮೆ ಸೀಟುಕೊಡಲಿಲ್ಲವೆಂದರೆ ಪಕ್ಷಾಂತರ ಮಾಡುತ್ತೇನೆಂದು ಹೆದರಿಸುವ, ಇಲ್ಲವೆ ಹೊಸ ಪಕ್ಷ ಕಟ್ಟುತ್ತೇನೆಂದು ಹರಿಹಾಯುವ ನಾಯಕರಿಂದ ಜನ ಏನುತಾನೆ ನಿರೀಕ್ಷಿಸಬಹುದು? ಕೊಟ್ಟ ಕುದುರೆಯನ್ನೇರಲಾರದವನು ಮತ್ತೊಂದು ಕುದುರೆಯನ್ನೇರುವುದುಂಟೆ? ಒಂದು ಪಕ್ಷ ಕಟ್ಟುವುದೆಂದರೆ ಸಾಮಾನ್ಯವೆ? ನೂರಾರು, ಸಾವಿರಾರು ಕೋಟಿ ಹಣ ಬೇಕಲ್ಲವೆ?

ತನ್ನ ಮುಖದ ಮಚ್ಚೆಯನ್ನು ಮುಚ್ಚಿಕೊಂಡು, ಬೇರೊಬ್ಬರ ಮುಖದ ಕಲೆಯ ಕಡೆಗೆ ಬೆರಳುಮಾಡಿ ತೋರಿಸುವವನು ಮೂರ್ಖನಲ್ಲವೆ? ಮೌಲ್ಯಗಳ ಬಗ್ಗೆ ಮಾತಾಡಲು ಅವನಿಗೆ ಹಕ್ಕಿದೆಯೆ? ಸೂಳೆ ಸೂಳೆಯನ್ನು ಛೇಡಿಸಿದಂತಾಗಿದೆ ಇಂಥವರ ಬಾಳು. ಕಪ್ಪು ಹಣದ ಸಂಗ್ರಹವಿಲ್ಲದ್ದರಿಂದ ಸುರಾಜ್ ಪಕ್ಷದ ಗತಿ ಏನಾಯಿತು?

ಹಿಂದಿನ ಪಕ್ಷಗಳಿಗೆ ಮೌಲ್ಯಾಧಾರಿತವಾದ ಸಿದ್ಧಾಂತಗಳ ರಕ್ಷೆಯಿತ್ತು; ಸ್ವಾರ್ಥತ್ಯಾಗ ಮತ್ತು ದೇಶಾಭಿಮಾನಗಳ ಸಂಜೀವಿನಿ ಶಕ್ತಿಯೂ ಇತ್ತು. ಅವುಗಳಲ್ಲೀಗಯಾವೊಂದು ಮೌಲ್ಯವೂ ಉಳಿದಿಲ್ಲ. ಆದ್ದರಿಂದಲೇ ಜನತೆ ಹನ್ನೊಂದನೆಯ ಲೋಕಸಭಾ ಚುನಾವಣೆಯಲ್ಲಿ ಆ ಎಲ್ಲ ಪಕ್ಷಗಳನ್ನು ನಿರ್ದಾಕ್ಷಿಣ್ಯವಾಗಿ ನಿಷ್ಠುರವಾಗಿ ತಿರಸ್ಕರಿಸಿತು; ಸಂಯುಕ್ತ ಪಕ್ಷಗಳ ಆಡಳಿತದ ಕಡೆಗೆ ಒಲವು ತೋರಿತು, ಹಿಂದಿನಿಂದ ಅಧಿಕಾರದ ರುಚಿಯನ್ನುಂಡ ನಿರಾಶಾಪೀಡಿತ ಪಕ್ಷವೊಂದು ಸಂಖ್ಯಾ ಬಾಹುಳ್ಯದ ಬಲದ ಮೇಲೆ, ಹೊರಗಿನಿಂದ ಬೆಂಬಲನೀಡುವ ಆಸೆ ತೋರಿಸಿ ತನ್ನ ಹಿಕಮತ್ತುಗಳಿಗೆ ಆಳುವವರಿಂದ ಒತ್ತಾಸೆ ದೊರೆಯದಿದ್ದಾಗ, ಬೆಂಬಲಹಿಂತೆಗೆದುಕೊಂಡಿದ್ದು ಸಹಜವೇ. ಆದರೆ ದೇಶಹಿತದ ದೃಷ್ಟಿಯಿಂದ ಅದೊಂದು ಪ್ರಲಯಾಘಾತವೇ ಸರಿ. ಹನ್ನೆರಡನೆಯ ಲೋಕಸಭಾ ಚುನಾವಣೆಯಲ್ಲಿಯೂ ಅಂಥದೇ ಸಂದಿಗ್ಧ ಪರಿಸ್ಥಿತಿಯೊದಗಿದರೆ ಆಶ್ಚರ್ಯಪಡಬೇಕಾಗಿಲ್ಲ.

ಇಷ್ಟಕ್ಕೆಲ್ಲ ಮುಖ್ಯ ಕಾರಣ, ಪಕ್ಷ ಅಥವಾ ಗುಂಪುಗಳ ಸಂಖ್ಯಾ ಬಾಹುಳ್ಯ. ಸಾಮಾನ್ಯವಾಗಿ ಇಂಥವು ಚುನಾವಣಾ ನಿಕಟಪೂರ್ವದಲ್ಲಿ ಪಾರ್ಥೇನಿಯಮ್ ಅಂತೆ ಹುಟ್ಟಿಕೊಂಡು, ರಾಜಕೀಯ ಕ್ಷೇತ್ರವನ್ನೆಲ್ಲ ಕಲುಷಿತಗೊಳಿಸುತ್ತವೆ. ಅವುಗಳಿಗೊಂದು ತತ್ತ್ವವಿಲ್ಲ, ಸಿದ್ಧಾಂತವಿಲ್ಲ, ಮೌಲ್ಯಾಧಾರವಂತು ಇಲ್ಲವೇ ಇಲ್ಲ. ಅಂಥವನ್ನು ಪಕ್ಷ ಎನ್ನುವುದಕ್ಕಿಂತ ಗುಂಪುಗಳೆಂದೇ ಕರೆಯಬಹುದು. ಇತ್ತೀಚಿನ ಪರಿಸ್ಥಿತಿಯನ್ನು ಅಧ್ಯಯನ ಮಾಡಿದಾಗ, ಅವು ಅತೃಪ್ತ ಪಕ್ಷಾಂತರಿಗಳ, ಶಕುನಿಗಳ, ಅವಕಾಶವಾದಿಗಳ, ಉಪಾಯವೇದಾಂತಿಗಳ, ಜಾತಿವಾದಿಗಳ, ನಿರುದ್ಯೋಗಿಗಳ, ಗುಳ್ಳೇನರಿಗಳ, ಆಯಾರಾಂ ಗಯಾರಾಂಗಳ ಕಲಸುಮೇಲೋಗರವೆಂದೇ ಹೇಳಬೇಕು. ಕ್ರಿಮಿನಲ್ ಅಪರಾಧಿಗಳೂ ಇಂಥ ಪಕ್ಷಗಳಲ್ಲಿ ನುಣುಚಿಕೊಳ್ಳುವ ಸಂಭವವುಂಟು.

ಇಂಥ ಅಪರಾಧಿಗಳು ಎಲ್ಲ ಪಕ್ಷಗಳಲ್ಲಿಯೂ ತುಂಬಿಕೊಂಡಿದ್ದಾರೆ. ಅಂಥವರ ಮೇಲೆ ಮೊಕದ್ದಮೆಗಳಿರುವಾಗ, ಚುನಾವಣೆಗೆ ನಿಲ್ಲಲು ಅವರಿಗವಕಾಶ ಕೊಡುವುದೇ ತಪ್ಪು. ಯಾವನಾದರೂ ಅಧಿಕಾರಿಯ ಮೇಲೆ ಕ್ಷುಲ್ಲಕ ಆಪಾದನೆಯಿರುವುದಾದರೆ ಅವನು ಬಡ್ತಿಯಿಂದ ವಂಚಿತನಾಗುವುದುಂಟಷ್ಟೆ. ನ್ಯಾಯದ ಕಣ್ಣಿನಲ್ಲಿ ಎಲ್ಲರೂ ಒಂದೆಯಲ್ಲವೆ? ಈ ತಾರತಮ್ಯವನ್ನು ನ್ಯಾಯಾಲಯವಾದರೂ ಗುರುತಿಸೀತೆ?

ಇತ್ತೀಚೆಗೆ ನ್ಯಾಯಾಂಗದ ಸಕ್ರಿಯಾತತ್ತ್ವದ ಬಗೆಗಿನ ಸಂಗತಿಗಳು ಹೊರ
ಬೀಳುತ್ತಿವೆ. ಈ ಕ್ರಿಯಾಶೀಲತೆಗೆ ಯಾರು ಕಾರಣ? ಕಾರ್ಯಾಂಗ ಶಾಸಕಾಂಗ
ಗಳೆಂಬುದಂತು ನಿಜ. ಅವು ನಿಷ್ಕ್ರಿಯವಾದಾಗ, ನಿರ್ವೀರ್ಯವಾದಾಗ, ನೀತಿ
ಬಾಹಿರವಾದಾಗ, ಭ್ರಷ್ಟಾಚಾರ ಪ್ರವೃತ್ತವಾದಾಗ ದೇಶದ ಹಿತದೃಷ್ಟಿಯಿಂದ
ನ್ಯಾಯಾಂಗ ಜಾಗ್ರತವಾಗಬೇಕಾದ್ದು ಸರಿಯೆ? ಕೆಲವು ತೀರ್ಪುಗಳನ್ನು
ನೋಡಿದಾಗ, ನ್ಯಾಯಾಂಗದ ಬೆನ್ನು ತಟ್ಟಬೇಕಾಗುತ್ತದೆ. ಆದರೆ ಅಲ್ಲಿರುವ
ಪ್ರಭೃತಿಗಳೂ ಈ ನೆಲದಲ್ಲಿ ಹುಟ್ಟಿ, ಇಲ್ಲಿಯ ನೀರು ಗಾಳಿಗಳನ್ನು ಸೇವಿಸಿ,
ಇಲ್ಲಿಯ ಪರಿಸರದಲ್ಲಿ ಬೆಳೆದವರುತಾನೆ. ಅವರಿಂದ ಯಾವಾಗಲೂ ಯಾವ
ಭೇದವೂ ಇಲ್ಲದೆ ಎಲ್ಲರಿಗೂ ಪಕ್ಷಪಾತ ದೂರವಾದ ನ್ಯಾಯ ದೊರಕುತ್ತದೆಯೆ
ಯೋಚಿಸಬೇಕಾಗಿದೆ. ಏಕೆಂದರೆ ನ್ಯಾಯಮೂರ್ತಿಗಳನ್ನು ಯಾರೂ ಟೀಕೆ
ಮಾಡುವಂತಿಲ್ಲ. ಮಾಡಿದರೆ, ಕೋರ್ಟುನಿಂದನೆಯ ಆಪಾದನೆಗೆ ಗುರಿಯಾಗ
ಬೇಕಾಗುತ್ತದೆ. ಆದರೆ ನ್ಯಾಯಮೂರ್ತಿ ಎಂ. ಎಫ್. ಸಾಲ್ಡಾನ ಮತ್ತು
ನ್ಯಾಯಮೂರ್ತಿ ಎಂ. ಬಿ. ವಿಶ್ವನಾಥ್ ಅವರನ್ನೊಳಗೊಂಡ ನ್ಯಾಯಪೀಠ
ಇತ್ತೀಚೆಗೆ ನೀಡಿದ ತೀರ್ಪು ಶ್ಲಾಘನೀಯವಾಗಿದೆ, ಪಕ್ಷಪಾತ ದೂರವಾಗಿದೆ
ಎಂದೇ ಹೇಳಬೇಕು (೨೩-೧-೯೮ ನೆಯ ದಿನಾಂಕದ ಟೈಮ್ಸ್ ಆಫ್
ಇಂಡಿಯಾ ಪತ್ರಿಕೆ). ಆ ತೀರ್ಪಿನ ಸಾರಾಂಶವಿಷ್ಟು: ನ್ಯಾಯಾಧೀಶರು ದಂತ
ಗೋಪುರದಲ್ಲಿ ವಾಸಿಸುತ್ತಿಲ್ಲ. ಕ್ಷುದ್ರವೂ ದುರುದ್ದೇಶ ಪೂರಿತವೂ ಮಾತ್ಸರ್ಯ
ಯುತವೂ ಆದ ಧಾಳಿಯಿಂದ ಕೋರ್ಟುಗಳನ್ನು ರಕ್ಷಿಸುವುದಗತ್ಯವಾದರೂ,
ನ್ಯಾಯಬದ್ಧವೂ, ಸದುದ್ದೇಶಪೂರಿತವೂ, ಸತ್ಯಯುಕ್ತವೂ ಆದ ಟೀಕೆ
ಯನ್ನು ಪ್ರತಿಷೇಧಿಸಲಾಗದು. ನ್ಯಾಯಾಧಿಪತಿಗಳನ್ನು ಒರೆಹಚ್ಚುವ
ಕೆಲಸವೂ ಆಗಬೇಕು. ಇಂಥ ಅವಕಾಶವನ್ನು ಬಳಸಿಕೊಳ್ಳುವುದು ಎಷ್ಟು
ಜನಕ್ಕೆ ಸಾಧ್ಯವೋ ಕಾಣೆ.

ಈಗಂತು ಶುದ್ಧ ಸಮಾಜವಾದಿಗಳೂ ಇಲ್ಲ, ಸಾಮ್ಯವಾದಿಗಳೂ ಇಲ್ಲ, ಗಾಂಧಿ
ವಾದಿಗಳೂ ಇಲ್ಲ, ರಾಷ್ಟ್ರೀಯವಾದಿಗಳೂ ಇಲ್ಲ; ಸರ್ವೋದಯವಾದಿಗಳೂ
ವಿರಳ. ಎಲ್ಲಿನೋಡಿದರೂ ಖೋಟಾನಾಣ್ಯಗಳೇ ಚಾಲ್ತಿಯಲ್ಲಿವೆ; ಎತ್ತ ಕಡೆ
ಕಣ್ಣು ಹರಿಸಿದರೂ ಜಾತಿವಾದಿ, ಅವಕಾಶವಾದಿಗಳೆ ಕಾಣುತ್ತಾರೆ. ಎಂದೋ
ಮಹಾಕವಿ ಸಾರಿದರು: ಈ ದೇಶಕ್ಕೆ ಕಮ್ಯೂನಿಸಮ್ ಬಂದರೂ ಅದಕ್ಕೆ
ನಾಮ ಹಾಕುತ್ತೇವೆ, ಮುದ್ರೆಯೊತ್ತುತ್ತೇವೆ, ಕ್ರಾಸು ತಗುಲಿಸುತ್ತೇವೆ,
ಜನಿವಾರ ಶಿವದಾರ ಕಟ್ಟುತ್ತೇವೆ ಎಂದು. ಜಾತಿವಾದಿಗಳಾರೆಂಬುದನ್ನು,
ಯಾರ ಯಾರ ಮನೋಧರ್ಮ ಎಂಥದೆಂಬುದನ್ನು ಪಕ್ಷಾಂತರ ಅಥವಾ
ಪಕ್ಷಮೈತ್ರಿಯಂಥ ಬೀಯಗ ಸಂಬಂಧದಿಂದಲೇ ಅರಿಯಬಹುದು.

ಚುನಾವಣೆಯ ಕಾಲದಲ್ಲಿ ಕಣ್ಣಿಗೆ ರಾಚುವಷ್ಟು ಕಿವಿಗೆ ಗಡಚಿಕ್ಕುವಷ್ಟು
ಪ್ರಣಾಳಿಕೆಗಳು ಹೊರ ಬೀಳುತ್ತವೆ. ಅವನ್ನು ಯಾರೂ ಗಂಭೀರವಾ

ಪರಿಗಣಿಸಬೇಕಾಗಿಲ್ಲ. ಏಕೆಂದರೆ ಚುನಾವಣೆಯ ಪ್ರಣಾಳಿಕೆಯೇ ಬೇರೆ, ಆಡಳಿತದ ವೈಖರಿಯೆ ಬೇರೆ. ಒಂದು ಸಿದ್ಧಾಂತ, ಮತ್ತೊಂದು ಪ್ರಯೋಗ, ಎರಡಕ್ಕೂ ಯೋಜನಾಂತರ. ಪತ್ರಿಕೆಗಳಲ್ಲಿ ಪ್ರಕಟವಾಗುವ, ವೇದಿಕೆಗಳಲ್ಲಿ ಸಾರುವ, ದೂರದರ್ಶನ ಆಕಾಶವಾಣಿಗಳಲ್ಲಿ ಕೇಳಿಸುವ ತೆಗಳಿಕೆ ಹೊಗಳಿಕೆಗಳನ್ನು ಸ್ವಪಕ್ಷ ಸ್ವಪ್ರಶಂಸೆಯನ್ನು ನಂಬಬಾರದು ; ಅಲಂಕಾರಯುತವಾದ ಭಾಷಣಗಳಿಗೆ ವಾಕ್ಪಟುತ್ವಗಳಿಗೆ ಮರುಳಾಗಬಾರದು. ಜಾತಿಗಳ ಮೇಲೆ ಜಾತಿಗಳನ್ನೆತ್ತಿ ಕಟ್ಟಿ, ತಮ್ಮ ಬೇಳೆಯನ್ನು ಬೇಯಿಸಿಕೊಳ್ಳುವ ರಾಜಕೀಯ ವ್ಯಭಿಚಾರಿಗಳ ಕುತಂತ್ರಗಳ ಮೋಹಕ ಕಪಟಶಬ್ದ ಜಾಲಕ್ಕೆ ಮಾರುಹೋಗಬಾರದು. ಬೆಕ್ಕುಗಳಿಗೆ ಕಜ್ಜಾಯ ಹಂಚಿದ ಮಂಗನಂಥ ಜನರಲ್ಲಿ ವಿಶ್ವಾಸವಿಡಬಾರದು. ಬಲಿಗಾಗಿ ಮೇಕೆಯನ್ನು ಹೊತ್ತೊಯ್ಯುತ್ತಿದ್ದ ಪಂಚತಂತ್ರದ ಬ್ರಾಹ್ಮಣನನ್ನು ಮೋಸಗೊಳಿಸಿದ ನಾಲ್ವರು ಚೋರರಂಥವರು ಎಲ್ಲೆಲ್ಲಿಯೂ ಇದ್ದಾರೆ.

ಇಂದಿನ ಇಂಡಿಯಾ ದೇಶದ ಪರಿಸ್ಥಿತಿಯನ್ನು ಗಮನಿಸಿದಾಗ ರಾಜ್ಯಾಂಗದಲ್ಲಿ ಹಾಗೂ ಆಡಳಿತ ನೀತಿಯಲ್ಲಿ ಕೆಲವು ಬದಲಾವಣೆಗಳು ಅತ್ಯಗತ್ಯವೆಂದು ತೋರದಿರಲಾರದು. ಮತದಾರರ ಮತ್ತು ಉಮೇದುವಾರರ ಗಮನವನ್ನು ಆ ಕಡೆಗೆ ಸೆಳೆಯಬಹುದಾಗಿದೆ. ವೈವಿಧ್ಯಬಾಹುಳ್ಯವುಳ್ಳ ಈ ದೇಶದಲ್ಲಿ ಸಂಯುಕ್ತ ರಾಜ್ಯ ವ್ಯವಸ್ಥೆ ಅನಿವಾರ್ಯ. ಏಕ ರೀತಿಯ ಎರಕದಿಂದ, ಕಠಿನ ಲೋಹ ವ್ಯವಸ್ಥೆಯಿಂದ, ಅನಮ್ಯ ಕೇಂದ್ರೀಕರಣದಿಂದ ಸೃಜನಶೀಲತೆಗೆ ಭಂಗ ಬರುತ್ತದೆ, ಸ್ವಾತಂತ್ರ್ಯಕ್ಕೆ ಧಕ್ಕೆಯೊದಗುತ್ತದೆ, ಪ್ರತಿಭಾವಿಕಾಸಕ್ಕೆ ಅಂಕುಶ ಪ್ರಯೋಗವಾಗುತ್ತದೆ, ಅತೃಪ್ತಿ ಅಸಮಾಧಾನಗಳಿಗೆ ಎಡೆಯಾಗುತ್ತದೆ. ಕೆಲವೇ ಕೆಲವು ಅತ್ಯಗತ್ಯವಾದ ಖಾತೆಗಳನ್ನು ಕೇಂದ್ರ ಸರಕಾರ ತನ್ನ ಅಧೀನದಲ್ಲಿಟ್ಟುಕೊಳ್ಳುವುದಲ್ಲದೆ, ರಾಜ್ಯಗಳು ಕೇಂದ್ರದಿಂದ ಸಿಡಿದು ಹೋಗದಂತೆ ಕಾನೂನನ್ನು ಬಲಪಡಿಸಿ, ಅವುಗಳಿಗೆ ಸ್ವಾಯತ್ತತೆಯನ್ನು ನೀಡುವುದರಿಂದ, ಕೇಂದ್ರ ರಾಜ್ಯಗಳೆರಡರ ಭದ್ರತೆಯನ್ನು ಕಾಯ್ದುಕೊಳ್ಳಬಹುದಾಗಿದೆ. ಆಗ ಕೇಂದ್ರ ತನ್ನ ಹಲವು ತಲೆನೋವುಗಳನ್ನು ರಾಜ್ಯಗಳಿಗೆ ವರ್ಗಾಯಿಸಿ, ತಾನು ಸಾಕ್ಷಿಭೂತವಾಗಿದ್ದುಕೊಂಡು ರಾಜ್ಯಗಳ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸಬಹುದಲ್ಲದೆ, ತಾನು ವಹಿಸಿಕೊಂಡ ಖಾತೆಗಳನ್ನು ದಕ್ಷತೆಯಿಂದ ನಿರ್ವಹಿಸಬಹುದು. ಇಂಥ ವ್ಯವಸ್ಥೆಯಿಂದ ದ್ವಿಪ್ರತಿಯ ಸಮಾನಾಂತರ ಆಡಳಿತ ತಪ್ಪಿ ಖರ್ಚು ಕಡಿಮೆಯಾಗುತ್ತದೆ. ವಿಕೇಂದ್ರೀಕರಣವೆ ನಿಜವಾದ ಪ್ರಜಾಪ್ರಭುತ್ವವೆಂಬುದನ್ನು ಮರೆಯಲಾಗದು.

ಚುನಾವಣಾವಿಧಿನಿಯಮಗಳಲ್ಲಂತು ಸಾಕಷ್ಟು ಬದಲಾವಣೆಗಳು ಅತ್ಯಗತ್ಯ. ಪಕ್ಷಗಳು ಹೆಚ್ಚಾದಷ್ಟು ಗೊಂದಲ ಜಾಸ್ತಿ, ಖರ್ಚು ಅಪಾರ. ಈ ದೇಶಕ್ಕೆ

ನಾಲ್ಕೈದು ರಾಷ್ಟ್ರೀಯ ಪಕ್ಷಗಳು, ಒಂದೆರಡು ಪ್ರಾದೇಶಿಕ ಪಕ್ಷಗಳು ಸಾಕು. ಪಕ್ಷಗಳ ಮಾನ್ಯತೆಗೆ ಸಂಬಂಧಿಸಿದ ನಿಯಮಗಳು ಸಾಕಷ್ಟಿವೆ. ಅವುಗಳ ಜತೆಗೆ ಕಾಲಕ್ಕನುಗುಣವಾಗಿ ಅಧಿನಿಯಮಗಳನ್ನು ರಚಿಸಬೇಕಾಗುತ್ತದೆ. ಒಂದು ಪಕ್ಷ ಮಾನ್ಯತೆ ಪಡೆಯಲು ಚುನಾವಣೆಗೆ ಪೂರ್ವದಲ್ಲಿ ಮೂರು ವರ್ಷವಾದರೂ ಅಸ್ತಿತ್ವದಲ್ಲಿರಬೇಕು. ಅವಕ್ಕೆ ಸಾಮಾಜಿಕಾರ್ಥಿಕ ಸಾಂಸ್ಕೃತಿಕ ಸಿದ್ಧಾಂತಗಳು ಆಧಾರವಾಗಿರಬೇಕು. ಪಕ್ಷಾಂತರಿಗಳು ಕೊನೆಯ ಪಕ್ಷ ಮೂರು ವರ್ಷ ಯಾವ ಚುನಾವಣೆಗೂ ನಿಲ್ಲದಂತೆ ತಡೆಯೊಡ್ಡಬೇಕು. ಪಕ್ಷದಿಂದ ವಜಾ ಆದವರು ಮತ್ತೆ ಚುನಾವಣೆಗೆ ನಿಂತು ಪರಿಣಾಮವನ್ನೆದುರಿಸುವಂತಾಗಬೇಕು. ಧ್ರುವೀಕರಣ ತತ್ತ್ವಗಳ ಆಧಾರದ ಮೇಲೆ ಆಗಬೇಕೇ ಹೊರತು, ವ್ಯಕ್ತಿಮೂಲ, ಜಾತಿಮೂಲ ಧ್ರುವೀಕರಣ ತಪ್ಪುವಂತಾಗಬೇಕು. ವೋಟು ಮಾಡದಿದ್ದವರು ಹನ್ನೆರಡು ವರ್ಷ ವೋಟಿನ ಹಕ್ಕನ್ನು ಕಳೆದುಕೊಳ್ಳುವಂತಾಗಬೇಕು. ಚುನಾವಣೆಯಲ್ಲಿ ಗೆದ್ದ ಕೂಡಲೇ ದೆಹಲಿಯ ಸೋಮಾರಿ ಪೀಠದಲ್ಲಿ ಪಟ್ಟಾಂಗ ಹೊಡೆಯುತ್ತ ಕುಳಿತುಕೊಳ್ಳುವವರ, ಶ್ರೀಸಾಮಾನ್ಯರ ಜತೆ ಆಗಾಗ್ಗೆ ಬೆರೆತು ಅವರ ಕಷ್ಟನಿಷ್ಠುರಗಳನ್ನು ವಿಚಾರಿಸದ, ಧಿಮಾಕಿನಿಂದ ವರ್ತಿಸುತ್ತ, ವೈಭವ ಜೀವನವನ್ನು ನಡೆಸುವ, ತನ್ನ ಕ್ಷೇತ್ರವನ್ನು ಅಭಿವೃದ್ಧಿ ಪಡಿಸದ ಜನರಿಗೆ ಸ್ವಪಕ್ಷದವನಾದರೂ ವೋಟು ಹಾಕದೆ, ಅವನಿಗೆ ಸರಿಯಾಗಿ ಬುದ್ಧಿ ಕಲಿಸಬೇಕು. ಒಬ್ಬನಿಗೆ ಕಲಿಸಿದ ಬುದ್ಧಿ ಇತರರಿಗೂ ಮಾದರಿಯಾಗಬೇಕು.

'ಮನುಷ್ಯ ಜಾತಿ ತಾನ್ನೊಂದೆ ವಲಂ' ಎಂದು ಹಿಂದೆ ಪಂಪ ಹೇಳಿದ. ಅಂತೆಯೇ ರಾಜಕೀಯ ಜಾತಿ ತಾನೊಂದೆ ವಲಂ ಎಂದು ಇಂದು ಹೇಳಬೇಕಾಗಿದೆ. ಮೌಲ್ಯಗಳೆಲ್ಲ ದಿವಾಳಿಯೆದ್ದಿವೆ, ನಿಜ. ಆದರೂ ತರತಮ ಗುಣಗಳಿದ್ದೀ ಇವೆಯಲ್ಲವೆ? ಇದ್ದವರಲ್ಲಿ ಉತ್ತಮರನ್ನು ಆರಿಸಿಕೊಳ್ಳಬೇಕಾಗಿದೆ. ಮತದಾರರೆಲ್ಲರೂ ತಪ್ಪದೆ ವೋಟು ಚಲಾಯಿಸುವುದಾದರೆ ಲೋಕಸಭೆಯನ್ನು ಅತಂತ್ರ ಪರಿಸ್ಥಿತಿಯಿಂದ ಪಾರು ಮಾಡಬಹುದೆಂದು ತೋರುತ್ತದೆ. ಪಾರು ಮಾಡೆಮ್ಮನೀ ಚುನಾವಣೆಯ ಪೂತನಿಯಿಂದ ಎಂದು, ಕಡೆಗಾದರೂ ಭಾರತದಲ್ಲಿ ಹಾಲು ಜೇನಿನ ಹೊಳೆ ಹರಿಯಲಿ ಎಂದು ಆಶಿಸೋಣವೆ!

ದೇಜಗೌ

ಸಂಗೀತ ಸಾಮ್ರಾಜ್ಞಿ ಭಾರತರತ್ನ ಎಂ. ಎಸ್. ಸುಬ್ಬುಲಕ್ಷ್ಮಿ

ಡಾ॥ ಕೆ. ಶ್ರೀಕಂಠಯ್ಯ
೪೯೪, ಜಯನಗರ ಒಂದನೆಯ ಬ್ಲಾಕ್,
ಬೆಂಗಳೂರು-೫೬೦೦೧೧

ಉತ್ಕೃಷ್ಟ ಸಂಗೀತ ಮಾಧುರ್ಯದೀಪ್ತವೂ ಶಾರೀರಸುಪುಷ್ಟವೂ ಆಗಿದ್ದು ಶ್ರಾವಕನಿಗೆ ಸೌಖ್ಯದಾಯಕವಾಗಿರಬೇಕು. ಮಾಧುರ್ಯ (ಎಂ), ಶಾರೀರ (ಎಸ್) ಮತ್ತು ಸೌಖ್ಯ (ಎಸ್) ಸಂಲಯಿಸಿ ವ್ಯಕ್ತ ಸಂಗೀತಪವಾಡವೂ ಜೀವಂತ ದಂತ ಕಥೆಯೂ ಆಗಿ ಅರಳಿರುವವರು ಮತ್ತು ಪರಿಮಳಿಸುತ್ತಿರುವವರು ಮಧುರೆ (ಎಂ) ಸುಬ್ರಹ್ಮಣ್ಯಅಯ್ಯರ್ (ಎಸ್) ಸುಬ್ಬುಲಕ್ಷ್ಮಿ (೧೧ ಅಕ್ಟೋಬರ್ ೧೯೧೬). ತಾಯಿ ಷಣ್ಮುಖವಡಿವು ಶ್ರೇಷ್ಠ ದರ್ಜೆಯ ವೀಣಾ ವಿದುಷಿ. ಈಕೆಯೇ ಮಗಳ ಮೊದಲ ಗುರು ಹೀಗೆ ಅನುವಂಶಿಕವಾಗಿ ದತ್ತವಾದ ಸಂಗೀತ ವಿಭವಕ್ಕೆ ಮಧುರಾನಗರದ (ತಮಿಳುನಾಡು) ಉತ್ತೇಜಕ ಪರಿಸರ ಸಶಕ್ತ ಪೋಷಣೆ ಊಡಿ ಈ ಬಾಲ ಪ್ರತಿಭೆ ಕುಞ್ಞಮ್ಮ (ಬಂಧುಬಾಂಧವರಿಗೆ ಇವರು ನಲ್ಮೆಯ ಕುಞ್ಞಿಅಮ್ಮ) ಜಗದಗಲ ಎಂ. ಎಸ್. ಎಂದು ಪ್ರಖ್ಯಾತರಾದರು.

ಯಶಸ್ವೀ ಮಹಿಳೆಯ ಹಿನ್ನೆಲೆಯಲ್ಲಿ ತ್ಯಾಗಮಯಿ ಮಹಿಳೆಯ ನಿಃಸ್ವಾರ್ಥ ಪ್ರೀತಿ ಇರುವುದೆಂದು ಹೇಳುವುದುಂಟು. ಈ ಭಾವದ ಉತ್ತರಾರ್ಧ: ಯಶಸ್ವೀ ಸ್ತ್ರೀಗೆ ಆಧಾರ ಸ್ತಂಭವಾಗಿ ಕರ್ತವ್ಯನಿಷ್ಠ ಪುರುಷನ ನಿರ್ವ್ಯಾಜ ಅಂತಃಕರಣ ಇರುವುದು. ಎಂ ಎಸ್ ಜೀವನದಲ್ಲಿ ಪತಿ ಟಿ. ಸದಾಶಿವನ್ (೧೯೯೭ ರಲ್ಲಿ ನಿಧನರಾದರು) ಈ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ: "ಅವರೇ ನನ್ನ ಸರ್ವಸ್ವ—ಪತಿ, ಮಿತ್ರ, ಮಾರ್ಗದರ್ಶಕ ಮತ್ತು ಕಾರ್ಯನಿಯಂತ್ರಕ." ಒಮ್ಮೆ ಸದಾಶಿವನ್ ಹೇಳಿದರು: "ನನ್ನ ಅಪಾರ ಸಾರ್ವಜನಿಕ ಸಂಪರ್ಕ ಪ್ರಭಾವದಿಂದ ಸುಬ್ಬುಲಕ್ಷ್ಮಿ ಪ್ರಸಿದ್ಧಿ ಗಳಿಸಿದಳು ಎಂದು ಕೆಲವರು ಹೇಳುವುದುಂಟು. ಇದು ಪೂರ್ತಿ ತಪ್ಪು. ನನ್ನ ಪಾತ್ರ ಏನಿದ್ದರೂ ಅದು ಈಕೆಯ ಸಂಗೀತ ಗುಣಮಟ್ಟವನ್ನೂ ನೈಜ ಸಾಮರ್ಥ್ಯವನ್ನೂ ರಕ್ಷಿಸಿ ಪೋಷಿಸುವಷ್ಟಕ್ಕೆ ಮಾತ್ರ ಸೀಮಿತ. ಸ್ವಂತ ವ್ಯಕ್ತಿತ್ವದ ಶ್ರೇಷ್ಠತೆ ಮತ್ತು ಅತಿ ನಿಷ್ಠುರ ಸಾಧನೆ ಬೆಸುಗೆಗೊಂಡು ಕುಞ್ಞಮ್ಮಾಳ್ ಯಶಸ್ಸಿನ ಏಣಿಯಲ್ಲಿ ಮೇಲೆ ಮೇಲೆ ಹೋಗುತ್ತಿದ್ದಾಳೆ. ಈ ೮೦ ರ ಇಳಿ ಹರೆಯದಲ್ಲಿಯೂ ಈಕೆ ಸಂಗೀತವನ್ನು ಯುವ ವಿದ್ಯಾರ್ಥಿಯಂತೆ ದಿನವೊಂದರ ಕನಿಷ್ಠ ೪ ತಾಸು ತಾಲೀಮು ಮಾಡುತ್ತಾಳೆ."

ಕರ್ನಾಟಕ ಸಂಗೀತ ದಾಸೋಹದ ("ಕೊಡುವರಲಿ ನಿನ್ನಂಥ ಪ್ರಭುವಿಲ್ಲ!") ಮೂಲಕ ಭಾರತೀಯ ಸಂಸ್ಕೃತಿಯನ್ನು ಪ್ರಪಂಚಾದ್ಯಂತ ಬಿತ್ತರಿಸಿದ ಈ ಗಾನ ಕೋಗಿಲೆಗೆ ಭಾರತ ಸರ್ಕಾರ "ಭಾರತರತ್ನ" ಪ್ರಶಸ್ತಿ ಪ್ರದಾನಿಸಿರುವುದು ಅರ್ಹತೆಗೆ ಸಂದ ಸಹಜ ಪುರಸ್ಕಾರ.

ಮದ್ರಾಸಿನಲ್ಲಿ ನಡೆದ ಒಂದು ದ್ದರು. ಎಂ. ಎಸ್. ಸುಬ್ಬುಲಕ್ಷ್ಮಿಯವರ ಸಂಗೀತೋತ್ಸವಕ್ಕೆ ಪಂಡಿತ ನೆಹರು ಅವರು ಕಛೇರಿ ಏರ್ಪಾಟಾಗಿತ್ತು. ನೆಹರೂರವರು ಮುಖ್ಯ ಅತಿಥಿಗಳಾಗಿ ಆಹ್ವಾನಿತರಾಗಿ ಆ ಸಂದರ್ಭದಲ್ಲಿ ಸುಬ್ಬುಲಕ್ಷ್ಮಿಯವರನ್ನು

ಕುರಿತು ನಾಲ್ಕು ಮಾತನ್ನು ಆಡಬೇಕಾಗಿ ದ್ದರಿಂದ ಎದ್ದು ನಿಂತು "ಆಫ್ಟರ್ ಆಲ್ ಐ ಆ್ಯಮ್ ಎ ಪ್ರೈಮ್ ಮಿನಿಸ್ಟರ್ ವಾಟ್ ಕೆನ್ ಐ ಸ್ಪೀಕ್ ಆನ್ ದಿ ಕ್ವೀನ್ ಆಫ್ ಮ್ಯೂಸಿಕ್" ಎಂದು ತಮ್ಮ ಸಹಜ ಸುಂದರ ಸುಮಧುರ ಧ್ವನಿಯಲ್ಲಿ ರಾಜ ಗಾಂಭೀರ್ಯದಿಂದ ನುಡಿದರು. ಆಗ ಸಭಿಕರು ಕಿವಿಗಡಚಿಕ್ಕುವಂತೆ ತಟ್ಟಿದ ಅವ್ಯಾಹತ ಚಪ್ಪಾಳೆ, ಸ್ವಾಮಿ ವಿವೇಕಾನಂದರು ಚಿಕಾಗೋದಲ್ಲಿ ಸರ್ವಧರ್ಮ ಸಮ್ಮೇಳನ ಸದಸ್ಯರನ್ನು ಉದ್ದೇಶಿಸಿ ಪ್ರಾರಂಭದಲ್ಲಿ ಆಡಿದ "ಅಮೆರಿಕದ ಸೋದರ ಸೋದರಿ ಯರೇ" ಎಂಬ ಮೋಡಿಯ ಮಾತುಗಳಿಗೆ ಮಾರುಹೋದ ಅಮೇರಿಕದ ಜನತೆ, ತಟ್ಟಿದ ಅವ್ಯಾಹತ ಚಪ್ಪಾಳೆಯು, ಐತಿಹಾಸಿಕ ನೆನಪನ್ನು ತರುವಂತಿತ್ತು.

"ನಾನೊಬ್ಬ ಕೇವಲ ಪ್ರಧಾನ ಮಂತ್ರಿ. ಈ ಸಂಗೀತ ಸಾಮ್ರಾಜ್ಞಿಯ ಬಗ್ಗೆ ನಾನು ಏನು ತಾನೆ ಮಾತನಾಡಬಲ್ಲೆ"— ನೆಹರೂರವರ ಈ ಮಾತುಗಳು ಮೆಲುಕು ಹಾಕುವಂತಹ ಮುತ್ತಿನಂತಹ ಮಾತು ಗಳು. ಸುಬ್ಬುಲಕ್ಷ್ಮಿಯವರ ಘನ ವ್ಯಕ್ತಿ ತ್ವವನ್ನು ಮುಗಿಲಿಗೇರಿಸುವಂತಹುದು. ಹೌದು, ಸುಬ್ಬುಲಕ್ಷ್ಮಿಯವರ ಘನ ವ್ಯಕ್ತಿತ್ವ ಮೆರೆದು ಕೀರ್ತಿ ಪತಾಕೆ ನಿಜಕ್ಕೂ ಮುಗಿಲಿಗೇರಿತು. ಅದು ೧೯೬೬ ರಲ್ಲಿ.

೧೯೬೬ ರಲ್ಲಿ ವಿಶ್ವಸಂಸ್ಥೆಯ ಆಹ್ವಾನದ ಮೇಲೆ ಅಮೆರಿಕಾಕ್ಕೆ ತೆರಳಿ, ಅಲ್ಲಿ ವಿಶ್ವ ಸಂಸ್ಥೆಯ ಸರ್ವಸದಸ್ಯರ ಸಭೆಯ ಮುಂದೆ (ಯು. ಎನ್. ಜನರಲ್ ಅಸೆಂಬ್ಲಿ) ಸುಬ್ಬುಲಕ್ಷ್ಮಿಯವರು ನಡೆಸಿದ ಸಂಗೀತ ಕಛೇರಿಯ ಎಲ್. ಪಿ. ಧ್ವನಿಮುದ್ರಿಕೆ ಗಳನ್ನು ಕೇಳಿದರೆ ಈಗಲೂ ಆ ಗಾನ ಸರಸ್ವತಿಯ ನಾದ ಸುಧಾರಸವನ್ನು ಪಾನ ಮಾಡಿದ ಪಾಶ್ಚಾತ್ಯರು, ತುಂಬು ಹೃದಯ ದಿಂದ ತಟ್ಟಿದ ಅವ್ಯಾಹತವಾದ ಚಪ್ಪಾಳೆ ನಮ್ಮ ನೆನಪಿಗೆ ಬರುವುದು. ಆಗ ಯು. ಎನ್. ಒ. ಸೆಕ್ರೆಟರಿ-ಜನರಲ್ ಆಗಿದ್ದ ಊ ಥಾಂಟ್ ಅವರು, ವಿಶ್ವಸಂಸ್ಥೆಯ ಸಭಿಕರಿಗೆ ಶ್ರೀಮತಿ ಸುಬ್ಬುಲಕ್ಷ್ಮಿಯ ವರನ್ನು ಪರಿಚಯಿಸುತ್ತಾ "ಇವರು ಭಾರತದ ಒಬ್ಬ ಅತ್ಯಂತ ಸುಪ್ರಸಿದ್ಧ ಗಾಯಕಿ" ಎಂದು ಮುಕ್ತಕಂಠದಿಂದ ಪ್ರಶಂಸಿಸಿದರು. ವಿಶ್ವಸಂಸ್ಥೆಯಲ್ಲಿ ಭಾರತದ ಪರವಾಗಿ ಮಾತನಾಡಿದ ನರಸಿಂಹನ್ ರವರು, ಸುಬ್ಬುಲಕ್ಷ್ಮಿಯವರು ಹಾಡ ಲಿರುವ ಕೃತಿಗಳ ಕಿರುಪರಿಚಯವನ್ನು ಮಾಡಿಕೊಟ್ಟರು.

ಆ ಸಂದರ್ಭಕ್ಕೆಂದೇ ರಾಜಾಜಿಯವರು ರಚಿಸಿಕೊಟ್ಟ ಒಂದು ಇಂಗ್ಲಿಷ್ ಗೀತೆ ಯನ್ನೂ ಅಲ್ಲಿನವರ ನೆರವಿನಿಂದ ಕಡೆಯಲ್ಲಿ ಹಾಡಿ ಪಾಶ್ಚಾತ್ಯರ ಪ್ರಶಂಸೆಗೆ ಒಳಗಾದರು. ಕರ್ನಾಟಕ ಸಂಗೀತ ಪಿತಾಮಹರಾದ ಪುರಂದರದಾಸರ 'ಜಗದೋದ್ಧಾರನಾ' ವನ್ನು ಹಾಡಿ, ದಾಸರ ಕೀರ್ತಿಯನ್ನು ಸಾಗರದಾಚೆಗೂ ಮುಟ್ಟಿಸಿದ್ದಲ್ಲದೆ, ಶ್ರೀ ಜಯಚಾಮರಾಜ ಒಡೆಯರ ನಾದ ನಾಮಕ್ರಿಯ ರಾಗದ 'ಶಿವಶಿವ ಶಿವಭೋ' ಎಂಬ ಕೀರ್ತನೆಯನ್ನೂ ಹಾಡಿ ಮೈಸೂರು ಮಹಾರಾಜರ ಹೆಸರನ್ನೂ ಮೆರೆಸಿದರು. 'ಸರೋಜದಳ ನೇತ್ರಿ' ಎಂಬ ಶಂಕರಾಭರಣ ರಾಗದ ಶ್ಯಾಮಾಶಾಸ್ತ್ರಿಗಳ ಕೀರ್ತನೆಯನ್ನು ವಿಸ್ತಾರವಾಗಿ ಹಾಡಿ ಪಿಟೀಲಿನವರಿಗೂ ಘಟ ಮೃದಂಗದವರಿಗೂ ತನಿಗೆ ಅವಕಾಶ



ಭಾರತರತ್ನ ಎಂ. ಎಸ್. ಸುಬ್ಬುಲಕ್ಷ್ಮಿ

ನೀಡಿ ಆ ವಾದ್ಯಗಳ ಸೊಬಗನ್ನೂ ಪಾಶ್ಚಾತ್ಯರು ಅನುಭವಿಸುವಂತೆ ಮಾಡಿದರು. ಮೃದಂಗದವರಿಗೆ ತನಿಬಿಟ್ಟಾಗ ಮೇಲಿಂದ ಮೇಲೆ ಚಪ್ಪಾಳೆಗಳ ಸುರಿಮಳೆಯಾಯಿತು.

ಸುಬ್ಬುಲಕ್ಷ್ಮಿಯವರ ಮೊದಲ ವಿದೇಶ ಪ್ರವಾಸ ೧೯೬೩ರಲ್ಲೇ ಪ್ರಾರಂಭವಾಯಿತು. ಎಡಿನ್‌ಬರೋ ಅಂತಾರಾಷ್ಟ್ರೀಯ ಉತ್ಸವದಲ್ಲಿ ಪಾಲುಗೊಳ್ಳಲು ತಮ್ಮ ಹಿರಿಯ ಸಾಕು ಮಗಳು ರಾಧಾ ಅವರೊಂದಿಗೆ ಐರೋಪ್ಯ ಪ್ರವಾಸವನ್ನು ಕೈಗೊಂಡರು. ಸುಬ್ಬುಲಕ್ಷ್ಮಿಯವರ ಕಛೇರಿಗಳಲ್ಲಿ ರಾಧಾ ಸದಾ ತಂಬೂರಿ ಶ್ರುತಿ ಹಿಡಿಯುವುದರಲ್ಲಿ ಪಾಲುಗೊಳ್ಳಲು ಅವರ ಜೊತೆಯಲ್ಲೆ ಎಲ್ಲ ಪ್ರವಾಸಗಳಲ್ಲೂ ಇರುತ್ತಾರೆ.

ಚಿತ್ರೋತ್ಸವದಲ್ಲಿ ಸುಬ್ಬುಲಕ್ಷ್ಮಿ ಅವರು ನಡೆಸಿದ ಎರಡು ಕಾರ್ಯಕ್ರಮಗಳು ತುಂಬ ಯಶಸ್ವಿಯಾಗಿ, ವಿದೇಶಿ ಪತ್ರಿಕೆಗಳು ಭಾರತದಿಂದ ಬಂದಿರುವ ಈ ಸಾಂಸ್ಕೃತಿಕ ರಾಯಭಾರಿಯನ್ನು ಮುಕ್ತ ಕಂಠದಿಂದ ಪ್ರಶಂಸಿಸಿದುವು. ಯುರೋಪಿನ ಇನ್ನೂ ಅನೇಕ ಕಡೆ ಇವರ ಕಾರ್ಯಕ್ರಮಗಳು ನಡೆದು ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್ನಿನಲ್ಲಿ (ಬಿಬಿಸಿ) ಇವರ ಹಾಡುಗಳನ್ನು ಧ್ವನಿಮುದ್ರಿಸಿಕೊಳ್ಳಲಾಯಿತು.

ಭಾರತಕ್ಕೆ ಹಿಂತಿರುಗುವಾಗ ಸುಬ್ಬುಲಕ್ಷ್ಮಿಯವರು ಕೈರೋಕ್ಕೆ ನೀಡಿದ ಭೇಟಿ 'ಅದೊಂದು ಸ್ಮರಣೀಯ ಭೇಟಿ' ಎಂದು ಅವರೇ ಸ್ಮರಿಸುತ್ತಾರೆ. ಓಂ ಕುಸುಮ್ ಎಂಬ ಈಜಿಪ್ಟಿನ ಸುಪ್ರಸಿದ್ಧ ಗಾಯಕರೊಂದಿಗೆ ನಡೆದ ಭೇಟಿ ಚಿರಸ್ಮರಣೀಯವಾದುದೆಂದು ಸುಬ್ಬುಲಕ್ಷ್ಮಿಯವರು ಆ ಭೇಟಿಯ ಕುರುಹಾಗಿ ಓಂ ಕುಸುಮರೊಂದಿಗೆ ತಾವು ತೆಗೆಸಿಕೊಂಡ ಫೋಟೋವನ್ನು ಇಟ್ಟುಕೊಂಡು ಕೃತಜ್ಞತೆಯಿಂದ ಸ್ಮರಿಸುತ್ತಾರೆ.

ಇಂದು ಸುಬ್ಬುಲಕ್ಷ್ಮಿಯವರು ದೇಶ ವಿದೇಶಗಳೆರಡರಲ್ಲೂ ವಿರಾಜಿಸುವ ಅಂತಾರಾಷ್ಟ್ರೀಯ ಖ್ಯಾತಿಯ ಸುಪ್ರಸಿದ್ಧ ಸಂಗೀತ ಕಲಾವಿದೆಯಾಗಿದ್ದಾರೆ. ಅಮೆರಿಕ, ಯುರೋಪ್ ಅರಬ್ ಗಣರಾಜ್ಯ, ನೇಪಾಳ, ಸಿಲೋನ್, ಮಲಯ ಮುಂತಾದ ಈ ಎಲ್ಲ ದೇಶಗಳವರು ಸುಬ್ಬುಲಕ್ಷ್ಮಿಯವರ ಸಂಗೀತದ ಸವಿಯನ್ನು ಸವಿದು, ಭಾಷೆಯ ಬಂಧನದಿಂದ ವಿಮುಕ್ತರಾಗಿ ನಾದ ಸುಧಾಮೃತವನ್ನು ಪಾನಮಾಡಿದ್ದಾರೆ.

ಉತ್ತರಾದಿ ದಕ್ಷಿಣಾದಿಗಳೆರಡರಲ್ಲೂ ಪರಿಶ್ರಮ ಪಡೆದು, ಭಾರತದ ಅನೇಕ ಭಾಷೆಗಳಲ್ಲಿ ಹಾಡಿ ಧ್ವನಿಮುದ್ರಿಕೆಗಳನ್ನು ನೀಡಿದ್ದಾರೆ. ಅವರ ಮೀರಾಭಜನ್ ಮುಂತಾದ ಅನೇಕ ಹಿಂದೀ ಭಜನ್‌ಗಳು ಬಹು ಜನಪ್ರಿಯವಾಗಿವೆ. ಈ ಸುಪ್ರಸಿದ್ಧ ಗಾಯಕಿಯ ಭಜನೆಗಳು ಮಹಾತ್ಮಗಾಂಧಿಯವರ ಕಿವಿಗೂ ಮುಟ್ಟಿ ಅವರು ಸುಬ್ಬುಲಕ್ಷ್ಮಿಯವರ ಕೆಲವು ಭಜನ್‌ಗಳನ್ನು ಕೇಳಬೇಕೆಂದು ತಮ್ಮ ೭೮ನೆಯ ಹುಟ್ಟುಹಬ್ಬದ ಸಮಯಕ್ಕೆ ದೆಹಲಿಗೆ ಬರಬೇಕೆಂದು ಆಹ್ವಾನವಿತ್ತರು. ಗಾಂಧಿಯವರಿಂದ ಬಂದ ಈ ಆಹ್ವಾನ ತಮ್ಮ ಸುಯೋಗವೆಂದು ಸುಬ್ಬುಲಕ್ಷ್ಮಿಯವರು ಭಾವಿಸಿದರು. ದೆಹಲಿಗೆ ಹೋಗಲು ಇನ್ನಿಲ್ಲದಂತೆ ಪ್ರಯತ್ನಿಸಿದರೂ, ಕಾರಣಾಂತರದಿಂದ ಹೋಗಲಾಗದೇ, ಗಾಂಧಿಯವರಿಗೆ ನಿರಾಸೆ ಮಾಡ

ಬಾರದೆಂದು, ಮದ್ರಾಸಿನ ಆಲ್ ಇಂಡಿಯಾ ರೇಡಿಯೋ ಸ್ಟುಡಿಯೋದಲ್ಲಿ ಕೆಲವು ಭಜನ್‌ಗಳನ್ನು ಹಾಡಿ ಧ್ವನಿ ಮುದ್ರಿಸಿ, ಅವನ್ನು ದೆಹಲಿಗೆ ಕಳುಹಿಸಿದರು.

ಆದರೆ ಗಾಂಧಿಯವರು ಅಷ್ಟರಿಂದ ತೃಪ್ತರಾಗದೆ "ಹರಿ ತುಮ ಹರೋ" ಎಂಬ ಒಂದು ನಿರ್ದಿಷ್ಟ ಭಜನ್‌ಅನ್ನು ಸುಬ್ಬುಲಕ್ಷ್ಮಿಯವರ ಬಾಯಿಂದಲೇ ಕೇಳಬಯಸಿದರು. ಆದರೆ ಆ ಭಜನ್ ಅವರಿಗೆ ಗೊತ್ತಿಲ್ಲದ್ದರಿಂದ ಬೇರೆ ಯಾರಿಂದಲಾದರೂ ಹಾಡಿಸಲು ಹೇಳಿದರು. ಅದಕ್ಕೆ ಗಾಂಧಿಯವರು ನಕ್ಕು ತಮ್ಮ ವಿಶಿಷ್ಟ ಶೈಲಿಯಲ್ಲಿ "ಇಲ್ಲ ನಾನು ನನಗೆ ಪ್ರಿಯವಾದ ಈ ಭಜನ್ ಅನ್ನು ಬೇರೆಯವರ ಬಾಯಿಂದ ಕೇಳುವುದಕ್ಕಿಂತ ಹೆಚ್ಚಾಗಿ ಸುಬ್ಬುಲಕ್ಷ್ಮಿಯವರ ಬಾಯಿಂದ ಕೇಳಲು ಇಷ್ಟಪಡುತ್ತೇನೆ" ಎಂದರು. ಸುಬ್ಬುಲಕ್ಷ್ಮಿಯವರಿಗೆ ಗಾಂಧಿಯವರ ಅಭಿಮಾನದ ಈ ಮಾತುಗಳನ್ನು ಕೇಳಿ ಹೃದಯ ತುಂಬಿ ಬಂದು ಆಗಲೇ ಆ ಭಜನ್ ಅನ್ನು ಕಲಿಯಲು ಪ್ರಾರಂಭಿಸಿದರು.

ಅಕ್ಟೋಬರ್ ಒಂದರ ರಾತ್ರಿ ಮದ್ರಾಸ್ ಬಾನುಲಿಯಲ್ಲಿ ಸುಬ್ಬುಲಕ್ಷ್ಮಿ ಅವರ ಗಂಡ ಮತ್ತು ತಂಡದವರು ರಾತ್ರಿ ಬಹಳ ಹೊತ್ತಿನವರೆಗೂ, ಗಾಂಧಿಯವರಿಗೆ ಪ್ರಿಯವಾದ ಆ ಭಜನ್‌ಅನ್ನು ಧ್ವನಿಮುದ್ರಿಸುವುದರಲ್ಲಿ ನಿರತರಾಗಿ, ಅದು ಮುಗಿದ ಕೂಡಲೇ ದೆಹಲಿಗೆ ವಿಮಾನದಲ್ಲಿ ರವಾನಿಸಿದರು. ಗಾಂಧಿಯವರು ಆ ಭಜನ್ ಕೇಳಿ ತಮ್ಮ ಅತೀವ ಸಂತೋಷವನ್ನು ವ್ಯಕ್ತಪಡಿಸಿದರು. ಮೂರು ತಿಂಗಳ ನಂತರ, ಗಾಂಧಿಯವರು ಹಂತಕನ ಗುಂಡಿಗೆ ಬಲಿಯಾದ ದಿನ, ಆಕಾಶವಾಣಿಯವರು ಗಾಂಧಿಯವರಿಗೆ ಬಹು ಪ್ರಿಯವಾದ ಆ ಭಜನ್‌ಅನ್ನು ಪ್ರಸಾರಮಾಡಿದರು. ಅದನ್ನು ಕೇಳಿದ ಸುಬ್ಬುಲಕ್ಷ್ಮಿಯವರಿಗೆ ಆ ಭಜನ್ ಹಾಡಿದ ಸಂದರ್ಭ ನೆನಪಾಗಿ ಮೂಕಶೋಕ ಮೂರ್ದನಿಸಿತು. ಸುಬ್ಬುಲಕ್ಷ್ಮಿಯವರು ಹಾಡಿದ 'ವೈಷ್ಣವ ಜನತೋ' ಎಂಬ ಮತ್ತೊಂದು ಭಜನ್ ಕೂಡ ಗಾಂಧಿಯವರಿಗೆ ಬಹು ಪ್ರಿಯವಾಗಿತ್ತು. ಇಂದಿಗೂ ಗಾಂಧಿಸ್ಮೃತಿ ಕಾರ್ಯಕ್ರಮಗಳಲ್ಲಿ ಬಾನುಲಿಯವರು ಈ ಭಜನ್‌ಅನ್ನು ಆಗಾಗ್ಗೆ ಬಿತ್ತರಿಸುತ್ತಾರೆ.

ಧರ್ಮಕಾರ್ಯಗಳಿಗೆಂದು ಬೇಡಿಬಂದವರಿಗೆ ಸುಬ್ಬುಲಕ್ಷ್ಮಿಯವರು ನೀಡಿದ ಸಹಾಯಾರ್ಥ ಕಾರ್ಯಕ್ರಮಗಳು ಎಣಿಕೆಗೂ ನಿಲುಕದಷ್ಟು! ಅವರ ಕೊಡುಗೈ ನೀಡಿಕೆಗೆ ಅಡೆತಡೆ ಇಲ್ಲ. ಕಸ್ತೂರಿಬಾ ಹಾಗೂ ಮಹಾತ್ಮಗಾಂಧಿಯವರ ಸ್ಮಾರಕ ನಿಧಿ ಅವರ ಕೊಡುಗೆ ಲಕ್ಷಗಟ್ಟಲೆ. ಮದ್ರಾಸಿನ ಕಮಲಾ ನೆಹರು ಸ್ಮಾರಕ ಆಸ್ಪತ್ರೆ ಅನಾಥಾಶ್ರಮಗಳು, ಕಲಾ ಸೇವಾ ಸಂಘಗಳು—ಹೀಗೆ ಹಲವಾರು ಸಂಘ ಸಂಸ್ಥೆಗ ಸಹಾಯಾರ್ಥವಾಗಿ ಉದಾರ ಕೊಡು ಯನ್ನು ನೀಡಿ ಸಾರ್ಥಕ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಕುಂಜಮ್ಮ ಎಂಬ ಹೆಸರಿನಿಂದ ಹತ್ತಿರ ಬಂಧುಗಳಿಗೆ, ಸ್ನೇಹಿತರಿಗೆ ಪರಿಚಿತರಾಗಿರು ಸುಬ್ಬುಲಕ್ಷ್ಮಿಯವರು ಜನಿಸಿದ್ದು ೧೯೧ ರಲ್ಲಿ, ಷಣ್ಮುಗವಡಿವು ಎಂಬ ಅವರ ತಾಯಿ ಸುಪ್ರಸಿದ್ಧ ವೈಣಿಕೆ. ತಮ್ಮ ತಾಯಿ ಯವರು ನುಡಿಸುತ್ತಿದ್ದ ವೀಣೆಯನ್ನು ಗಂಟೆಗಟ್ಟಲೆ ಕೇಳುತ್ತಾ, ಸಂಗೀತದ ಬ ವಿಚಾರ ವಿಹಾರ ನಡೆಸುತ್ತಾ ಸುಬ್ಬುಲಕ್ಷ್ಮಿ

ಯವರು ಕಾಲ ಕಳೆಯುತ್ತಿದ್ದರು. ತಾಯಿಯೇ ಮಗಳಿಗೆ ಮೊದಲ ಸಂಗೀತದ ಗುರುವೂ ಆದರು. ಒಂಬತ್ತು ವರ್ಷದ ಹುಡುಗಿ ತಾಯಿಯ ಜೊತೆಯಲ್ಲಿ ಮದ್ರಾಸಿನಲ್ಲಿ ನಡೆದ ಅನೇಕ ಸಂಗೀತ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

೧೦ ನೇ ವರ್ಷಕ್ಕೆ ಸುಬ್ಬುಲಕ್ಷ್ಮಿಯವರ ಮೊದಲ ಗೀತೆ—ಒಂದು ಭಜನೆ—ಧ್ವನಿ ಮುದ್ರಣವಾಗುವ ಸುಯೋಗವನ್ನು ಪಡೆಯಿತು. ಅದು ಅವರ ಕೀರ್ತಿಯನ್ನು ಹರಡಲು ಬಹಳಮಟ್ಟಿಗೆ ಸಹಾಯವಾಯಿತು.

ಸುಬ್ಬುಲಕ್ಷ್ಮಿಯವರ ಮೊದಲ ಕಛೇರಿ ಪ್ರಾರಂಭವಾದದ್ದು ತಿರುವನಂತಪುರದಲ್ಲಿ. ಆಗ ಅವರಿಗೆ ೧೭ ವರ್ಷ. ಮುಂದೆ ಅವರ ಕಛೇರಿಗಳು ದೇಶದ ನಾನಾ ಭಾಗಗಳಲ್ಲಿ ಏರ್ಪಟ್ಟವು.

೧೯೪೪ ರಲ್ಲಿ ಬೊಂಬಾಯಿಯಲ್ಲಿ ನಡೆದ ಅಖಿಲ ಭಾರತ ಸಂಗೀತ ನೃತ್ಯ ಸಮ್ಮೇಳನದಲ್ಲಿ ಸುಬ್ಬುಲಕ್ಷ್ಮಿಯವರು ಭಾಗವಹಿಸಿದ್ದರು. ಆಗ ಅವರು ಅನೇಕ ವಿಮರ್ಶಕರ ಶ್ರೋತೃಗಳ ಗಮನ ಸೆಳೆಯುವಂತಾಯಿತು.

ಸುಬ್ಬುಲಕ್ಷ್ಮಿಯವರ ಕೀರ್ತಿ ಹರಡುವುದಕ್ಕೆ ಮತ್ತೊಂದು ಸಾಧನವಾಗಿ ಬಂದದ್ದು 'ಭಕ್ತ ಮೀರಾ' ಎಂಬ ಅವರ ಮೊದಲ ಹಿಂದಿ ಚಿತ್ರ. ಅದರಲ್ಲಿ ಸುಬ್ಬುಲಕ್ಷ್ಮಿಯವರು ಚಿತ್ರದ ಮಹಾ ಚೇತನವಾದ ಗಾಯಕಿ ಮೀರಾಳ ಪಾತ್ರವಹಿಸಿದ್ದರು. ಸಂಗೀತ ಆ ಚಿತ್ರದ ತುಂಬ ತುಂಬಿ ಸೂಸಿ ಹರಿದಂತೆ, ಸುಬ್ಬುಲಕ್ಷ್ಮಿಯವರ ಕೀರ್ತಿಯೂ ದೇಶದ ಉದ್ದ ಅಗಲಕ್ಕೂ ಹರಡಿತು. ಸುಬ್ಬುಲಕ್ಷ್ಮಿಯವರ ಮೀರಾ ಭಜನ್ ಕೇಳಿ ತಲೆದೂಗದ, ಆ ಗಾಯಕಿಯ ಕಂಠಶ್ರೀಗೆ ಮಾರುಹೋಗದ ಭಾರತೀಯನಿಲ್ಲ.

ಸುಬ್ಬುಲಕ್ಷ್ಮಿಯವರು ಇಂದು ಕೀರ್ತಿ ಶಿಖರದ ತುತ್ತತುದಿಯನ್ನು ಮುಟ್ಟಿದ್ದಾರೆ. ಅವರಿಗೆ ದೊರೆಯದ ಬಿರುದು ಬಾವಲಿಗಳಿಲ್ಲ. ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಅವರ ವಿದ್ವತ್ತಿಗೆ ಮನ್ನಣೆ ದೊರೆತಿದೆ. ಅವರ ಕೋಕಿಲ ಕಂಠಕ್ಕೆ ೧೯೫೪ರಲ್ಲಿ 'ಪದ್ಮವಿಭೂಷಣ' ಪ್ರಶಸ್ತಿಯೂ ಎರಡು ವರ್ಷಗಳ ಅನಂತರ ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆಂದು ರಾಷ್ಟ್ರಪತಿಗಳ ಪ್ರಶಸ್ತಿಯೂ ದೊರೆತವು.

೧೯೭೩ ರಲ್ಲಿ ದೆಹಲಿಯಲ್ಲಿ "ಡಾಕ್ಟರ್ ಆಫ್ ಮ್ಯೂಸಿಕ್" ಪ್ರಶಸ್ತಿಯೂ, ೧೯೭೪ ರಲ್ಲಿ ಮ್ಯಾಗ್ಸೆಸೆ ಪ್ರಶಸ್ತಿಯೂ ದೊರೆತವು.

ಸುಬ್ಬುಲಕ್ಷ್ಮಿಯವರ ಈ ಎಲ್ಲ ಕೀರ್ತಿ ಗೌರವಗಳ ಗುಟ್ಟೇನು? ಎಂದು ವಿಸ್ಮಯಪಟ್ಟವರಿದ್ದಾರೆ. ದೇಶವಿದೇಶಗಳಲ್ಲಿ ಇವರ ಗಾನ ಇಷ್ಟರ ಮಟ್ಟಿಗೆ ಸರ್ವಜನಾದರಣೀಯವಾಗಲು ಏನು ಕಾರಣ? ಅವರ ಕಲಾಕೌಶಲವೇ? ಕಂಠಶ್ರೀಯೋ? ರೂಪಶ್ರೀಯೋ? ವಿನಯಶ್ರೀಯೋ? ಸರ್ವಜನ ರಂಜನೀಯತೆಯೋ?–ಎಂದು ಪ್ರಶ್ನೆ ಹಾಕಿದವರಿದ್ದಾರೆ. ಈ ಪ್ರಶ್ನೆಗಳಿಗೆಲ್ಲ ಒಂದೆ ಉತ್ತರ– ಹೌದು, ಸುಬ್ಬುಲಕ್ಷ್ಮಿಯವರಲ್ಲಿ ಈ ಎಲ್ಲ ಗುಣಗಳೂ ಮೇಳವಿಸಿವೆ. ಕೇಳುವವರಿಗೆ ಅವರು ಹಾಡುವ ಹಾಡಿನ ಅರ್ಥ ಆಗದಿದ್ದರೂ, ಪ್ರೇಕ್ಷಕರ ಗಮನವನ್ನೆಲ್ಲ ತನ್ಮಾತ್ರ ಸೆಳೆಯುವ ನಾದ ನೈಪುಣ್ಯ, ಕಲಾಚತುರತೆ ಅವರಲ್ಲಿವೆ.

ವಿಶ್ವಸಂಸ್ಥೆಯ ಸೆಕ್ರೆಟರಿ ಜನರಲ್ ಊ ಥಾಂಟ್ ಅವರು ಸುಬ್ಬುಲಕ್ಷ್ಮಿಯವರನ್ನು ಸಭೆಗೆ ಪರಿಚಯಿಸುತ್ತಾ, ಸಂಗೀತದಲ್ಲಿ ಭಾಷೆಯ ಸಮಸ್ಯೆಯನ್ನೆತ್ತಿ "ಸಂಗೀತಕ್ಕೆ ಭೌಗೋಳಿಕ ಎಲ್ಲೆಕಟ್ಟುಗಳಿಲ್ಲ. ಅದು ಸರ್ವರನ್ನೂ ರಂಜಿಸಬಲ್ಲ ವಿಶ್ವಭಾಷೆ" ಎಂದು ಹೇಳಿರುವ ಮಾತುಗಳು ಸುಬ್ಬುಲಕ್ಷ್ಮಿಯವರ ಗಾನದ ಸರ್ವಜನಪ್ರಿಯತೆಯನ್ನು ಕುರಿತು ಮಾತನಾಡುವಾಗ ಅರ್ಥಪೂರ್ಣವಾಗಿ ಕಾಣುತ್ತದೆ.

ದಕ್ಷಿಣದ ಕೋಗಿಲೆಯೆಂದು ಖ್ಯಾತಿವೆತ್ತಿರುವ ಈ ಗಾನ ಸರಸ್ವತಿಯ ಕಂಠಶ್ರೀಯನ್ನು ಉತ್ತರ ದೇಶದ ಒಬ್ಬ ಬರಹಗಾರರು ಷಹನಾಯ್ ನಾದಕ್ಕೆ ಹೋಲಿಸಿ ಅವರ ಸಂಗೀತ ಕಛೇರಿಯ ಒಂದು ಸುಂದರ ಚಿತ್ರವನ್ನು ಕೊಡುತ್ತಾರೆ "ನಿಮಗೆ ಯಾವಾಗಲಾದರೂ ಒಮ್ಮೆ ಅವರ ಗಾನವನ್ನು ಕೇಳುವ ಅವಕಾಶ ದೊರೆತರೆ ನೋಡಿ. ವೇದಿಕೆಯ ಮೇಲೆ ಪಕ್ಕವಾದ್ಯಗಳವರೊಂದಿಗೆ ಕುಳಿತು ಅವರು ಗಾನದಲ್ಲಿ ತನ್ಮಯರಾಗಿರುವುದನ್ನು ಕಾಣುವಿರಿ. ತಮ್ಮ ಮುಂದೆ ಕಣ್ಣು ಕಿವಿಗಳನ್ನು ತೆರೆದು ತದೇಕದೃಷ್ಟಿಯಿಂದ ಕುಳಿತಿರುವ ಸಾವಿರಾರು ಸಭಿಕರ ಪರಿವೆಯೇ ಅವರಿಗಿರುವುದಿಲ್ಲ. ಹಾಡು ಮುಗಿದು ಪ್ರೇಕ್ಷಕರಿಂದ ಮೆಚ್ಚುಗೆಯಾಗಿ ಭೋರ್ಗರೆವಂತೆ ಚಪ್ಪಾಳೆಗಳ ಸುರಿಮಳೆಯಾದಾಗಲೇ ಅವರಿಗೆ ಭಾವಸಮಾಧಿಯಿಂದ ಎಚ್ಚರ! ಆಗ ಅವರು ಪ್ರೇಕ್ಷಕರತ್ತ ನೋಡಿ ಮುಗುಳುನಗೆ ಸೂಸಿ ಕೈಜೋಡಿಸಿ 'ನಮಸ್ತೆ' ಹೇಳುವರು." ಸುಬ್ಬುಲಕ್ಷ್ಮಿಯವರ ಕಛೇರಿ ನಿಜಕ್ಕೂ ಕಲಾರಸಿಕರಿಗೆ ವಿನೂತನ ಅನುಭವಗಳನ್ನು ನೀಡಿ ಸಂಗೀತದ ರಸದೌತಣವನ್ನು ಉಣಬಡಿಸುತ್ತದೆ.

ಸುಬ್ಬುಲಕ್ಷ್ಮಿಯವರಿಗೆ ಜೀವನದಲ್ಲಿ ಸಂಗೀತ ಹೊರತು ಬೇರೆ ಯಾವುದರಲ್ಲೂ ಹೆಚ್ಚು ಆಸಕ್ತಿ ಇಲ್ಲ. ಸಂಗೀತ ಕಾರ್ಯಕ್ರಮಗಳಿಲ್ಲದ ಬಿಡುವಿನ ಸಮಯಗಳಲ್ಲಿ ಕೂಡ ಸದಾ ಅವರ ಬಾಯಿ ಯಾವುದಾದರೂ ಒಂದು ಚರಣವನ್ನು ಪಲುಕುತ್ತಿರುತ್ತದೆ. ಹಾಡುಗಾರಿಕೆ ಸುಬ್ಬುಲಕ್ಷ್ಮಿಯವರಿ ಕೇವಲ ಒಂದು ಧನಾರ್ಜನೆಯಾಗಿಲ್ಲ ಅದೊಂದು ತಪಸ್ಸು ಎಂದು ಅವರ ಭಾವಿಸಿದ್ದಾರೆ.

'ನಾದ ತನುಮನಿಶಂ' ಎಂಬ ಚಿತ್ತರಂಜ ರಾಗದ ಕೃತಿಯಲ್ಲಿ ತ್ಯಾಗರಾಜರು "ನಾ ಸ್ವರೂಪನಾದ ಶಂಕರನೇ ನಿನಗೆ ನನ್ನ ತ ಮನವನ್ನು ಸಮರ್ಪಿಸಿ ತಲೆಬಾಗು ದ್ದೇನೆ" ಎಂದು ನುತಿಸಿರುವಂತೆ, ನಾ ದೇವತೆಯ ಒಂದು ಪ್ರತ್ಯಕ್ಷ ಸ್ವರೂಪವೇ ಭಾವನೆಯನ್ನು ಅಸಂಖ್ಯಾತ ಪ್ರೇಕ್ಷಕ ಮೂಡಿಸಿ, ನಾದೋಪಾಸನೆಗಾಗಿ ತ ಜೀವನವನ್ನೇ ಸಮರ್ಪಿಸಿಕೊಂಡಿರುವ ಕಲಾ ತಪಸ್ವಿಗೆ ಸಂಗೀತ ಸಾಮ್ರಾ ನಮೋ !!

ಕೃಪೆ: ಉದಯ

...ಭೂಮಿಯಿಂದ ವ್ಯೋಮಕ್ಕೆ

ಬಿ. ಆರ್. ಗುರುಪ್ರಸಾದ್
೩೦೮, ಹರ್ಷ, ೮ನೇ ಎ ಮುಖ್ಯ ರಸ್ತೆ
ಇಸ್ರೋ ಬಡಾವಣೆ, ಬೆಂಗಳೂರು-೫೬೦ ೦೭೮

"ಇದು ಒಬ್ಬ ಮನುಷ್ಯನಿಗೆ ಬಲು ಪುಟ್ಟ ಹೆಜ್ಜೆ, ಆದರೆ ಮನುಕುಲಕ್ಕೆ ಹನುಮಂತ ಲಂಘನ!" ೧೯೬೯ರಲ್ಲಿ ಚಂದ್ರನ ಮೇಲೆ ಕಾಲಿಟ್ಟ ಮೊದಲ ವ್ಯಕ್ತಿ ಅಲ್ಲಿಂದ ಉದ್ಗರಿಸಿದ ಕಾವ್ಯೋಕ್ತಿ ಇದು. ಮೌಂಟ್ ಎವರೆಸ್ಟ್ ವೀರ ತೇನ್‌ಸಿಂಗ್‌ರನ್ನು "ಇಷ್ಟು ಕಷ್ಟ, ಅಪಾಯ, ಏಕಾಂತತೆ ಎಲ್ಲವನ್ನೂ ಎದುರಿಸಿ ಆ ಬಂಜರು ಶಿಖರಕ್ಕೆ ಏರಿದ್ದೇಕೆ?" ಎಂದು ಕೇಳಿದವರಿಗೆ ಇವರು ನೀಡಿದ ಉತ್ತರ ಮಾರ್ಮಿಕವಾಗಿದೆ: "ಅದು ಅಲ್ಲಿ ಇರುವುದರಿಂದ!" ಹೌದು. "ಅದು" ಅಲ್ಲಿದೆ, ನಮಗೆ ಸವಾಲಾಗಿದೆ, ನೀನೇರಬಲ್ಲೆಯಾ ನಾನೇರಿರುವ ಎತ್ತರಕ್ಕೆ ಎಂದು ನನಗೆ ಆಮಿಷ ಒಡ್ಡುತ್ತಿದೆ. ಜಗಲಿ ನೆಗೆದು ಗಗನಕ್ಕೆ ಜಿಮ್ಮು ಎನ್ನುವುದು ಗಾದೆ. ವೈಜ್ಞಾನಿಕವಾಗಿಯೂ ಇದು ಸತ್ಯ! ಭೂಮಿಯಿಂದ ನೆಗೆದು ವ್ಯೋಮದಲ್ಲಿ ವಿಹರಿಸು. ಈ ನೆಲದ ಮೇಲಿನ ನೆಗೆತ ಜಿಗಿತ ಎಸೆತಗಳಲ್ಲಿ ಅಸಾಧ್ಯ ವಿಕ್ರಮ ಸಾಧಿಸಿ ನಾಡಿನ ಅತ್ಯುನ್ನತ ಪ್ರಶಸ್ತಿ ಭಾರತ ರತ್ನಕ್ಕೆ ಪಾತ್ರರಾದವರು ಎ. ಪಿ. ಜೆ. ಅಬ್ದುಲ್ ಕಲಾಂ; ಆ ಬಾನಿನ ಹಿರಿ ಎತ್ತರ ತಲುಪಿ ಅಲ್ಲಿ ಚಂದ್ರನಂತೆ ಭೂಪರಿಭ್ರಮಣೆ ಮಾಡಿ ಧರೆಗೆ ಮರಳಿ ಪ್ರಪಂಚ ಗೌರವಕ್ಕೆ ಭಾಜನರಾದವರು ಕಲ್ಪನಾ ಚಾವ್ಲಾ. ಕಲ್ಪನೆಗೆ ನಿಲುಕದ ಈ ರೋಮಾಂಚಕ ಸಾಹಸಗಳನ್ನು 'ಪುಸ್ತಕ ಪ್ರಪಂಚ'ಕ್ಕಾಗಿ ಬರೆದಿರುವವರು ಕನ್ನಡ ನಾಡಿನ ಪ್ರತಿಭಾನ್ವಿತ ಅಂತರಿಕ್ಷ ವಿಜ್ಞಾನಿ ಬಿ. ಆರ್. ಗುರುಪ್ರಸಾದ್.

ಎ. ಪಿ. ಜೆ. ಅಬ್ದುಲ್ ಕಲಾಂ

...ಷ್ಟ್ರ ರಕ್ಷಣೆಯಲ್ಲಿ ಅದರ ಶಸ್ತ್ರಗಳು
...ಪ್ರಮುಖ ಪಾತ್ರ ವಹಿಸುತ್ತವೆ. ಈ
...ಧುನಿಕ ಜಗತ್ತಿನಲ್ಲಿಯೇ ದೊಡ್ಡ ಕ್ಷಿಪಣಿ
...ಂದರೆ ಬಾಂಬನ್ನು ಹೊತ್ತ ರಾಕೆಟ್)
...ಂತಹ ಆಧುನಿಕ ಶಸ್ತ್ರಗಳು ರಾಷ್ಟ್ರ
...ಂದರಲ್ಲಿವೆ ಎಂಬ ಸಂಗತಿಯೇ ವೈರಿಗಳು ಅದನ್ನು ಆಕ್ರಮಣ ಮಾಡುವುದನ್ನು ಕೆಲವು ವೇಳೆ ತಡೆಗಟ್ಟುತ್ತದೆ.

ಇಂದು ಭಾರತ ಅನೇಕ ಬಗೆಯ ಅತ್ಯಾಧುನಿಕ ಕ್ಷಿಪಣಿಗಳನ್ನು (ಮಿಸೈಲ್ಸ್) ಸ್ವತಃ ತಾನೇ ನಿರ್ಮಿಸಿ ಯಶಸ್ವಿಯಾಗಿ ಪರೀಕ್ಷಿಸಿದೆ. ಇವುಗಳ ನಿರ್ಮಾಣದ ಹಿಂದಿನ

ಶಕ್ತಿಯೇ ಎ.ಪಿ.ಜೆ. ಅಬ್ದುಲ್ ಕಲಾಂ. ಕೇಂದ್ರ ಸರ್ಕಾರ ಇತ್ತೀಚೆಗೆ ಇವರಿಗೆ ನಮ್ಮ ನಾಗರಿಕ ಕ್ಷೇತ್ರದ ಅತ್ಯುನ್ನತ ಪ್ರಶಸ್ತಿಯಾದ 'ಭಾರತ ರತ್ನ' ನೀಡಿ ಗೌರವಿಸಿರುವುದು ಅರ್ಹತೆಗೆ ಸಂದ ನಿಜಗೌರವ.

ಅವಿಲ್ ಫಕಿರ್ ಜಲಾಲುದ್ದೀನ್ ಅಬ್ದುಲ್ ಕಲಾಂ ಅವರು ತಮಿಳುನಾಡಿನಲ್ಲಿರುವ ಐತಿಹಾಸಿಕ ಪಟ್ಟಣವಾದ ರಾಮೇಶ್ವರಂನಲ್ಲಿ ಜನಿಸಿದರು (೧೫-೧೦-೧೯೩೧). ಅಷ್ಟೇನೂ ಸ್ಥಿತಿವಂತರಲ್ಲದ ಕುಟುಂಬದಲ್ಲಿ ಜನಿಸಿದರೂ ಕಷ್ಟಪಟ್ಟು ವ್ಯಾಸಂಗ ಮಾಡಿದ ಕಲಾಂ ಚಿಕ್ಕಂದಿನಿಂದಲೇ ವಿಮಾನ ಹಾಗೂ ರಾಕೆಟ್‌ಗಳ ಬಗ್ಗೆ ಆಸಕ್ತಿ ತಳೆದರು. ಮುಂದೆ ರಾಮನಾಥಪುರಂ ಹಾಗೂ ತಿರುಚನಾಪಳ್ಳಿಗಳಲ್ಲಿ ಸ್ಕೂಲು ಕಾಲೇಜುಗಳ ಶಿಕ್ಷಣ ಮುಗಿಸಿದ ಅವರು ಮದ್ರಾಸ್ ತಾಂತ್ರಿಕ ಮಂದಿರದಲ್ಲಿ ವಿಮಾನಯಾನ ಎಂಜಿನಿಯರಿಂಗ್ ಅಧ್ಯಯನ ಮಾಡಿದರು.

ವ್ಯಾಸಂಗ ನಂತರ ಅವರು ಭಾರತ ಸರ್ಕಾರದ 'ರಕ್ಷಣಾ ಸಂಶೋಧನೆ ಹಾಗೂ ಅಭಿವೃದ್ಧಿ ಸಂಸ್ಥೆ' (ಡಿ.ಆರ್.ಡಿ.ಓ') ಸೇರಿದರು (೧೯೫೮). ಅಲ್ಲಿ ಸುಮಾರು ಐದು ವರ್ಷ ಕೆಲಸ ಮಾಡಿ ೧೯೬೩ರಲ್ಲಿ ಭಾತರದ ಅಂತರಿಕ್ಷ ಕಾರ್ಯಕ್ರಮಕ್ಕೆ ಸೇರ್ಪಡೆಯಾದರು. ಅಂತಾರಾಷ್ಟ್ರೀಯ ಖ್ಯಾತಿಯ ವಿಜ್ಞಾನಿಯೂ ಅಪ್ರತಿಮ ದೂರದೃಷ್ಟಿಯುಳ್ಳವರು ಆಗಿದ್ದ ಡಾ|| ವಿಕ್ರಂ ಸಾರಾಭಾಯಿಯವರ ನೇತೃತ್ವದಲ್ಲಿ ಭಾರತದ ಅಂತರಿಕ್ಷ ಕಾರ್ಯಕ್ರಮ ಹುರುಪಿನಿಂದ ಪ್ರಾರಂಭವಾದ ದಿನಗಳವು.

ತ್ವರಿತವಾದ ರಾಷ್ಟ್ರೀಯ ಅಭಿವೃದ್ಧಿಗೆ ನೆರವಾಗುವ ಕೃತಕ ಭೂ ಉಪಗ್ರಹಗಳನ್ನು ಹಾಗೂ ಅವನ್ನು ಅಂತರಿಕ್ಷಕ್ಕೆ ಹಾರಿಬಿಡುವ ಸಾಧನಗಳಾದ ಉಡಾವಣಾ ರಾಕೆಟ್‌ಗಳನ್ನು ನಮ್ಮಲ್ಲೇ ನಿರ್ಮಿಸುವ ಸಾಮರ್ಥ್ಯ ಭಾರತೀಯ ವಿಜ್ಞಾನಿಗಳು ಗಳಿಸಬೇಕೆನ್ನು ವುದು ಸಾರಾಭಾಯಿಯವರ ಮಹದಾ ಯಾಗಿತ್ತು.

ಈ ನಿಟ್ಟಿನಲ್ಲಿ ಎಪಿಜೆಯವರು ರಾಕೆಟ್ ಸಂಶೋಧನೆಯಲ್ಲಿ ನಿರತರಾದರು. ಇದ ಅಂಗವಾಗಿ ೧೯೬೭ರಲ್ಲಿ ಅಮೇರಿಕದ ಕೆಲ ರಾಕೆಟ್ ಸಂಶೋಧನಾ ಕೇಂದ್ರಗಳ ಸುಮಾರು ನಾಲ್ಕು ತಿಂಗಳ ಕಿರು ಭೇ ನೀಡಿದರು. ಆದರೆ ಆ ಭೇಟಿಯಿಂದ ಅವರಿ ಅಮೇರಿಕಾದ ರಾಕೆಟ್ ಕಾರ್ಯಕ್ರಮ ಪರಿಚಯವಾಯಿತೇ ಹೊರತೂ ರಾಕೆಟ್ ನಿರ್ಮಾಣದ ಬಗ್ಗೆ ಮಹತ್ತರವಾ ಮಾಹಿತಿಯೇನೂ ಆ ಅಲ್ಪಾವಧಿಯ ಒದಗಿದಂತೆ ಕಂಡು ಬರುವುದಿಲ್ಲ.

ಮುಂದೆ ಭಾರತದ ಪ್ರಥಮ ಉಪಗ್ರ ಉಡಾವಣಾ ರಾಕೆಟ್ಟಾದ ಎಸ್.ಎಲ್ ವಿ.–೩ರ ಕಾರ್ಯಕ್ರಮ ೧೯೭೦ರ ದಶಕ ಆದಿಯಲ್ಲಿ ಪ್ರಾರಂಭವಾದಾಗ ಕಲಾ ಅವರ ನೇತೃತ್ವ ವಹಿಸಿದರು. ೧೯೮೦ ಜುಲೈ ೧೮ರಂದು ಆ ರಾಕೆಟ್ ಪು 'ರೋಹಿಣಿ' ಉಪಗ್ರಹವನ್ನು ಅಂತರಿಕ್ಷ ಕೊಂಡೊಯ್ದು ಮುಂದೆ ಆ ಉಪಗ್ರ ಭೂಮಿಯನ್ನು ಅಲ್ಲಿ ಸುತ್ತುವಂತೆ ಮಾ ವಲ್ಲಿ ಯಶಸ್ವಿಯಾಯಿತು. ಉಪಗ್ರಹವನ ಸ್ವತಃ ತಾವೇ ಉಡಾಯಿಸಿದ ರಷ್ಯಾ ಅಮೇರಿಕಾ, ಫ್ರಾನ್ಸ್, ಬ್ರಿಟನ್. ಜಪಾ ಮತ್ತು ಚೀನಾಗಳ ಪ್ರತಿಷ್ಠಿತ ಗುಂ ಭಾರತವೂ ಸೇರ್ಪಡೆಯಾಯಿತು.

ಎಸ್.ಎಲ್.ವಿ.-೩ರ ಯಶಸ್ಸಿನ ಬಳಿಕ ಎಪಿಜೆಯವರನ್ನು ರಕ್ಷಣಾ ಸಂಶೋಧನೆ ಹಾಗೂ ಅಭಿವೃದ್ಧಿ ಸಂಸ್ಥೆಗೆ ಪುನಃ ಕರೆಸಿಕೊಳ್ಳಲಾಯಿತು. ಹೀಗೆ ಹೈದರಾಬಾದಿಗೆ ೧೯೮೨ರಲ್ಲಿ ತೆರಳಿದ ಕಲಾಂ ಆ ಸಂಸ್ಥೆಗೆ ಸೇರಿದ ಒಂದು ಪ್ರಯೋಗಾಲಯದ ನಿರ್ದೇಶಕರಾದರು.

ಆ ಸುಮಾರಿಗೆ ಎಪಿಜೆ ಸಮಗ್ರ ನಿರ್ದೇಶಿತ ಕ್ಷಿಪಣಿ ಕಾರ್ಯಕ್ರಮದ ನೇತೃತ್ವ ವಹಿಸಿದರು. ವಿವಿಧ ಗಾತ್ರ ಹಾಗೂ ಸಾಮರ್ಥ್ಯಗಳುಳ್ಳ ಹಾಗೂ ಸೂಕ್ಷ್ಮ ಎಲೆಕ್ಟ್ರಾನಿಕ್ ಮೆದುಳಿನ ನೆರವಿನಿಂದ ನಿಯಂತ್ರಿಸಲ್ಪಡುವ ಅನೇಕ ಕ್ಷಿಪಣಿಗಳನ್ನು ನಿರ್ಮಿಸುವುದು ಉದ್ದೇಶವಾಗಿತ್ತು. ಇಂಥ ಅತ್ಯಾಧುನಿಕ ಶಸ್ತ್ರಗಳನ್ನು ಭಾರತದಂಥ ಅಭಿವೃದ್ಧಿಶೀಲ ರಾಷ್ಟ್ರದಲ್ಲಿ ನಿರ್ಮಿಸುವುದು ಸಾಧ್ಯವೇ ಎಂದು ಅನೇಕರು ಅಂದು ಗೇಲಿ ಮಾಡಿದ್ದುಂಟು.

ಆದರೆ ತಮ್ಮ ಉದ್ದೇಶವನ್ನು ಸಾಧಿಸುವ ಮಾರ್ಗದ ಬಗ್ಗೆ ಸ್ಪಷ್ಟವಾದ ಕಲ್ಪನೆಯಿದ್ದ ಕಲಾಂ ಇದರಿಂದ ಎದೆಗುಂದಲಿಲ್ಲ. ಬದಲಿಗೆ ಅವರು ರಕ್ಷಣಾ ಕ್ಷೇತ್ರದಲ್ಲಿ ಶ್ರಮಿಸುತ್ತಿದ್ದ ವ್ಯಕ್ತಿಗಳು, ಪ್ರಯೋಗಶಾಲೆಯಲ್ಲಿ ಕಾರ್ಯನಿರತರಾದ ವಿಜ್ಞಾನಿಗಳು ಹಾಗೂ ಉನ್ನತ ವಿದ್ಯಾಸಂಸ್ಥೆಗಳ ಪ್ರಾಧ್ಯಾಪಕರನ್ನು ಒಟ್ಟುಗೂಡಿಸಿ ಅವರ ಸಾಮರ್ಥ್ಯವನ್ನು ಯಶಸ್ವಿಯಾಗಿ ಬಳಸಿಕೊಳ್ಳುವ ಮೂಲಕ ತಮ್ಮ ಉದ್ದೇಶವನ್ನು ಸಾಧಿಸಿಯೇ ತೀರಿದರು.

ಫಲವಾಗಿ ಐದು ಬಗೆಯ ಅತ್ಯಾಧುನಿಕ ಕ್ಷಿಪಣಿಗಳು ಭಾರತದಲ್ಲಿಂದು ನಿರ್ಮಾಣವಾಗಿವೆ. ಇವುಗಳ ಪೈಕಿ 'ಅಗ್ನಿ' ಎಂಬುದು ಮಧ್ಯಂತರ ವ್ಯಾಪ್ತಿಯದು. (ಅಂದರೆ ಸುಮಾರು ೨೫೦೦ ಕಿಲೋಮೀಟರ್‌ನಷ್ಟು ದೂರದ ಪ್ರದೇಶಗಳಿಗೆ ತೆರಳುವ ಸಾಮರ್ಥ್ಯವುಳ್ಳದ್ದು). ಅದೇ ರೀತಿ 'ಪೃಥ್ವಿ' ಎಂಬುದು ೨೫೦ ಕಿಲೋಮೀಟರ್ ವ್ಯಾಪ್ತಿಯುಳ್ಳದ್ದು. ಈ ಎರಡೂ ಕ್ಷಿಪಣಿಗಳು ಭೂಮಿಯ ಒಂದು ಭಾಗದ ಮೇಲಿಂದ ಮತ್ತೊಂದಕ್ಕೆ ತೆರಳುವ 'ಮೇಲ್ಮೈಯಿಂದ ಮೇಲ್ಮೈಗೆ' ಕ್ಷಿಪಣಿಗಳು.

ಇವುಗಳೊಂದಿಗೇ 'ಆಕಾಶ್' ಮತ್ತು 'ತ್ರಿಶೂಲ್' ಎಂಬ ಮತ್ತೆರಡು ಕ್ಷಿಪಣಿಗಳನ್ನೂ ನಿರ್ಮಿಸಲಾಗಿದೆ. ಇವು ಆಗಸದಲ್ಲಿ ಹಾರುತ್ತಿರುವ ವಿಮಾನಗಳನ್ನು ಭೂಮಿಯಿಂದಲೇ ಧಾವಿಸಿ ನಾಶಮಾಡಬಲ್ಲ ಸಾಮರ್ಥ್ಯ ಹೊಂದಿವೆ. ಇನ್ನು 'ನಾಗ್' ಎಂಬ ಮತ್ತೊಂದು ಕ್ಷಿಪಣಿ ವೈರಿಯ ಟ್ಯಾಂಕುಗಳನ್ನು ಧ್ವಂಸಮಾಡಬಲ್ಲದು.

ಉಚ್ಚ ತಂತ್ರವಿದ್ಯೆಯ ಬಳಕೆಯಿಂದ ನಿರ್ಮಿಸಲಾಗುವ ಶಸ್ತ್ರಗಳಿಂದ ಕ್ಷಿಪಣಿಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಭಾರತದ ಈ ಸಾಧನೆಯನ್ನು ಕಂಡ ಅನೇಕ ದೇಶಗಳು ಆಶ್ಚರ್ಯಚಕಿತವಾಗಿವೆ. ಮತ್ತೆ ಕೆಲವು ತಂಟೆಕೋರ ರಾಷ್ಟ್ರಗಳು ಭಾರತವನ್ನು ಹಗುರಾಗಿ ಕಾಣುವುದನ್ನು ನಿಲ್ಲಿಸಿವೆ. ಒಟ್ಟಿನಲ್ಲಿ ಅಬ್ದುಲ್ ಕಲಾಂ ಅವರ ನೇತೃತ್ವದಲ್ಲಿ ನಿರ್ಮಾಣವಾದ ಕ್ಷಿಪಣಿಗಳಿಂದಾಗಿ ಅಂತಾರಾಷ್ಟ್ರೀಯ ರಂಗದಲ್ಲಿ ಭಾರತದ ಸ್ಥಾನಮಾನ ಹಾಗೂ ಪ್ರತಿಷ್ಠೆಗಳು ಹೆಚ್ಚಿವೆ.

ಇಷ್ಟೆಲ್ಲವನ್ನೂ ಸಾಧ್ಯಮಾಡಿದ ಕಲಾಂ ಮಾತ್ರ ಒಬ್ಬ ಪರಮವಿನಯಶೀಲ ವ್ಯಕ್ತಿ. ಅವರನ್ನೊಮ್ಮೆ ಅತಿ ಹತ್ತಿರದಿಂದ ಕಂಡಾಗ ವೇಷಭೂಷಣ ಹಾಗೂ ರೀತಿಗಳ ದೃಷ್ಟಿ

ಯಿಂದ ಅವರೆಂಥ ಸರಳ ವ್ಯಕ್ತಿ ಎಂಬುದು ನನಗರಿವಾಯಿತು.

ತಮ್ಮ ವೃತ್ತಿಗೆ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡಿರುವ ಅಬ್ದುಲ್ ಕಲಾಂ ವಿವಾಹ ಮಾಡಿಕೊಂಡಿಲ್ಲ. ಜೊತೆಗೇ ಸಸ್ಯಾಹಾರಿ. ಯಾವ ದುಶ್ಚಟಗಳೂ ಇಲ್ಲ. ಬಾಲ್ಯದಲ್ಲಿ ತಮಿಳಿನಲ್ಲಿ ಶಿಕ್ಷಣ ಪಡೆದ ಅವರು ಆ ಭಾಷೆಯಲ್ಲಿ ತಮ್ಮ ಕವನ ಸಂಕಲನವನ್ನು ಪ್ರಕಟಿಸಿದ್ದಾರೆ. ಅದು ಇಂಗ್ಲಿಷಿಗೂ ಭಾಷಾಂತರವಾಗಿದೆ.

ಕರ್ನಾಟಕ ಸಂಗೀತದಲ್ಲಿ ಆಸಕ್ತಿಯುಳ್ಳ ಅವರು ವೀಣಾಭ್ಯಾಸವನ್ನೂ ಆರಂಭಿಸಿದ್ದು ತ್ಯಾಗರಾಜರ ಶ್ರೀ ರಾಗದ 'ಎಂದರೋ ಮಹಾನುಭಾವುಲು' ಕೃತಿಯನ್ನು ವೀಣೆಯಲ್ಲಿ ನುಡಿಸುವುದು ತಮ್ಮ ಮಹದಾಸೆಯೆಂದು ಹೇಳಿಕೊಂಡಿದ್ದಾರೆ.

ಭಾರತರತ್ನ ಪ್ರಶಸ್ತಿ ಸಂದಿರುವುದಕ್ಕೆ ಪ್ರತಿಯಾಗಿ ಅವರ ಅನಿಸಿಕೆಯೇನೆಂಬ ಪ್ರಶ್ನೆಗೆ ಉತ್ತರವಾಗಿ ಅವರು ದೇಶವನ್ನು, ತಮ್ಮ ಗುರುಗಳನ್ನು ಹಾಗೂ ಹಿರಿಯ ಮತ್ತು ಕಿರಿಯ ಸಹೋದ್ಯೋಗಿಗಳನ್ನು ಸ್ಮರಿಸಿ ಧನ್ಯವಾದಗಳನ್ನು ಅರ್ಪಿಸಿರುವುದು ಅವರ ವಿನಯಶೀಲ ಹಾಗೂ ಸರಳ ವ್ಯಕ್ತಿತ್ವವನ್ನು ಉತ್ತಮವಾಗಿ ಪ್ರತಿಬಿಂಬಿಸುತ್ತದೆ. ಅಬ್ದುಲ್ ಕಲಾಂ ಅವರು ವಿರಳರಲ್ಲಿ ವಿರಳ ವ್ಯಕ್ತಿಯೇ ಸರಿ.

* * * * *

ಕಲ್ಪನಾ ಚಾವ್ಲಾ

ಅಂತರಿಕ್ಷವೆಂಬುದು ಭೂವಾತಾವರಣ ದಾಟಿ ಇರುವ ವಿಶಾಲ ಪ್ರದೇಶ. ಸೂರ್ಯಚಂದ್ರರೂ ಸೇರಿದಂತೆ ಅಸಂಖ್ಯಾತ ಆಕಾಶಕಾಯಗಳ ನೆಲೆ ಅದು. ಅಲ್ಲಿ ವಾಯುವಿನ ಸುಳಿವೇ ಇರುವುದಿಲ್ಲ. ಜೊತೆಗೆ ಅಲ್ಲಿಯ ಉಷ್ಣತೆಯ ಪ್ರಮಾಣದಲ್ಲಿ ಉಂಟಾಗುವ ಏರುಪೇರನ್ನು ಭೂಮಿಯ ಮೇಲೆ ವಾಸಿಸುವ ನೀವು ತಡೆದುಕೊಳ್ಳಲಾಗುವುದಿಲ್ಲ. ಇಷ್ಟೇ ಸಾಲದೆಂಬಂತೆ ಕ್ಷ-ಕಿರಣಗಳು, ಅತಿನೇರಿಳೆ ಕಿರಣಗಳು ಮುಂತಾದ ಮಾರಕ ಕಿರಣಗಳಿಗೆ ಅಲ್ಲಿ ಕೊರತೆಯೇನೂ ಇಲ್ಲ.

ಅಂತರಿಕ್ಷಕ್ಕೆ ತೆರಳಲು ಸಾಧಿಸಬೇಕಾದ ವೇಗ, ದಿನನಿತ್ಯ ಜೀವನದಲ್ಲಿ ನೀವು ಧಾವಿಸುವ ವೇಗಕ್ಕೆ ಹೋಲಿಸಿದಲ್ಲಿ ಅಗಾಧವಾದುದು. ಅದೇ ರೀತಿ ಅಂತರಿಕ್ಷದಲ್ಲಿ ಭೂಮಿಯನ್ನು ಸುತ್ತಲು ಇಲ್ಲವೇ ಇತರ ಆಕಾಶಕಾಯಗಳತ್ತ ತೆರಳಲು ಅಗತ್ಯವಾದ ವೇಗವನ್ನು ಅರಿತಾಗ 'ಅಬ್ಬಾ' ಎಂದು ಉದ್ಗರಿಸುವಂತಾಗುತ್ತದೆ. ಇನ್ನು ಅಲ್ಲಿಂದ ಭೂಮಿಗೆ ಹಿಂತಿರುಗಿ ಬರುವುದೂ ಒಂದು ಸಾಹಸವೇ.

ಎಂದೇ ಅಂತರಿಕ್ಷಯಾನ ಮಾಡಿ ಬಂದ ವ್ಯಕ್ತಿಗಳು ಸಾಮಾನ್ಯರೇನೂ ಅಲ್ಲ. ಇವರಿಗೆ ಗಗನಯಾತ್ರಿಗಳೆಂದು ಹೆಸರು. ೧೯೬೧ರ ಏಪ್ರಿಲ್ ೧೨ರಂದು ಯೂರಿ ಗಗಾರಿನ್ ಅಂತರಿಕ್ಷಕ್ಕೆ ತೆರಳಿ ಹಿಂತಿರುಗಿ ಬಂದಾಗಿನಿಂದ ಇಂದಿನವರೆಗೂ (ಅಂದರೆ ೧೯೯೮ರ ಪ್ರಾರಂಭದಲ್ಲಿ) ಸುಮಾರು ಇನ್ನೂರು ಮಂದಿ ಅಂತರಿಕ್ಷಯಾನ ಮಾಡಿಬಂದಿದ್ದಾರೆ.

ಈ ಸಂಬಂಧದಲ್ಲಿ ಭಾರತೀಯ ವಾಯು ಪಡೆಯ ರಾಕೇಶ್ ಶರ್ಮಾ ೧೯೮೪ರಲ್ಲಿ ಅಂತರಿಕ್ಷಯಾನ ಮಾಡಿ ಬಂದಿದ್ದರು. ಅದಾದ ಹದಿಮೂರು ವರ್ಷಗಳ ಬಳಿಕ ೧೯೯೭ರ ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ಭಾರತಕ್ಕೆ ಸಂಬಂಧಿಸಿದ ಮತ್ತೊಬ್ಬರು ಅಂತರಿಕ್ಷಯಾನದ ವಿಶಿಷ್ಟ ಅನುಭವ ಗಳಿಸಿ ಸುರಕ್ಷಿತವಾಗಿ ಹಿಂದಿರುಗಿದ್ದಾರೆ. ಈ ವ್ಯಕ್ತಿ ಇಂದು ಅಮೇರಿಕದ ಪ್ರಜೆಯಾಗಿದ್ದರೂ ಇವರು ಜನಿಸಿ ಕಾಲೇಜು ಶಿಕ್ಷಣ ಪಡೆದದ್ದು ಭಾರತದಲ್ಲೇ. ಇವರೇ ಕಲ್ಪನಾ ಚಾವ್ಲಾ.

ಮೂವತ್ತೈದು ವರ್ಷದ ಕಲ್ಪನಾ ಚಾವ್ಲಾ ಅವರು ಹರ್‍ಯಾನಾ ರಾಜ್ಯದ ಕರ್ನಾಲ್‌ನಲ್ಲಿ ಜನಿಸಿದರು. ಇವರದು ಸಂಪ್ರದಾಯಸ್ಥ ಕುಟುಂಬ. ಆದರೆ ಚಿಕ್ಕಂದಿನಿಂದಲೂ ದಿಟ್ಟೆಯಾದ ಕಲ್ಪನಾ ವಿಜ್ಞಾನದಲ್ಲಿ ಮೊದಲಿನಿಂದಲೂ ಆಸಕ್ತಿ. ಇದು ಅವರನ್ನು ಮುಂದೆ ವಿಮಾನಯಾನ ಇಂಜಿನಿಯರಿಂಗ್‌ಗೆ ಸೇರುವಂತೆ ಪ್ರೇರೇಪಿಸಿತು. ಇದರಿಂದಾಗಿ ಕಾಲೇಜಿನ ಅನೇಕ ವಿದ್ಯಾರ್ಥಿ ಹಾಗೂ ಪ್ರಾಧ್ಯಾಪಕರು ಹುಬ್ಬೇರಿಸುವಂತಾಯಿತು.

ಹೀಗೆ ವಿಮಾನಯಾನ ಇಂಜಿನಿಯರಿಂಗ್‌ನಲ್ಲಿ ಸ್ನಾತಕ ಪದವಿಯನ್ನು ಗಳಿಸಿದ ಕಲ್ಪನಾ ಮುಂದೆ ಆ ವಿಷಯದಲ್ಲಿ ಉನ್ನತ ಶಿಕ್ಷಣಕ್ಕಾಗಿ ಅಮೇರಿಕಕ್ಕೆ ತೆರಳುತ್ತೇನೆಂಬ ನಿರ್ಧಾರ ಕೈಗೊಂಡಾಗ ಅವರ ಕುಟುಂಬದವರಿಗೆ ದಿಗ್ಭ್ರಮೆಯಾಯಿತು. ಆದರೆ ತಮ್ಮ ಗುರಿಯ ಬಗ್ಗೆ ಸ್ಪಷ್ಟ ನಂಬಿಕೆಯಿದ್ದ ಅಕೆ ಅಮೇರಿಕಕ್ಕೆ ತೆರಳಿ ಸ್ನಾತಕೋತ್ತರ ಹಾಗೂ ಬಳಿಕ ಡಾಕ್ಟರೇಟ್ ಪದವಿಗಳನ್ನು ಅಲ್ಲಿಯ ವಿಶ್ವವಿದ್ಯಾನಿಲಯಗಳಿಂದ ಪಡೆದರು.

ಓದು ಮುಗಿದ ತರುವಾಯ ಸಂಶೋಧಕರಾಗಿ ಕೆಲಕಾಲ ಉದ್ಯೋಗ ಕೈಗೊಂಡ ಕಲ್ಪನಾ ಬಳಿಕ ಅಮೇರಿಕಾದ ಜಗದ್ವಿಖ್ಯಾತ ಅಂತರಿಕ್ಷ ಸಂಸ್ಥೆ 'ನಾಸಾ'ದ ಗಗನಯಾತ್ರಿ ಹುದ್ದೆಗೆ ಅರ್ಜಿ ಹಾಕಿದರು. ಸುಮಾರು ಮೂರು ಸಾವಿರ ಅಮೇರಿಕನ್ನರೊಂದಿಗೆ ಸ್ಪರ್ಧಿಸಿ ಗಗನಯಾತ್ರಿಯ ಹುದ್ದೆಗೆ ಇತರ ಕೆಲವೇ ಮಂದಿಯೊಡನೆ ಆಯ್ಕೆಯಾದರು.

ಆ ವೇಳೆಗಾಗಲೇ ಕಲ್ಪನಾ ವಿವಿಧ ಬಗೆಯ ವಿಮಾನಗಳ ಚಾಲನೆಯ ಪರವಾನಗಿ (ಲೈಸೆನ್ಸ್) ಪಡೆದಿದ್ದರು. ಈ ಸಿಟ್ಟಿನಲ್ಲಿ ತಮ್ಮ ಶಿಕ್ಷಕರಾಗಿದ್ದ ಜಾನ್ ಪಿಯರ್ ಹ್ಯಾರಿಸನ್‌ರನ್ನೇ ವಿವಾಹವಾಗಿಯೂ ಇದ್ದರು.

ಕಲ್ಪನ ಅಂತರಿಕ್ಷಕ್ಕೆ ತೆರಳುವ ಕಾಲ ಸನ್ನಿಹಿತವಾದಂತೆ ಭಾರತಾದ್ಯಂತ ಅವರ ಬಗ್ಗೆ ಮಾಹಿತಿಯ ಮಹಾಪೂರವೇ ಹರಿಯಿತು. ಯಾವ ಪತ್ರಿಕೆಯಲ್ಲಿ ನೋಡಿದರೂ ಅವರ ಭಾವಚಿತ್ರ ಹಾಗೂ ಅವರನ್ನು ಕುರಿತಾದ ಲೇಖನಗಳು ಪ್ರಕಟವಾದುವು.

೧೯೯೭ರ ನವೆಂಬರ್ ೨೦ರಂದು ಕಲ್ಪನಾ ಅವರು ಇತರ ಐವರು ಸಹಚರರೊಡನೆ ಅಮೇರಿಕದ 'ಅಂತರಿಕ್ಷ ಶಟಲ್' ಎಂಬ ರಾಕೆಟ್ ಲಾಳಿ ವಿಮಾನದ ಚಾಲಕ ಕೋಣೆಯಲ್ಲಿ ಕುಳಿತರು. ಆ ವೇಳೆಗಾಗಲೇ ಅವರಿಗೆ ಅಂತರಿಕ್ಷಯಾನಕ್ಕೆ ಸಂಬಂಧಿಸಿದಂತೆ ಅತ್ಯುತ್ತಮವಾದ ತರಬೇತಿ ದೊರಕಿತ್ತು.

ಹದಿನೆಂಟು ಮಹಡಿಗಳಷ್ಟು ವಿಸ್ತಾರವಿರುವ ಅಮೇರಿಕದ ಅಂತರಿಕ್ಷ ಲಾಳಿ ಅಂದು ಭಾರತೀಯ ಕಾಲಮಾನ ಬೆಳಗಿನ ಜಾವ ೧-೧೬ಕ್ಕೆ ಸರಿಯಾಗಿ ತನ್ನ ಉಡಾವಣಾ ವೇದಿಕೆಯಿಂದ ಬೆಂಕಿ ಹಾಗೂ ಹೊಗೆಯನ್ನು

ಉಗುಳುತ್ತಾ ಮೇಲೇರಿತು. ಮುಂದಿನ ಎಂಟು ಮಿನಿಟುಗಳ ಸುಮಾರಿನಲ್ಲಿ 'ಕೊಲಂಬಿಯಾ' ಎಂಬ ಹೆಸರಿನ ಆ ಲಾಳಿ ಗಂಟೆಗೆ ಇಪ್ಪತ್ತೇಳು ಸಾವಿರ ಕಿಲೋಮೀಟರ್ ವೇಗವನ್ನು ಸಾಧಿಸುವ ಮೂಲಕ ಅಂತರಿಕ್ಷದಲ್ಲಿ ಭೂಮಿಯನ್ನು ಪರಿಭ್ರಮಿಸಲಾರಂಭಿಸಿತು. ದಿನನಿತ್ಯ ಜೀವನದಲ್ಲಿ ಹೆಚ್ಚೆಂದರೆ ಗಂಟೆಗೆ ಎಪ್ಪತ್ತೊಂಭತ್ತು ಕಿಲೋಮೀಟರ್ ವೇಗದಲ್ಲಿ ಧಾವಿಸುವ ನಮಗೆ ಇದು ಊಹಾತೀತವೇ ಸರಿ.

ಅಂತರಿಕ್ಷದಲ್ಲೇನೋ ಉಷ್ಣತೆಯ ಪ್ರಮಾಣದಲ್ಲಿ ತ್ವರಿತವಾದ ಏರುಪೇರು ಉಂಟಾಗಬಹುದು; ಮಾರಕ ವಿಕಿರಣಗಳು ಇರಬಹುದು; ಆದರೆ ಕಲ್ಪನಾ ಚಾವ್ಲಾ ಅವರಿದ್ದ 'ಕೊಲಂಬಿಯಾ' ಅವರನ್ನು ಆ ಭಯಂಕರ ಪರಿಸರದಿಂದ ರಕ್ಷಿಸುತ್ತಿತ್ತು.

ಅಂತರಿಕ್ಷದ ವಿಶಿಷ್ಟ ಪರಿಸರದಲ್ಲಿ ಗಗನಯಾತ್ರಿಗಳಿಗೆ ತಮ್ಮ ತೂಕದ ಅರಿವೇ ಇರುವುದಿಲ್ಲ. ಈ ಕಾರಣದಿಂದಾಗಿ ಕಲ್ಪನಾ ತಾವಿದ್ದ ಆಕಾಶಲಾಳಿಯ (ಸ್ಪೇಸ್‌ಶಟಲ್) ಒಳಗೆ ತಮ್ಮ ತೂಕದ ಪರಿವೆಯೇ ಇಲ್ಲದೇ ತೇಲಾಡುತ್ತಿದ್ದರು. ಅವರ ಇತರ ಸಹಚರರ ಸ್ಥಿತಿಯೂ ಇದೇ ಆಗಿತ್ತು.

ತೂಕವಿರುವ ಭೂಮಿಯ ಮೇಲೆ ವಿಕಾಸ ಹೊಂದಿರುವ ಮಾನವದೇಹ ಅಂತರಿಕ್ಷದಲ್ಲಿನ ತೂಕರಹಿತ ಪರಿಸರಕ್ಕೆ ಸುಲಭವಾಗಿ ಹೊಂದಿಕೊಳ್ಳುವುದಿಲ್ಲ. ಹೀಗಾಗಿ ಗಗನಯಾತ್ರಿಗಳು ಅನೇಕ ದೈಹಿಕ ಹಾಗೂ ಮಾನಸಿಕ ಯಾತನೆಗಳನ್ನು ಅನುಭವಿಸುತ್ತಾರೆ. ಇವರೊಂದಿಗೇ ಬೆನ್ನುಹುರಿ ನೆಟ್ಟಗಾಗಿ ಅವರ ಉದ್ದ ಸ್ವಲ್ಪ ಹೆಚ್ಚುವುದೂ ಉಂಟು!

ಆದರೆ ಈ ಸಂಬಂಧದಲ್ಲಿ ಹೆಚ್ಚಿನ ತೊಂದ
ಗಳು ಕಂಡುಬರುವುದು ಅಂತರಿಕ್ಷದ
ತಿಂಗಳಾನುಗಟ್ಟಲೆ ಸತತವಾಗಿ ವಾಸಿಸು
ಗಗನಯಾತ್ರಿಗಳಿಗೆ ಮಾತ್ರ. ಕಲ್ಪನ
ಚಾವ್ಲಾ ಅವರು ಸುಮಾರು ಎರಡು ವಾ
ಗಳ ಕಾಲ ಮಾತ್ರ ಅಂತರಿಕ್ಷದಲ್ಲಿ ವಾಸಿ
ದರು.

ಆದರೆ ೨೮೦ ಕಿಲೋಮೀಟರ್ ಎತ್ತ
ದಲ್ಲಿ ಭೂಮಿಯನ್ನು ಸುತ್ತುತ್ತಾ
ಲಾಳಿಯಲ್ಲಿ ವಾಸವಾಗಿದ್ದಷ್ಟು ಕಾಲ ಅವ
ಪ್ರತಿದಿನವೂ ಅನೇಕ ವೈಜ್ಞಾನಿಕ ಪ್ರಯೋ
ಗಳಲ್ಲಿ ನಿರತರಾಗಿದ್ದರು. ಇವುಗಳಲ್ಲಿ ಅನೇಕ
ತೂಕರಹಿತ ಪರಿಸರದಲ್ಲಿ ಅತ್ಯಂತ ಶು
ವಾದ ಲೋಹ ಹಾಗೂ ಸ್ಫಟಿಕಗಳನ
ತಯಾರಿಸುವುದನ್ನು ಕುರಿತಾಗಿದ್ದವು. ಇ
ವಸ್ತುಗಳನ್ನು ಭೂಮಿಯ ಮೇಲಿನ ಪರಿ
ದಲ್ಲಿ ತಯಾರಿಸುವುದು ಬಹುಕಷ್ಟ ಇಲ್ಲ
ಅಸಾಧ್ಯ. ಆದರೆ ಈ ಬಗೆಯ ವಸ್ತುಗ
ಇಂದಿನ ಅನೇಕ ಕೈಗಾರಿಕೆಗ
ಉಪಯುಕ್ತವಾಗಿ ಪರಿಣಮಿಸುತ್ತವೆ.

ಜೊತೆಗೇ ಕಲ್ಪನಾ ಚಾವ್ಲಾ ಅ
ಸೌರವೀಕ್ಷಣೆಗಾಗಿ ನಿರ್ಮಿಸಲಾದ ಉಪ
ವೊಂದನ್ನು ಶಟಲ್‌ನ ಸರಕು ಕೋಣೆಯಿ
ಅಂತರಿಕ್ಷಕ್ಕೆ ಹಾರಿಬಿಡುವ ಕಾರ್ಯದ
ಭಾಗವಹಿಸಿದರು. ಆದರೆ ಆ ಉಪ
ಮುಂದೆ ತೊಂದರೆಯನ್ನು ಅನು
ಸರಿಯಾಗಿ ಕೆಲಸ ಮಾಡಲಿಲ್ಲ. ಲಾ
ಯಾಂತ್ರಿಕ ತೋಳಿನ ನೆರವಿನಿಂದ
ಅದನ್ನು ಒಳಕ್ಕೆಳೆದುಕೊಳ್ಳುವ ಕಾ
ಮೊದಲಿಗೆ ಸಫಲವಾಗದೇ ಸಾ
ಸಮಯವೂ ವ್ಯರ್ಥವಾಯಿತು.
ಕಡೆಗೂ ಆ ಕಾರ್ಯದಲ್ಲಿ ಕಲ್ಪನಾ ಹ
ಸಹಚರರು ಯಶಸ್ವಿಗಳಾದರು.

ತೂಕರಹಿತ ಪರಿಸರವೊಂದನ್ನು ಬಿಟ್ಟರೆ ಕಲ್ಪನಾ ಹಾಗೂ ಸಹಚರರು ತಕ್ಕಮಟ್ಟಿಗೆ ಭೂಮಿಯಲ್ಲಿಯಂತೆಯೇ ಕೊಲಂಬಿಯಾ ಲಾಳಿಯಲ್ಲಿಯೇ ವಾಸಿಸಲು ಸಾಧ್ಯವಿತ್ತು. ಈ ನಿಟ್ಟಿನಲ್ಲಿ ಕಲ್ಪನಾ ಅವರು ಕಟ್ಟಾ ಶಾಕಾಹಾರಿಯಾಗಿರಲಾಗಿ ಅವರು ತರಕಾರಿ ಪ್ರಧಾನವಾಗಿರುವ ಆಹಾರವನ್ನೇ ಪ್ರತಿ ದಿನವೂ ಸೇವಿಸುತ್ತಿದ್ದರು.

ಆಹಾರ ಸೇವನೆ, ಸ್ನಾನ ಹಾಗೂ ಶೌಚಗಳಂತಹ ದೈನಂದಿನ ಕಾರ್ಯಗಳನ್ನು ಅಂತರಿಕ್ಷದ ತೂಕರಹಿತ ಪರಿಸರದಲ್ಲಿ ನಿರ್ವಹಿಸುವುದು ಗಗನಯಾತ್ರಿಗಳಿಗೆ ಕಷ್ಟವೇ ಸರಿ. ಉದಾಹರಣೆಗೆ ಲೋಟವೊಂದರಿಂದ ಅಕಸ್ಮಾತ್ತಾಗಿ ಹೊರಚಿಮ್ಮಿದ ನೀರು ಅಥವಾ ಹಣ್ಣಿನ ರಸದ ತುಣುಕುಗಳು ನೆಲಕ್ಕೆ ಬೀಳದೇ ತೇಲಾಡಲಾರಂಭಿಸುತ್ತವೆ. ಗಗನಯಾತ್ರಿಗಳ ಕಣ್ಣು ಮೂಗುಗಳಿಗೆ ಪ್ರವೇಶಿಸುವ ಮೂಲಕ ಇವು ಗಗನಯಾತ್ರಿಗಳಿಗೆ ಅಪಾಯಕಾರಿಯಾಗಿ ಪರಿಣಮಿಸಬಲ್ಲವು.

ಆದ್ದರಿಂದ ದೈನಂದಿನ ಕಾರ್ಯಗಳನ್ನು ಆದಷ್ಟು ಸುಲಭಸಾಧ್ಯವನ್ನಾಗಿ ಮಾಡುವ ಪರಿಕರಗಳು ಇಂದಿನ ಆಕಾಶಲಾಳಿಯಂಥ ಅಂತರಿಕ್ಷನೌಕೆಗಳಲ್ಲಿ ಅಳವಡಿಸಲ್ಪಟ್ಟಿರುತ್ತವೆ. ಅವುಗಳ ನೆರವಿನೊಡನೆ ಗಗನಯಾತ್ರಿಗಳಿಂದು ಸಾಕಷ್ಟು ಸುಲಭವಾಗಿ ಜೀವನವನ್ನು ಅಂತರಿಕ್ಷದಲ್ಲಿಯೂ ತೂಕರಹಿತ ಪರಿಸರದಲ್ಲಿ ನಿರ್ವಹಿಸಬಹುದು.

ಹೀಗೆ ಭೂಮಿಯ ಮೇಲಿನ ಜೀವನಕ್ಕೆ ಸುಲಭವಾಗಿ ಹೊಂದಿಕೊಂಡ ಮಾನವ ಭೂಮಿಯಾಚೆಗಿನ ಅಂತರಿಕ್ಷಕ್ಕೆ ಕಷ್ಟಪಟ್ಟು ತೆರಳುವುದೇ ಅಲ್ಲದೇ ಅಲ್ಲಿ ಜೀವಿಸಲು ಇಷ್ಟೆಲ್ಲಾ ಪ್ರಯಾಸಪಡುತ್ತಿರುವುದೇಕೆ?

ಮಾನವನ ಹುಟ್ಟುಗುಣವಾದ ಅನ್ವೇಷಣಾ ಹಂಬಲವೇ ಇದಕ್ಕೆ ಮೂಲ ಕಾರಣವಾಗಿದೆ. ಇಂದಲ್ಲಾ ನಾಳೆ ಇತರ ಗ್ರಹಗಳಿಗೆ ನಂತರ ಇತರ ನಕ್ಷತ್ರಲೋಕಗಳಿಗೆ ಪರಿಗಣಿಸಿ ಅವನ್ನು ಅನ್ವೇಷಿಸುವ ಹಂಬಲವನ್ನು ಮಾನವ ಹೊಂದಿದ್ದಾನೆ. ಆದರೆ ಅವನ್ನು ತಲುಪುವ ಮೊದಲು ಅವನು ದೀರ್ಘಕಾಲ ಅಂತರಿಕ್ಷದ ಮೂಲಕವೇ ಪಯಣಿಸಬೇಕು. ಆ ನಡುವೆ ತನ್ನ ದೈಹಿಕ ಹಾಗೂ ಮಾನಸಿಕ ಆರೋಗ್ಯವನ್ನು ಭೂಮಿಯನ್ನು ಬಿಟ್ಟು ತಾನು ಉನ್ನತ ಮಟ್ಟದಲ್ಲಿ ಕಾಪಾಡಿಕೊಳ್ಳಬಲ್ಲನೇ ಎಂಬುದನ್ನು ಅರಿಯುವ ಸಲುವಾಗಿ ಮಾನವ ಅಂತರಿಕ್ಷಕ್ಕೆ ತೆರಳಿ ಅಲ್ಲಿ ಭೂಮಿಯನ್ನು ನೂರಾರು ಇಲ್ಲವೇ ಸಾವಿರಾರು ಬಾರಿ ಸುತ್ತುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾನೆ.

ಈ ರೀತಿ ಅಂತರಿಕ್ಷಯಾನವೆಂಬ ಮಾನವನ ಅಮೋಘ ಸಾಹಸದ ಒಂದು ಮುಖ್ಯ ಅಂಗವಾದ ಶಟಲ್‌ನಲ್ಲಿ ಹದಿನಾರು ದಿನಗಳ ಕಾಲ ಅಂತರಿಕ್ಷದಲ್ಲಿ ವಿಹರಿಸಿದ ಕಲ್ಪನಾ ಚಾವ್ಲಾ ೧೯೯೭ರ ಡಿಸೆಂಬರ್ ೫ರಂದು ಸುರಕ್ಷಿತವಾಗಿ ಭೂಮಿಗೆ ಮರಳಿದರು. ಅಂತರಿಕ್ಷಯಾನದಂಥ ಸಾಮಾನ್ಯರಿಗೆ ಸಾಧ್ಯವಾಗದ ಅಪರೂಪವಾದ ಕಾರ್ಯವೊಂದನ್ನು ತಮ್ಮ ಸ್ವಸಾಮರ್ಥ್ಯ, ಜಾಣ್ಮೆ ಹಾಗೂ ದೃಢನಿರ್ಧಾರಗಳಿಂದಾಗಿ ಸಾಧಿಸಿರುವ ಈ ಮಹಿಳೆ ನಮ್ಮ ದೇಶದಲ್ಲಿ ಜನಿಸಿದರೆಂಬುದೇ ನಮಗೆ ಹೆಮ್ಮೆಯ ವಿಷಯ.

ಸ್ವಾತಂತ್ರ್ಯಪೂರ್ವ ಭಾರತದಲ್ಲಿನ ರಾಜಮಹಾರಾಜರ ತಿಕ್ಕಲುತನಗಳು :

ಎಚ್. ಆರ್. ಚಂದ್ರವದನರಾವ್
೩೮೭೭/೧೦, ೬ನೇ ಕ್ರಾಸ್, ಚಾಮುಂಡಿಪುರಂ
ಮೈಸೂರು-೫೭೦ ೦೦೪

(ಕಳೆದ ಸಂಚಿಕೆಯಿಂದ ಮುಂದುವರೆದುದು)

ರಾಜ್ಯದೊಳಗಿನ ಕಾಡು, ಸಂಬಂಧ ಪಟ್ಟ ರಾಜನ ಖಾಸಗಿ ಆಸ್ತಿ. ಅಲ್ಲಿರುವ ಪಶು, ಪಕ್ಷಿ, ಗಿಡ, ಮರಗಳಿಗೆ ಅವನು ಯಜಮಾನ. ಹುಲಿ ಶಿಕಾರಿ ರಾಜರ ಅಚ್ಚುಮೆಚ್ಚಿನ ಕ್ರೀಡೆ. ಭರತಪುರದ ಮಹಾರಾಜ ಅವನ ೮ನೆಯ ವಯಸ್ಸಿನಲ್ಲಿ ಮೊದಲನೆಯ ಹುಲಿ ಬೇಟೆಯಾಡಿದ್ದ. ಅವನ ಅರಮನೆಯ ಸ್ವಾಗತ ಕೋಣೆಯ ನೆಲಕ್ಕೆ ಪೂರ್ಣ ಮುಚ್ಚುವಂತೆ ಹುಲಿ ಚರ್ಮ ಹಾಸಲಾಗಿತ್ತು. ಅವೆಲ್ಲಾ ಅವನು ಕೊಂದ ಹುಲಿಗಳ ಚರ್ಮ. ಗ್ವಾಲಿಯರ್ ಮಹಾರಾಜ ತನ್ನ ಜೀವಮಾನದಲ್ಲಿ ೧೪೦೦ ಹುಲಿಗಳನ್ನು ಬೇಟೆಯಾಡಿದ್ದ. 'ದಿ ಗೈಡ್ ಟು ಟೈಗರ್ ಷೂಟಿಂಗ್' ಅನ್ನುವ ಪುಸ್ತಕದ ಕರ್ತೃ ಅವನೇ. ಅಂದಿನ ರಾಜರುಗಳಲೆಲ್ಲಾ ಬೇಟೆಗೆ ಮತ್ತು ರತಿಕ್ರೀಡೆಗೆ ಹೆಸರಾದವನೆಂದರೆ ಪಾಟಿಯಾಲ ಮಹಾರಾಜ— ಸರ್ ಭೂಪೇಂದ್ರಸಿಂಗ್. ಆರು ಅಡಿ ನಾಲ್ಕು ಅಂಗುಲ ಎತ್ತರ, ೩೦೦ ಪೌಂಡ್ ತೂಕ, ತಿರುವಿದ ಚೂಪಾದ ಕರಿಮೀಸೆ, ರೇಷ್ಮೆ ಬಟ್ಟೆಯಲ್ಲಿ ಕಟ್ಟಿದ ಗಡ್ಡ, ದರ್ಪಿಷ್ಟ ಕಣ್ಣುಗಳಿದ್ದ ಅವನು ಚಿತ್ರದಲ್ಲಿರುವ ಮೊಘಲ್ ಯೋಧನಂತೆ ಕಾಣುತ್ತಿದ್ದ. ಹಸಿದಾಗ ೨೦ ಪೌಂಡುಗಳಷ್ಟು ಆಹಾರವನ್ನು ಕಬಳಿಸುತ್ತಿದ್ದ. ಅವನಿಗೆ ಟೀ ಜೊತೆ ತಿನ್ನಲು ಮೂರು, ನಾಲ್ಕು ಕೋಳಿ ಬೇಕಿತ್ತು. ರಾಜ ಒಳ್ಳೆಯ ಪೋಲೋ ಆಟಗಾರ. ಅವನ ಬಳಿ ೫೦೦ ಪೋಲೋ ಕುದುರೆಗಳಿದ್ದವು. ಅರಮನೆಯ ಒಂದು ಕೊಠಡಿಯಲ್ಲಿ ಅವನು ಗೆದ್ದ ಟ್ರೋಫಿಗಳನ್ನು ಇಟ್ಟಿದ್ದರು.

ರಾಜನ ಇನ್ನೊಂದು ಹವ್ಯಾಸವೆಂದರೆ ಸ್ತ್ರೀ ಸಹವಾಸ. ಅವನ ಅಂತಃಪುರದಲ್ಲಿ ೩೦೦ ಜನ ಸ್ತ್ರೀಯರಿದ್ದರು. ಅರಮನೆಯ ಉದ್ಯಾನವನದಲ್ಲಿ ಒಂದು ಭಾರಿ ಕೊಳವಿತ್ತು. ಅದರಲ್ಲಿ ಒಟ್ಟಿಗೆ ೫೦–೬೦ ಜನ ಈಜಬಹುದಾಗಿತ್ತು. ಬೇಸಿಗೆಯಲ್ಲಿ ಅದರ ನೀರಿಗೆ ಹಿಮಗೆಡ್ಡೆ ಹಾಕಿ ರಾಜ ಮತ್ತು ಅವನ ಪರಿವಾರದವರು ಈಜುತ್ತಾ ರಾತ್ರಿಯಾಗುವವರೆಗೂ ಇರುತ್ತಿದ್ದರು. ಅರೆನಗ್ನ ನಾರೀಮಣಿಗಳು ದಡದಲ್ಲಿ ತಿಂಡಿತಿನಸುಗಳನ್ನು, ವಿಸ್ಕಿಯನ್ನು ಹಿಡಿದು ನಿಂತಿರುತ್ತಿದ್ದರು. ನೀರಿನಲ್ಲಿ ತೇಲುತ್ತಿದ್ದ ರಾಜ

ಮಧ್ಯೆ ಮಧ್ಯೆ ದಡಕ್ಕೆ ಬಂದು, ತನಗೆ ಬೇಕಾದ ತಿಂಡಿ ತಿನಸುಗಳನ್ನು ಮದ್ಯವನ್ನು ತೆಗೆದುಕೊಳ್ಳುತ್ತಿದ್ದ. ಕೆಲವರ ಸ್ತನ ಹಿಚಕುತ್ತಿದ್ದ, ಕೆಲವರಿಗೆ ಮುತ್ತಿಡುತ್ತಿದ್ದ. ರಾಜನ ಮಲಗುವ ಕೋಣೆಯ ಛಾವಣಿ ಮತ್ತು ಗೋಡೆಗಳಲ್ಲಿ ಸಂಭೋಗದ ನಾನಾ ಭಂಗಿಯ ಚಿತ್ರಗಳು ಇದ್ದವು. ರಾಜ ಈ ಭಂಗಿಗಳನ್ನು ತನ್ನ ರತಿಕ್ರೀಡೆಯಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ.

ಸ್ತ್ರೀಲೋಲ ಭೂಪೇಂದ್ರ ತನ್ನ ಇಂಗದ ಲೈಂಗಿಕದಾಹವನ್ನು ತೃಪ್ತಿಪಡಿಸಿಕೊಳ್ಳಲು ಅನೇಕ ಕ್ರಮಗಳನ್ನು ಕೈಗೊಂಡಿದ್ದ. ತನ್ನ ಸ್ತ್ರೀಯರ ಸ್ತನಗಳನ್ನು ಮತ್ತು ಮುಖಾರವಿಂದವನ್ನು ಪ್ಲಾಸ್ಟಿಕ್ ಸರ್ಜರಿಯಿಂದ ತನ್ನ ಇಷ್ಟಬಂದಂತೆ ಮಾರ್ಪಡಿಸುತ್ತಿದ್ದ. ಅರಮನೆಗೆ ಸೇರಿದ ಪ್ರಯೋಗಾಲಯದಲ್ಲಿ ಕಾಮವನ್ನು ಕೆರಳಿಸುವ ಸೆಂಟ್, ಲೋಶನ್, ಲೇಹಗಳು, ಔಷಧಿಗಳು ತಯಾರಾಗುತ್ತಿದ್ದವು. ಕ್ರೀಡೆ ಮತ್ತು ಅಂಗಸಾಧನೆಯಿಂದ ದೇಹ ಗಟ್ಟಿಯಾಗಿತ್ತು. ಆದರೂ ಅಂತಃಪುರದಲ್ಲಿದ್ದ ೩೦೦ ಜನ ಸ್ತ್ರೀಯರನ್ನು ತೃಪ್ತಿಪಡಿಸಲು ಸಾಧ್ಯವೇ? ಆದ್ದರಿಂದ ರಾಜ ಕಾಮೋದ್ದೀಪಕ ವಸ್ತುಗಳ ದಾಸನಾಗಿದ್ದ. ಆಯುರ್ವೇದ ಮತ್ತು ಯುನಾನಿ ವೈದ್ಯರು ಅವನಿಗೆ ಚಿನ್ನ, ಮುತ್ತು, ಸಾಂಬಾರ ಪದಾರ್ಥಗಳನ್ನು ಹಾಕಿದ ಔಷಧಿಗಳನ್ನು ತಯಾರಿಸಿಕೊಡುತ್ತಿದ್ದರು. ಕ್ಯಾರೆಟ್ ತುರಿ, ಗುಬ್ಬಚ್ಚಿ ಮೆದುಳು ಸೇರಿರುವ ಆಹಾರ ಒಳ್ಳೆಯ ಕಾಮೋದ್ದೀಪಕವೆಂದು ಅದನ್ನು ಸೇವಿಸುತ್ತಿದ್ದ. ಇವುಗಳು ಉಪಯೋಗಕ್ಕೆ ಬಾರದಿದ್ದಾಗ ಫ್ರೆಂಚ್ ವೈದ್ಯರು ಅವನಿಗೆ ರೇಡಿಯಂ ಮತ್ತು ವಿದ್ಯುತ್ ಚಿಕಿತ್ಸೆಯನ್ನು ನೀಡುತ್ತಿದ್ದರು.

ಮೈಸೂರಿನ ಮಹಾರಾಜರು ಚಂದ್ರವಂಶದವರೆಂದು ಹೇಳಿಕೊಳ್ಳುತ್ತಿದ್ದರೆ, ಉದಯಪುರದ ಮಹಾರಾಜ ಸೂರ್ಯವಂಶಕ್ಕೆ ಸೇರಿದವನು. ಪವಿತ್ರ ಗಂಗಾನದಿಯ ದಡದಲ್ಲಿರುವ ಕಾಶಿಯ ಮಹಾರಾಜನಿಗೆ ಬೆಳಗ್ಗೆ ಎದ್ದಕೂಡಲೆ ಪವಿತ್ರ ಗೋವನ್ನು ನೋಡುವ ಅಭಿಲಾಷೆ. ಅವನು ಮಲಗುವ ಕಿಟಕಿಯ ಪಕ್ಕದಲ್ಲಿ ಹಸು ತಂದು ಕಟ್ಟುತ್ತಿದ್ದರು. ಸೂರ್ಯೋದಯವಾಗುವಾಗ ಅದನ್ನು ಚಿವಿದು ಅರಚುವಂತೆ ಮಾಡುತ್ತಿದ್ದರು. ರಾಜ ಕಣ್ಣು ಬಿಟ್ಟು ನೋಡಿದ ಕೂಡಲೆ ಗೋಮಾತೆಯ ದರ್ಶನವಾಗುತ್ತಿತ್ತು. ಒಂದು ಬಾರಿ ರಾಜ ರಾಂಪುರಕ್ಕೆ ಭೇಟಿ ಇತ್ತ. ರಾಂಪುರದ ನವಾಬ ರಾಜನಿಗೆ ಅರಮನೆಯ ಎರಡನೆಯ ಅಂತಸ್ತಿನಲ್ಲಿ ಮಲಗಲು ಏರ್ಪಾಡು ಮಾಡಿದ್ದ. ಅವನು ಎದ್ದ ಕೂಡಲೆ ಗೋವನ್ನು ನೋಡಬೇಕು ಎಂದು ನವಾಬನಿಗೆ ಗೊತ್ತು. ಏನು ಮಾಡುವುದು? ತನ್ನ ಅತಿಥಿಯ ಅಭ್ಯಾಸವನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ಒಂದು ಕ್ರೇನ್ ತರಿಸಿದ್ದ. ಒಂದು ದಪ್ಪ ಗೋಣಿ ತಾಟನ್ನು ತೂಗುಯ್ಯಾಲೆ ರೀತಿ ಕಟ್ಟಿ ಅವರಲ್ಲಿ ಹಸುವೊಂದನ್ನು ಕೂರಿಸಿ ಅವನ್ನು ಮೇಲಕ್ಕೆ ಏರಿಸಿದರು. ಇಂಥ 'ಅಸ್ವಾಭಾವಿಕ ಪ್ರಯಾಣ'ದಿಂದ ಹೆದರಿದ ಹಸು "ಅಂಬಾ" ಎಂದು ಅರಚಲು ಶುರುಮಾಡಿತು. ರಾಜ ಎದ್ದು ಕಿಟಕಿಯ ಕಡೆ ನೋಡಿದ. ಹಸುವನ್ನು ನೋಡಿ ಧನ್ಯನಾದ.

ಹಿಂದೂವಾಗಲಿ, ಮುಸಲ್ಮಾನನಾಗಲಿ, ದೇವರಲ್ಲಿ ನಂಬಿಕೆ ಉಳ್ಳವನಾಗಲಿ ಅಥವಾ ನಾಸ್ತಿಕನಾಗಲಿ, ದರ್ಪಿಷ್ಠ ಕ್ರೂರಿಯಾಗಲಿ ಅಥವಾ ಸಾಧು ಸ್ವಭಾವದವನಾಗಲಿ ಎಲ್ಲಾ

ಮಹಾರಾಜರುಗಳು ಸುಮಾರು ಎರಡು ಶತಮಾನಗಳ ಕಾಲ ಬ್ರಿಟಿಷರು ಇಂಡಿಯಾವನ್ನು ಆಳುವುದಕ್ಕೆ ಆಧಾರಸ್ತಂಭಗಳಾಗಿದ್ದರು. ದುರಾಡಳಿತ ಎಂಬ ಕಾರಣ ಕೊಟ್ಟು ಯಾವೊಬ್ಬ ರಾಜನನ್ನಾದರೂ ಬ್ರಿಟಿಷರು ಸಿಂಹಾಸನದಿಂದ ಇಳಿಸಬಹುದಾಗಿತ್ತು. ಅಂತೆಯೇ ಅವರನ್ನು ಓಲೈಸಿಕೊಂಡು, ಸ್ವಾಮಿನಿಷ್ಠೆ ತೋರಿಸುತ್ತಾ ಬಂದ ರಾಜ ಏನು ಬೇಕಾದರು ಮಾಡಿ—ಕೊಲೆಯನ್ನೂ ಕೂಡ ಮಾಡಿ ಪಾರಾಗಬಹುದಾಗಿತ್ತು.

ಕೆಲವು ರಾಜಮಹಾರಾಜರು ಯುದ್ಧದ ವೇಳೆಯಲ್ಲಿ ಚಕ್ರವರ್ತಿಗೆ ತಮ್ಮ ಹಣ ಮತ್ತು ಸೇನೆಯನ್ನು ಕೊಟ್ಟು ಚಕ್ರವರ್ತಿಯ ಕೃಪಾಕಟಾಕ್ಷಕ್ಕೆ ಒಳಗಾಗಿದ್ದರು. ಜೋಧ್‌ಪುರದ ಮಹಾರಾಜನ ಲ್ಯಾನ್ಸರ್ಸ್ ೨೩ ಸೆಪ್ಟೆಂಬರ್ ೧೯೧೮ರಲ್ಲಿ ತುರ್ಕಿಯವರಿಂದ ಹೈಫಾವನ್ನು ತೆಗೆದುಕೊಳ್ಳಲು ಪ್ಯಾಲಿಸ್ಟೀನ್ ದಂಡಯಾತ್ರೆಯಲ್ಲಿ ಸಹಾಯ ಮಾಡಿತು. ಬಿಕನೀರ್ ಮಹಾರಾಜನ 'ಒಂಟೆ ತುಕಡಿ' ಚೀನ, ಈಜಿಪ್ಟ್ ಮತ್ತು ಫ್ರಾನ್ಸ್ ಯುದ್ಧದಲ್ಲಿ ಬ್ರಿಟಿಷರ ಪರ ಭಾಗವಹಿಸಿತ್ತು. ಜಯಪುರದ ಮಹಾರಾಜ 'ಲೈಫ್‌ಗಾರ್ಡ್'ನ ಮೇಜರ್ ಆಗಿ ೧೯೪೩ರಲ್ಲಿ ಇಟಲಿಯಲ್ಲಿ ಸೇವೆ ಸಲ್ಲಿಸಿದ. ಬರ್ಮಾ ಕದನರಂಗದಲ್ಲಿ ತೋರಿಸಿದ ಧೈರ್ಯಕ್ಕೆ ಬುಂದಿ ಮಹಾರಾಜನಿಗೆ 'ಮಿಲಿಟರಿ ಕ್ರಾಸ್' ಬ್ರಿಟಿಷ್ ಸರ್ಕಾರ ಕೊಟ್ಟಿತ್ತು. ಏಳನೆಯ ಎಡ್‌ವರ್ಡ್‌ನ ಕಿರೀಟಧಾರಣಾ ಮಹೋತ್ಸವದಲ್ಲಿ ಚಕ್ರವರ್ತಿಯ ಸಾರೋಟಿನ ಪಕ್ಕ ಆನರರಿ ಎಡಿಸಿಗಳಾಗಿ ಕುದುರೆ ಮೇಲೆ ಹೋಗುವ ಮರ್ಯಾದೆ ಗ್ವಾಲಿಯರ್, ಕೂಚ್‌ಬಿಹಾರ್ ಮತ್ತು ಪಾಟಿಯಾಲ ಮಹಾರಾಜರಿಗೆ ಲಭಿಸಿತ್ತು. ಅನೇಕ ರಾಜ
ಮಹಾರಾಜರುಗಳು ಆಕ್ಸ್‌ಫರ್ಡ್ ಮತ್ತು
ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯಗಳಿಂ
ಪದವಿಗಳನ್ನು ಪಡೆದಿದ್ದರು. ಸ್ವಾಮಿನಿಷ
ರಾಜಮಹಾರಾಜರ ಅಂಗಿಯ ಎದೆಯ
ಮೇಲೆ ವಜ್ರದಿಂದ ಹೊಳೆಯುವ 'ಆರ್ಡರ್
ಆಫ್ ದಿ ಸ್ಟಾರ್ ಆಫ್ ಇಂಡಿಯಾ'
'ಆರ್ಡರ್ ಆಫ್ ದಿ ಇಂಡಿಯನ್ ಎಂಪೈರ್'
ಪದಕಗಳು ಕಂಗೊಳಿಸುತ್ತಿದ್ದವು.

ರಾಜಮಹಾರಾಜರ ಅಂತಸ್ತನ್ನು
ಗೊತ್ತುಪಡಿಸಲು ಬ್ರಿಟಿಷ್ ಸರ್ಕಾರ
ಚಮತ್ಕಾರಯುಕ್ತ ಮಾರ್ಗವೊಂದನ್ನು
ಅನುಸರಿಸುತ್ತಿತ್ತು. ಅದೇ ಗನ್ ಸೆಲ್ಯೂಟ್
ಚಕ್ರವರ್ತಿಗೆ ತೋರಿಸುವ ಸ್ವಾಮಿನಿಷ್ಠೆಯ
ಮೇಲೆ ಇದು ಅವಲಂಬಿಸಿತ್ತೇ ಹೊರತ
ಆಳುವ ರಾಜ್ಯದ ವಿಸ್ತಾರವಾಗಲೀ ಅಥವ
ರಾಜ ಎಷ್ಟು ಪ್ರಜಾಹಿತೈಷಿ ಎಂಬುದಾಗಲೀ
ಅವಲಂಬಿಸಿರಲಿಲ್ಲ. ಹೈದರಾಬಾದ್, ಗ್ವಾ
ಯರ್, ಕಾಶ್ಮೀರ ಮತ್ತು ಬರೋ
ಮಹಾರಾಜರಿಗೆ ೨೧ ಗನ್ ಸೆಲ್ಯೂಟ
ಗಳಾದರೆ, ಕೆಲವರಿಗೆ ೧೯. ಅನೇಕರಿಗೆ ೧೭
೧೫, ೧೩ ಅಥವಾ ೧೧. ಸುಮಾರು ೪೨
ಜನ ದುರದೃಷ್ಟ ಮಹಾರಾಜರಿಗೆ ಗನ್
ಸೆಲ್ಯೂಟ್ ಇರಲಿಲ್ಲ.

ಕೆಲವು ಮಹಾರಾಜರು ಪಾಶ್ಚಿಮಾ
ವಿದ್ಯಾಭ್ಯಾಸ ಪಡೆದವರಾಗಿದ್ದರು. ಹೆಚ್ಚು
ತಿಳುವಳಿಕೆಯಿದ್ದ ಈ ರಾಜರುಗಳ ಆಡಳಿ
ಪ್ರಾಂತ್ಯಗಳಲ್ಲಿ ಬ್ರಿಟಿಷರು ನಡೆಸುತ್ತಿ
ಆಡಳಿತಕ್ಕಿಂತ ಎಷ್ಟೋ ಪಾ
ಚೆನ್ನಾಗಿತ್ತು. ಪ್ರಜೆಗಳಿಗೆ ಅವರು ಅನೇ
ರೀತಿಯ ಹಕ್ಕು ಮತ್ತು ಸವಲತ್ತುಗಳನ್ನ
ಕೊಟ್ಟಿದ್ದರು. ಬರೋಡ ಮಹಾರಾಜ ಬ

ಪಕ್ಷಿತ್ವವನ್ನು ನಿಷೇಧಿಸಿದ್ದ. ಅವನ ರಾಜ್ಯದಲ್ಲಿ ಕಡ್ಡಾಯ ಮತ್ತು ಉಚಿತ ಪ್ರಾಥಮಿಕ ವಿದ್ಯಾಭ್ಯಾಸವಿತ್ತು. ಅಸ್ಪೃಶ್ಯತಾ ನಿವಾರಣೆಗೆ ಅವನು ತೆಗೆದುಕೊಂಡ ಕಾರ್ಯಕ್ರಮ ಮತ್ತು ಸೇವೆ ಗಾಂಧೀಜಿ ಮಾಡಿದ್ದಕ್ಕಿಂತ ಕಡಿಮೆ ಏನಲ್ಲ. ಅಸ್ಪೃಶ್ಯರ ವಿದ್ಯಾಭ್ಯಾಸಕ್ಕೆ ಆತ ವೈಯಕ್ತಿಕವಾಗಿ ಧನಸಹಾಯ ಮಾಡುತ್ತಿದ್ದ. ಅಂತಹ ಪ್ರಯೋಜನವನ್ನು ಪಡೆದುಕೊಂಡವರಲ್ಲಿ ಡಾ|| ಭೀಮರಾವ್ ಅಂಬೇಡ್ಕರ್ ಒಬ್ಬರು. ಬಿಕನೀರ್ ಮಹಾರಾಜ ರಾಜಾಸ್ಥಾನದ ಮರುಭೂಮಿಯ ಕೆಲವು ಪ್ರದೇಶಗಳಲ್ಲಿ ಕೃತಕ ಸರೋವರಗಳನ್ನು ನಿರ್ಮಿಸಿ ಉದ್ಯಾನವನಗಳನ್ನು ಬೆಳೆಸಿ ಆ ಪ್ರದೇಶಗಳನ್ನು ಭೂಸ್ವರ್ಗಮಾಡಿದ. ಭೂಪಾಲ್‌ನಲ್ಲಿ ಸ್ತ್ರೀಯರಿಗೆ ಸಮಾಜದಲ್ಲಿ ಸಮಾನ ಹಕ್ಕಿತ್ತು. ಅಲ್ಲಿ ಮಹಿಳೆಯರಿಗಿದ್ದ ಸ್ಥಾನಮಾನ ಇಂಡಿಯಾದ ಬೇರೆ ಕಡೆ ಇರಲಿಲ್ಲ. ಏಷ್ಯದಲ್ಲೇ ಅತಿ ಉತ್ಕೃಷ್ಟ ಎನಿಸಿಕೊಳ್ಳುವ ವಿಜ್ಞಾನಮಂದಿರ ಮತ್ತು ಜಲವಿದ್ಯುತ್ ಕಾರ್ಯಾಗಾರಗಳನ್ನು ಮತ್ತು ಕಾರ್ಖಾನೆಗಳನ್ನು ಮೈಸೂರು ರಾಜ್ಯದಲ್ಲಿ ರಾಜ ನಿರ್ಮಿಸಿದ. ಜಯಪುರದ ಮಹಾರಾಜ ಯೂಕ್ಲಿಡ್‌ನ 'ಪ್ರಿನ್ಸ್‌ಪಲ್ಸ್ ಆಫ್ ಜಾಮಿಟ್ರಿ'ಯನ್ನು ಸಂಸ್ಕೃತಕ್ಕೆ ಅನುವಾದ ಮಾಡಿದ. ಅವನು ರಾಜಧಾನಿಯಲ್ಲಿ ವಿಶ್ವದಲ್ಲೇ ಕೀರ್ತಿಗಳಿಸಿದ 'ವೀಕ್ಷಣಾಲಯ'ಗಳನ್ನು (ಅಬ್ಸರ್‌ವೇಟರಿಸ್) ಕಟ್ಟಿಸಿದ. ಎರಡನೆಯ ಮಹಾಯುದ್ಧವಾದ ಅನಂತರ ದೇಶೀಯ ಸಂಸ್ಥಾನಗಳ ಗದ್ದುಗೆ ಏರಿದ ರಾಜರುಗಳು ಹಿಂದಿನ ರಾಜರುಗಳಿಗಿಂತ ಉತ್ತಮರಾಗಿದ್ದರು. ಹಿಂದಿನವರಿಗಿದ್ದಷ್ಟು ಲೋಲುಪ್ತಿ, ಕಾಮದಾಹ, ಆಡಂಬರ ಇವರಿಗೆ ಇರಲಿಲ್ಲ. ತಮ್ಮ ರಾಜ್ಯಗಳಲ್ಲಿ ಅವರು ಅನೇಕ ಸುಧಾರಣೆಗಳನ್ನು ತಂದರು. ಪಾಟಿಯಾಲದ ಎಂಟನೆಯ ಮಹಾರಾಜ ಅರಮನೆಗೆ ಸೇರಿದ್ದ 'ಜನಾನಾ'ವನ್ನು ಮುಚ್ಚಿಸಿದ, ಗ್ವಾಲಿಯರ್ ಮಹಾರಾಜ ಒಬ್ಬ ಸರ್ಕಾರಿ ಅಧಿಕಾರಿಯ ಮಗಳನ್ನು ಮದುವೆಯಾಗಿ ಅರಮನೆಯನ್ನು ಬಿಟ್ಟ. ಹೀಗಿದ್ದರೂ ಸಾರ್ವಜನಿಕರ ಮನಸ್ಸಿನಲ್ಲಿ ರಾಜರು ಮಾಡುತ್ತಿದ್ದ ದುಂದುಗಾರಿಕೆ ಮತ್ತು ಭೋಗ ಜೀವನವೇ ಇನ್ನೂ ಉಳಿದಿದೆ.

ಹೈದರಾಬಾದನ್ನು ಆಳುತ್ತಿದ್ದ ಏಳನೆಯ ನಿಜಾಮನವಾಬ್ ಮೀರ್ ಉಸ್‌ಮಾನ್ ಅಲಿಖಾನ್ ಬಹದ್ದೂರ್ ಒಬ್ಬ ಧರ್ಮನಿಷ್ಠ ಮುಸಲ್ಮಾನ. ಅವನ ರಾಜ್ಯದಲ್ಲಿ ೨೦ ದಶಲಕ್ಷ ಹಿಂದೂಗಳು, ಮೂರು ದಶಲಕ್ಷ ಮುಸ್ಲಿಮರು ಇದ್ದರು. ಆತ ತೆಳ್ಳಗೆ ಐದು ಅಡಿ ಎತ್ತರ, ೯೦ ಪೌಂಡು ತೂಕವಿದ್ದ ವ್ಯಕ್ತಿ. ವೀಳೇದೆಲೆ ಅಗಿದು ಅಗಿದು ಅವನ ಹಲ್ಲೆಲ್ಲವೂ ಕೆಟ್ಟು ಕಂದು ಬಣ್ಣಕ್ಕೆ ತಿರುಗಿತ್ತು. ವಿಷಹಾಕಿ ತನ್ನನ್ನು ಕೊಲೆ ಮಾಡುತ್ತಾರೆಂಬ ಭೀತಿ ಅವನಿಗೆ. ಆದುದರಿಂದ ತಾನು ತೆಗೆದುಕೊಳ್ಳುವ ಆಹಾರವನ್ನೆಲ್ಲಾ ಮೊದಲು ಒಬ್ಬ ತಿಂದು ಪರೀಕ್ಷಿಸಬೇಕೆಂದು ಆಜ್ಞೆ ಮಾಡಿದ್ದ. ಹೈದರಾಬಾದ್ ನಿಜಾಮನಿಗೆ ಮಾತ್ರ 'ಹಿಸ್ ಎಕ್ಸಾಲ್ಟೆಡ್ ಹೈನೆಸ್' ಎಂಬ ನಾಮಾಂಕಿತವನ್ನು ಬ್ರಿಟಿಷ್ ಸರ್ಕಾರ ನೀಡಿತ್ತು. ಆತ ವಿಶ್ವದ ಮೊದಲನೆಯ ಯುದ್ಧ ಪರಿಹಾರಕ್ಕೆಂದು ಬ್ರಿಟಿಷ್ ಸರ್ಕಾರಕ್ಕೆ ೨೫ ಮಿಲಿಯನ್ ಪೌಂಡುಗಳನ್ನು ಕೊಟ್ಟಿದ್ದ. ೧೯೪೭ರಲ್ಲಿ

ವಿಶ್ವದಲ್ಲೇ ಅತಿ ಹೆಚ್ಚಿನ ಶ್ರೀಮಂತನೆಂದು ಅವನನ್ನು ಗುರುತಿಸಿದ್ದರು. ಇಷ್ಟಾದರೂ ಅವನು ತುಂಬಾ ಲೋಭಿ ಮತ್ತು ಆಸೆ ಬುರುಕ. ಹಾಕಿಕೊಳ್ಳುತ್ತಿದ್ದ ದೊಗಲೆ ಇಸ್ತ್ರಿ ಇಲ್ಲದ ಹತ್ತಿಬಟ್ಟೆಯ ಪೈಜಾಮ ಮತ್ತು ಅಗ್ಗದ ಪಾದರಕ್ಷೆ ಸ್ಥಳೀಯ ಮಾರ್ಕೆಟ್‌ನಲ್ಲಿ ಕೊಂಡಂತಹವು. ೩೫ ವರ್ಷಗಳ ಕಾಲ ಅವನು ಕೊಳೆಯಾದ ಅಗರು ತುಂಬಿದ ಒಂದೇ ಟೋಪಿಯನ್ನು ಹಾಕಿಕೊಳ್ಳುತ್ತಿದ್ದ. ನೂರು ಜಾಗಗಳಲ್ಲಿ ಚಿನ್ನದ ತಟ್ಟೆಗಳಲ್ಲಿ ಊಟಮಾಡಲು ವ್ಯವಸ್ಥೆಯಿದ್ದ ಅವನು ತನ್ನ ಮಲಗುವ ಕೋಣೆಯಲ್ಲಿ ಚಾಪೆಮೇಲೆ ಕುಳಿತು ಸ್ಟೀಲ್ ತಟ್ಟೆಯಲ್ಲಿ ಊಟಮಾಡುತ್ತಿದ್ದ. ಅತಿಥಿಗಳು ಸೇದಿ ಎಸೆದ ತುಂಡು ಸಿಗರೇಟುಗಳನ್ನು ಸೇದುತ್ತಿದ್ದ.

ವರ್ಷಕ್ಕೆ ಒಂದು ಬಾರಿ ಹಲವು ಸಂಸ್ಥಾನಗಳಲ್ಲಿ ಶ್ರೀಮಂತ ಪ್ರಜೆಗಳು ತಮ್ಮ ರಾಜರಿಗೆ ಮರ್ಯಾದೆ ತೋರಿಸಲು ಚಿನ್ನದ ನಾಣ್ಯವನ್ನು ಸಾಂಕೇತಿಕವಾಗಿ ಅರ್ಪಿಸುವ ವಾಡಿಕೆ ಇತ್ತು. ರಾಜರುಗಳು ಅದನ್ನು ಮುಟ್ಟಿ ವಾಪಸ್ಸು ಹಿಂದಿರುಗಿಸುತ್ತಿದ್ದರು. ಆದರೆ ಹೈದರಾಬಾದ್ ನಿಜಾಮನ ಬಳಿ 'ಸಾಂಕೇತಿಕ' ಅನ್ನುವುದೇನೂ ಇರಲಿಲ್ಲ. ಕೊಟ್ಟಿದ್ದನ್ನು ಗಬಕ್ಕನೆ ಕಿತ್ತುಕೊಂಡು ಸಿಂಹಾಸನದ ಪಕ್ಕದಲ್ಲಿಟ್ಟುಕೊಂಡಿದ್ದ ಚೀಲಕ್ಕೆ ಅವನು ಅದನ್ನು ಹಾಕುತ್ತಿದ್ದ. ಒಂದು ಬಾರಿ ಶ್ರೀಮಂತನೊಬ್ಬ ಅರ್ಪಿಸಿದ ಚಿನ್ನದ ನಾಣ್ಯ ಕೆಳಕ್ಕೆ ಬಿದ್ದುಹೋಯಿತು. ನಿಜಾಮ ತಕ್ಷಣವೇ ಸಿಂಹಾಸನದಿಂದಿಳಿದು ಅಂಬೆಗಾಲು ಹಾಕುತ್ತಾ ಉರುಳುತ್ತಿದ್ದ ಚಿನ್ನದ ನಾಣ್ಯವನ್ನು ಹಿಡಿದು ತಂದು ಚೀಲಕ್ಕೆ ಹಾಕಿಕೊಂಡ.

ಅವನು ಮಲಗುವ ಕೋಣೆಯಲ್ಲಿದ್ದದ್ದು ಅಗ್ಗದ ಮಂಚ, ಹರಕಲು ಹಾಸಿಗೆ, ಮೂರು ಕುರ್ಚಿಗಳು, ಬೂದಿಯಿಂದ ತುಂಬಿತುಳುಕುವ ಆಷ್‌ಟ್ರೇ ಮತ್ತು ವೇಸ್ಟ್‌ಪೇಪರ್ ಬ್ಯಾಸ್ಕೆಟ್. ಅವನ ಕಛೇರಿ ಧೂಳುಮಯ. ಮೇಲ್ಛಾವಣಿಯಲ್ಲಿ ಜೇಡರ ಬಲೆ. ಹೀಗಿದ್ದರೂ, ಅವನ ಡೆಸ್ಕಿನ ಒಂದು ಡ್ರಾಯರ್‌ನಲ್ಲಿ ಹಳೇ ವೃತ್ತಪತ್ರಿಕೆ ಸುತ್ತಿದ 'ಜೇಕಬ್ ಡೈಮಂಡ್' ಇತ್ತು. ನಿಂಬೆಹಣ್ಣುಗಾತ್ರದ ಕಣ್ಣು ಕೋರೈಸು ವಂತೆ ಹೊಳೆಯುತ್ತಿದ್ದ ಆ ವಜ್ರದ ತೂಕ ೨೮೦ ಕ್ಯಾರೆಟ್. ನಿಜಾಮ ಅದನ್ನು 'ಪೇಪರ್‌ವೇಟ್'ನಂತೆ ಉಪಯೋಗಿಸು ತ್ತಿದ್ದ. ಅವನ ಅಚ್ಚುಕಟ್ಟಿಲ್ಲದ ಉದ್ಯಾನ ವನದಲ್ಲಿ ಡಜನ್‌ಗಟ್ಟಲೆ ಟ್ರಕ್ಕುಗಳಿದ್ದವು. ಅವುಗಳಲ್ಲಿ ಚಿನ್ನದ ಇಟ್ಟಿಗೆಗಳು ತುಂಬಿ ದ್ದವು. ನಿಜಾಮನ ಬಳಿ ಹೇರಳವಾಗಿ ಆಭರಣಗಳು ಇದ್ದವು. ಲಂಡನ್ನಿನ 'ಪಿಕೆಡಿಲಿ ಸರ್ಕಸ್' ವೃತ್ತದ ಕಾಲುದಾರಿಯನ್ನೆಲ್ಲಾ ಮುಚ್ಚಬಹುದಾದಷ್ಟು ರತ್ನ ಅವನ ಬಳಿ ಇತ್ತು. ಅವನ ಸೆಲ್ಲರ್‌ಗಳಲ್ಲಿ ಪಚ್ಚೆ, ಕೆಂಪು ಮತ್ತು ಬೆಲೆ ಬಾಳುವ ಅನೇಕ ವಿಧ ಹರಳುಗಳು ರಾಶಿರಾಶಿ ಇದ್ದವು. ಎರಡು ಮಿಲಿಯನ್ ಪೌಂಡು ನಗದು ಹಣ ಅವನ ಬಳಿ ಇತ್ತು. ಇಲಿ, ಹೆಗ್ಗಣಗಳು ಕರೆನ್ಸಿ ನೋಟುಗಳನ್ನು ತಿಂದು ಹಾಕಿದ್ದೂ ಉಂಟು. ನಿಜಾಮನ ಬಳಿ ಹಣ, ಸೇನೆ ಎಲ್ಲವೂ ಇದ್ದು ಅದೊಂದು ಸ್ವತಂತ್ರ ರಾಜ್ಯವಾ ಬಹುದಾಗಿತ್ತು. ಆದರೆ ಅವನಿಗೆ ಪ್ರಜೆಗ ಬೆಂಬಲವಿರಲಿಲ್ಲ ಮತ್ತು ರಾಜ್ಯಕ್ಕೆ ರೇ

ಪಟ್ಟಣವಿರಲಿಲ್ಲ. ಹಿಂದೂಗಳೇ ಅಧಿಕಸಂಖ್ಯೆಯಲ್ಲಿದ್ದ ಹೈದರಾಬಾದಿನ ಜನರಿಗೆ ನಿಜಾಮನ ಆಳ್ವಿಕೆ ಇಷ್ಟವಾಗಿರಲಿಲ್ಲ. ಹೀಗಿದ್ದರೂ ಫ್ರಾನ್ಸ್‌ನ ಅರ್ಧಭಾಗದಷ್ಟು ದೊಡ್ಡದಾಗಿದ್ದ ಅವನ ರಾಜ್ಯಕ್ಕೆ ಒಂದು ಉಜ್ವಲ ಭವಿಷ್ಯವಿದೆ ಎಂದು ಆತ ತಿಳಿದಿದ್ದ. ಕೊನ್‌ರಾಡ್ ಕೋರ್‌ಫೀಲ್ಡ್ ಆತನಿಗೆ ಬ್ರಿಟಿಷರು ಜೂನ್ ೧೯೪೮ರ ಒಳಗೆ ಇಂಡಿಯಾ ಬಿಟ್ಟು ಹೋಗುತ್ತಾರೆಂದು ಹೇಳಿದಾಗ ಆತ 'ಕೊನೆಗೂ ನಾನು ಸ್ವತಂತ್ರನಾಗುತ್ತೇನೆ', ಎಂದು ಕಿರುಚಿದ.

ಇಂತಹುದೇ ಆಸೆಯಿದ್ದದ್ದು ಇನ್ನೊಬ್ಬ ರಾಜನಿಗೆ. ಕಾಶ್ಮೀರದ ಹರಿಸಿಂಗ್ ಒಬ್ಬ ಹಿಂದೂ, ಜಾತಿಯಲ್ಲಿ ಬ್ರಾಹ್ಮಣ, ೪೦ ಲಕ್ಷದ ರಾಜ್ಯದ ಜನಸಂಖ್ಯೆಯಲ್ಲಿ ಬಹುಮಂದಿ ಮುಸಲ್ಮಾನರು. ಹರಿಸಿಂಗ್ ದೃಢ ನಿರ್ಧಾರ ತೆಗೆದುಕೊಳ್ಳದ ನಿಶ್ಯಕ್ತರಾಜ. ಚಳಿಗಾಲದಲ್ಲಿ ಜಮ್ಮು, ಬೇಸಿಗೆಯಲ್ಲಿ ಶ್ರೀನಗರ ಅವನ ರಾಜಧಾನಿ, ಕಾಶ್ಮೀರ ಸುಂದರ ಪ್ರದೇಶ, ಚೀನ, ಅಫ್‌ಘನಿಸ್ಥಾನ (ಮುಂದೆ ಸೃಷ್ಟಿಯಾಗುವ) ಪಾಕಿಸ್ತಾನ ಎಲ್ಲವೂ ಸೇರುವಂತಹ ಅಚ್ಚುಕಟ್ಟು ಪ್ರದೇಶ. ಒಳ್ಳೆಯ ಸುಧಾರಣೆಗಳನ್ನು ತಂದು ರಾಜ್ಯವನ್ನು ಆಳಬೇಕೆಂದು ಆಡಳಿತವನ್ನು ಪ್ರಾರಂಭಿಸಿದ ರಾಜ ನಿರಂಕುಶ ಪ್ರಭುವಾದ. ರಾಜ್ಯದ ಜೇಲಿನಲ್ಲಿ ರಾಜಕೀಯ ಶತ್ರುಗಳೇ ತುಂಬಿದ್ದರು. ಅದಕ್ಕೆ ಹೊಸದಾಗಿ ಸೇರಿದವರು ಎಂದರೆ ಜವಹರಲಾಲ್ ನೆಹರೂ, ತನ್ನ ಹಿರಿಯರಿದ್ದ ರಾಜ್ಯಕ್ಕೆ ಭೇಟಿ ಕೊಡೋಣವೆಂದು ಬಂದರೆ ಹರಿಸಿಂಗ್ ನೆಹರೂರವರನ್ನು ಬಂಧಿಸಿ ಜೈಲಿಗೆ ಕಳುಹಿಸಿದ.

* * * * *

ಮಹಾರಾಜರನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲವೆಂದು ಗೊತ್ತಾದಾಗ ಕಡೇಪಕ್ಷ ಅವರ ಗತ ಜೀವನವನ್ನಾದರೂ ಉಳಿಸಲು, ಅವರ ಬಗ್ಗೆ ಇದ್ದ ಕಾಗದ ಪತ್ರಗಳನ್ನು ಸುಟ್ಟು ಹಾಕುವ ಪರವಾನಗಿಯನ್ನು ಆಟ್ಲೀಯಿಂದ ಕೊನ್‌ರಾಡ್ ಕೋರ್‌ಫೀಲ್ಡ್ ತಂದಿದ್ದ. ಆತ ಲಂಡನ್ನಿನಿಂದ ವಾಪಸ್ಸಾದೊಡನೆ ದೇಶೀಯ ಸಂಸ್ಥಾನಗಳಲ್ಲಿದ್ದ ಬ್ರಿಟಿಷ್ ರೆಸಿಡೆಂಟರಿಗೂ, ಪೊಲಿಟಿಕಲ್ ಏಜೆಂಟರಿಗೂ, ರಾಜರ ಖಾಸಗಿ ಜೀವನದ ಬಗ್ಗೆ ಇರುವ ಕಡತಗಳೆಲ್ಲವನ್ನೂ ಕೂಡಲೆ ಸುಟ್ಟು ಹಾಕಬೇಕೆಂದು ತಿಳಿಸಿದ. ತನ್ನ ಕಛೇರಿಯಲ್ಲಿ ಎರಡು ಅಡಿ ಎತ್ತರದ ಷೆಲ್ಫ್‌ನಲ್ಲಿ ರಾಜರುಗಳ ಲಂಪಟತನ, ದುಂದುಗಾರಿಕೆ, ವಿಚಿತ್ರ ನಡವಳಿಕೆಗಳಿದ್ದ ಫೈಲುಗಳನ್ನು ತನ್ನ ಎದುರಿಗೇ ಸುಟ್ಟು ಹಾಕಿಸಿದ. ಈ 'ಪತ್ರಮೇಧ'ದಿಂದ ಎದ್ದ ಉರಿ ಬಹಳ ದೂರದವರೆಗೂ ಕಾಣಿಸುತ್ತಿತ್ತು. ಕಪ್ಪು ಹೊಗೆ ಆಕಾಶವನ್ನು ತುಂಬಿತ್ತು. ದೇಶೀಯ ಸಂಸ್ಥಾನಗಳ ರಾಜಧಾನಿಗಳಲ್ಲಿಯೂ ರೆಸಿಡೆಂಟರು ಈ ಕ್ರಮ ತೆಗೆದುಕೊಂಡಿದ್ದರು. ಮುಂದೆ ಇಂಡಿಯಾ ಸ್ವಾತಂತ್ರ್ಯವಾದಾಗ ಅದನ್ನಾಳುವವರ ಕೈಗೆ ಇವು ಸಿಕ್ಕಿ ರಾಜಮಹಾರಾಜರುಗಳನ್ನು ಬ್ಲಾಕ್‌ಮೇಲ್ ಮಾಡುವಂತಹ ಸಂದರ್ಭ ತಪ್ಪಿಸಲೆಂದೇ ಈ ಕಾರ್ಯ. ರಾಜಮಹಾರಾಜರಿಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಸುಟ್ಟು ಹಾಕುವ

ಕಾರ್ಯ ಕಂಡು ನೆಹರೂ ತಮ್ಮ ಪ್ರತಿ ಭಟನೆ ತೋರಿಸಿದರು. ಆದರೆ ಅಷ್ಟರಲ್ಲಿ ಪಾಟಿಯಾಲ, ಹೈದರಾಬಾದು, ಇಂದೂರು, ಮೈಸೂರು, ಬರೋಡ, ಚಿತ್ರಾಲ್, ಕೊಚ್ಚಿನ್ ಇವುಗಳಲ್ಲಿ ಬ್ರಿಟಿಷ್ ಅಧಿಕಾರಿಗಳು ಭಾರತದ ಚರಿತ್ರೆಯಲ್ಲಿ ಸೇರಬಹುದಾದಂತಹ ರಾಜರ ವರ್ಣಮಯ ಘಟನೆಗಳನ್ನೊಳಗೊಂಡ ಕಡತಗಳು ಸುಟ್ಟು ಹೋಗಿದ್ದವು. ರಾಜರ ಅಸ್ವಭಾವಿಕ ಮತ್ತು ಲೈಂಗಿಕ ಜೀವನದ ವಿವರಗಳಿದ್ದ ಫೈಲುಗಳು ಉರಿದು ಹೋಗಲು ಗಂಟೆಗಳೇ ಬೇಕಾದವು.

ರಾಂಪುರದ ನವಾಬ ವರ್ಷದಲ್ಲಿ ಎಷ್ಟು ಜನ ಕನ್ಯೆಯರ ಕನ್ಯಾಪೊರೆಯನ್ನು ಹರಿಯಬಲ್ಲೆ ಎಂಬುದರ ಬಗ್ಗೆ ಪಕ್ಕದ ರಾಜರುಗಳ ಜೊತೆ ಪಂದ್ಯ ಕಟ್ಟುತ್ತಿದ್ದನಂತೆ. ಹಳ್ಳಿಗಳಿಗೆ ಆಸ್ಥಾನಿಕರುಗಳನ್ನು ಕಳುಹಿಸಿ ಅಲ್ಲಿರುವ ಕನ್ಯೆಯರನ್ನು ಎಳೆದುಕೊಂಡು ಬಂದು ಅವರೊಡನೆ ಸಂಭೋಗ ನಡೆಸುತ್ತಿದ್ದ. ಕನ್ಯೆಯರು ಹಾಕಿಕೊಂಡ ಮೂಗಿನ ಉಂಗುರಗಳನ್ನು ಅವರಿಂದ ತೆಗೆದುಕೊಂಡು ಅದನ್ನೆಲ್ಲಾ ಕರಗಿಸಿದಾಗ ಪೌಂಡುಗಳ ತೂಕದ ಬಂಗಾರದ ಗಟ್ಟಿ ದೊರೆಯಿತು.

ಕಾಶ್ಮೀರ ಮಹಾರಾಜನ ಬಗ್ಗೆ ಎದ್ದ ಕಳಂಕ ಮರೆಯುವಂತಹುದಲ್ಲ. ಆತ ಲಂಡನ್ನಿನ ಸವಾಯ್ ಹೊಟೇಲಿನಲ್ಲಿ ಒಬ್ಬ ಸ್ತ್ರೀಯೊಡನೆ ಇದ್ದಾಗ ಬ್ಲಾಕ್ ಮೇಲ್ ಮಾಡುವ ಒಂದು ಗುಂಪಿಗೆ ಸಿಕ್ಕಿಹಾಕಿಕೊಂಡ. ಅವರು ವಿಷಯವನ್ನು ಬಚ್ಚಿಡಲು ರಾಜ್ಯದ ಬೊಕ್ಕಸವನ್ನು ಖಾಲಿಮಾಡಿಸಿದರು. ಈ ಮಧ್ಯೆ ಆ ಹೆಂಗಸಿನ ನಿಜವಾದ ಗಂಡ ತನ್ನ ಹೆಂಡತಿಯನ್ನು ಎರವಲಾಗಿ ಕೊಟ್ಟಿದ್ದಕ್ಕೆ ತನ್ನಿಂದ ಸರಿಯಾದ ಸಂಭಾವನೆ ಸಿಗಲಿಲ್ಲವೆಂದು ಕೋರ್ಟಿಗೆ ಹೋದ. ಕೋರ್ಟಿನಲ್ಲಿ ಮಹಾರಾಜ ಯಾರು ಎಂದು ಗೊತ್ತಾಗಬಾರದೆಂದು ಆತನನ್ನು 'ಮಿಸ್ಟರ್ ಎ' ಎಂದು ಕರೆಯುತ್ತಿದ್ದರು. ಹರಿಸಿಂಗ್ ಕಾಶ್ಮೀರಕ್ಕೆ ವಾಪಸ್ಸಾದ ಮೇಲೆ ತನ್ನ ಲೈಂಗಿಕ ಜೀವನವನ್ನು ಮಾರ್ಪಡಿಸಿಕೊಂಡ; ಸಲಿಂಗ ಪ್ರೇಮಿಯಾದ.

ಹೈದರಾಬಾದಿನ ನಿಜಾಮನಿಗೆ ಅಶ್ಲೀಲ ಚಿತ್ರಗಳನ್ನು ಕಂಡರೆ ತುಂಬಾ ವ್ಯಾಮೋಹ. ಅವನ ಬಳಿ ಭಾರತದಲ್ಲೇ ಅತ್ಯಂತ ಹೆಚ್ಚಿನ ಸಂಖ್ಯೆಯಲ್ಲಿ ಅಶ್ಲೀಲ ಫೋಟೋಗಳಿದ್ದವು. ತನ್ನ ಅತಿಥಿಗಳು ತಮ್ಮ ಬೆಡ್‌ರೂಂಗಳಲ್ಲಿ ಮತ್ತು ಬಾತ್‌ರೂಂಗಳಲ್ಲಿ ಮಾಡುವುದನ್ನೆಲ್ಲಾ ಚಿತ್ರೀಕರಿಸಲು ನವಾಬ ಕೊಠಡಿಗಳ ಛಾವಣಿಗಳಲ್ಲಿ ಮತ್ತು ಗೋಡೆಗಳಲ್ಲಿ ಕ್ಯಾಮರಾಗಳನ್ನು ಹುದಿಗಿಸಿಟ್ಟಿದ್ದ.

ಆಳ್ವಾರ್ ಮಹಾರಾಜ ತಾನು ರಾಮನ ಅವತಾರ ಎಂದು ತಿಳಿದುಕೊಂಡಿದ್ದ. ಯಾವಾಗಲು ಕೈಗಳಿಗೆ ಹಸ್ತ ಚೀಲವನ್ನು ಹಾಕಿಕೊಳ್ಳುತ್ತಿದ್ದ ಅವನು ಯಾರೊಡನೆಯೂ ಬರಿಗೈಯಲ್ಲಿ ಹಸ್ತ ಲಾಘವ ಮಾಡುತ್ತಿರಲಿಲ್ಲ. ಇದರಿಂದ ಚಕ್ರವರ್ತಿಗೆ ಅವರ ಮೇಲೆ ಕೋಪವಿತ್ತು. ರಾಜ ತನ್ನ ತಲೆಗೆ ಶ್ರೀರಾಮಚಂದ್ರ ಹಾಕಿಕೊಳ್ಳುತ್ತಿದ್ದ ಕಿರೀಟದ ಅಳತೆಯನ್ನು ಜೋತಿಷ್ಯದಿಂದ ಲೆಕ್ಕ ಹಾಕಿಸಿ ಅಂತಹ ಕಿರೀಟವನ್ನು ಮಾಡಿಸಿಕೊಂಡಿದ್ದ. ಆತನೊಬ್ಬ ಒಳ್ಳೆಯ ಬೇಟೆಗಾರ. ಬೇಟೆಗೆ ಹುಲಿ, ಚಿರತೆಗಳನ್ನು ಆಕರ್ಷಿಸಲು ಕುರಿ, ಮೇಕೆಗಳನ್ನು ಕೊಂಡು ಹೋಗುವ ಬದಲು ಬಡವರ ಮಕ್ಕಳನ್ನು


ರಾಜ ಎತ್ತಿಕೊಂಡು ಹೋಗುತ್ತಿದ್ದ. ಮಗುವಿನ ತಾಯಿತಂದೆಗಳಿಗೆ ಹುಲಿ ಅಥವಾ ಚಿರತೆ ಮಗವನ್ನು ಹಿಡಿಯುವುದಕ್ಕಿಂತ ಮುಂಚೆ ತನ್ನ ಗುಂಡು ಅದಕ್ಕೆ ತಾಕಿರುತ್ತದೆ ಎಂಬ ಆಸ್ವಾಸನೆ ಕೊಡುತ್ತಿದ್ದ. ರಾಜ ಒಬ್ಬ ಸಲಿಂಗ ಪ್ರೇಮಿ. ತನ್ನ ರಾಜ್ಯದ ಉನ್ನತ ಅಧಿಕಾರಿಗಳನ್ನು ನೇಮಿಸಿಕೊಳ್ಳುವ ಮೊದಲು ಅವರು ಪರೀಕ್ಷೆಗೆ ಇವನ ಹಾಸಿಗೆಗೆ ಬರಬೇಕಾಗಿತ್ತು. ಆಹ್ವಾನದ ಮೇಲೆ ರಾಜ ವೈಸ್‌ರಾಯ್ ಭವನಕ್ಕೆ ಭೋಜನ ಕೂಟಕ್ಕೆ ಬಂದ. ಲೇಡಿ ವಿಲ್ಲಿಂಗ್‌ಡನ್ ಅವನ ಪಕ್ಕದಲ್ಲಿ ಕುಳಿತಳು. ರಾಜ ಬೆರಳಿಗೆ ಹಾಕಿಕೊಂಡಿದ್ದ ದೊಡ್ಡ ಹೊಳೆಯುವ ವಜ್ರದುಂಗುರವನ್ನು ಕಂಡು ಆಕೆ ಅದನ್ನು ಹೊಗಳಿದಳು. ಆಳ್ವಾರ್ ಉಂಗುರವನ್ನು ತೆಗೆದು ಅವಳ ಕೈಗಿಟ್ಟ. ಆಕೆ ಉಂಗುರವನ್ನು ತನ್ನ ಬೆರಳಿಗೆ ಹಾಕಿಕೊಂಡು ನೋಡಿ ಸಂತಸಪಟ್ಟು, ನಂತರ ವಾಪಸ್ಸು ಕೊಟ್ಟಳು. ರಾಜ ಆಳಿಗೆ ಹೇಳಿ ಒಂದು ಪಾತ್ರೆಯಲ್ಲಿ ನೀರು ತರಿಸಿ ಅದರಲ್ಲಿ ಉಂಗುರವನ್ನು ತೊಳೆದು ನಂತರ ಅದನ್ನು ತನ್ನ ಬೆರಳಿಗೆ ಹಾಕಿಕೊಂಡ. ರಾಜಮಹಾರಾಜರ ಒಡವೆಗಳನ್ನು ಹೊಗಳಿ ಅವರು ಕೊಟ್ಟ ಒಡವೆಗಳ ರಾಶಿ ಲೇಡಿ ವಿಲ್ಲಿಂಗ್‌ಡನ್‌ಳ ಬಳಿ ಇತ್ತು. ಕ್ಷಮಿಸಲಾರದ ಇನ್ನೊಂದು ಅಪರಾಧ ಆಳ್ವಾರ್ ಮಹಾರಾಜ ಮಾಡಿದ್ದೆಂದರೆ ಒಂದು ಕುದುರೆಯ ಕೊಲೆ. ಪೋಲೋ ಆಟವಾಡುತ್ತಿದ್ದರು. ಒಂದು ಕುದುರೆ ಹಟಮಾಡಿದ್ದನ್ನು ಕಂಡು ರಾಜ ಅದರ ಮೇಲೆ ಸೀಮೆ ಎಣ್ಣೆ ಸುರಿಸಿ ಸ್ವತಃ ಅದಕ್ಕೆ ಬೆಂಕಿಹಚ್ಚಿದ. ಪ್ರಾಣಿಗಳನ್ನಿರಲಿ, ಅವನು ಜನಾನಾದಲ್ಲಿದ್ದ ಅನೇಕರಿಗೂ ಈ ಶಿಕ್ಷೆ ಕೊಟ್ಟಿದ್ದನಂತೆ. ಕಾಲಕ್ರಮದಲ್ಲಿ ಅವನು ಗದ್ದುಗೆ ಕಳೆದುಕೊಂಡು ರಾಜ್ಯದಿಂದ ಹೊರಕ್ಕೆ ಹೋಗಬೇಕಾಯಿತು.

* * * * *

ತನ್ನಷ್ಟೇ ಗನ್ ಸೆಲ್ಯೂಟ್ ತನ್ನ ರೆಸಿಡೆಂಟಿಗೂ ಇರುವುದನ್ನು ಕಂಡು ಬರೋಡ ಮಹಾರಾಜನಿಗೆ ಅತೃಪ್ತಿ. ತನಗೆ ಗನ್ ಸೆಲ್ಯೂಟ್ ಇದ್ದಾಗ ಗುಂಡು ಹಾರಿಸಲು ಆತ ಚಿನ್ನದ ಕ್ಯಾನನ್ ಮಾಡಿಸಿದ್ದ. ರೆಸಿಡೆಂಟಿಗೆ ವಿಷಯ ಗೊತ್ತಾಯಿತು. ಅದು ತನಗಿರಲಿಲ್ಲ. ಕೋಪಗೊಂಡ ಅವನು ಚಕ್ರವರ್ತಿಗೆ ರಾಜ ಅನೀತಿವಂತ, ಅವನು ರಾಣೀವಾಸದಲ್ಲಿರುವ ಹೆಂಗಸರನ್ನು ಗುಲಾಮರನ್ನಾಗಿ ಮಾಡಿಕೊಂಡಿದ್ದಾನೆಂದು ತಿಳಿಸಿದ. ಇಂತಹ ರೆಸಿಡೆಂಟನ್ನು ಏನು ಮಾಡಬೇಕು? ಜ್ಯೋತಿಷಿಗಳನ್ನು ಕರೆಸಿ ಕೇಳಿದ. ಅವರು ಲೆಕ್ಕಹಾಕಿ ವಜ್ರದ ನುಣ್ಣನೆಯ ಪುಡಿಯನ್ನು ಅವನಿಗೆ ಕೊಟ್ಟು ಅವನನ್ನು ಅಂತ್ಯಗೊಳಿಸಬೇಕೆಂದು ಹೇಳಿದರು. ರಾಜ ಕರ್ನಲ್ ರ್‍ಯಾಂಕಿಗೆ ತಕ್ಕುದಾದಂತಹ ಒಂದು ವಜ್ರವನ್ನು ಪುಡಿ ಮಾಡಿಸಿ ರೆಸಿಡೆಂಟನಊಟದಲ್ಲಿ ಸೇರಿಸುವ ಏರ್ಪಾಡು ಮಾಡಿದ. ರೆಸಿಡೆಂಟಿಗೆ ಹೊಟ್ಟೆನೋವು ಅವನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಜಠರ ತೊಳೆದರು. ಅವನು ಬದುಕಿಕೊಂಡ. ರೆಸಿಡೆಂಟನನ್ನು ಕೊಲೆ ಮಾಡಿಸಲು ಪ್ರಯತ್ನಿಸಿದನೆಂದು ರಾಜನನ್ನು ಸಿಂಹಾಸನ

ದಿಂದ ಇಳಿಸಿ ವೈಸ್‌ರಾಯ್ ಅವನನ್ನು ರಾಜ್ಯದಿಂದ ಗಡೀಪಾರು ಮಾಡಿದ.

ಪಾಟಿಯಾಲದ ಮಹಾರಾಜನಿಗೆ ತನ್ನ ಗೆಳೆಯ ಬರೋಡ ಮಹಾರಾಜನಿಗೆ ಆದ ಗತಿ ಕಂಡು ವೈಸ್‌ರಾಯ್ ಮೇಲೆ ಪ್ರತೀಕಾರ ತೆಗೆದುಕೊಳ್ಳಬೇಕೆನಿಸಿತು. ವೈಸ್‌ರಾಯ್ ಪಾಟಿಯಾಲಕ್ಕೆ ಬಂದಾಗ ಅವನಿಗೆ ೩೧ ಗನ್ ಸೆಲ್ಯೂಟ್ ಕೊಡಬೇಕಾಗಿತ್ತು. ಫಿರಂಗಿಯಲ್ಲಿ ಸ್ವಲ್ಪವೇ ಮದ್ದು ಹಾಕಿಸಿದ್ದರಿಂದ ಅದರಿಂದ ಹೊರ ಬಿದ್ದ ಶಬ್ದ ಪಟಾಕಿ ಹೊಡೆದಂತಿತ್ತು. ಇಂತಹ ಸಾವಿರಾರು ಘಟನೆಗಳನ್ನೊಳ ಗೊಂಡ ಕಡತಗಳನ್ನು ಕೋರ್‌ಫೀಲ್ಡ್ ಸುಡಿಸಿ ಹಾಕಿದ. ಅವನ ಚಿತಾವಣೆಯಿಂದ ಭಾರತಾದ್ಯಂತ ರಾಜಮಹಾರಾಜರು ಅವರು ರೈಲು, ಅಂಚೆ, ತಂತಿ ಮುಂತಾದ ವಿಷಯ ಗಳಲ್ಲಿ ಚಕ್ರವರ್ತಿಯೊಡನೆ ಮಾಡಿಕೊಂಡ ಕರಾರುಗಳನ್ನು ಇನ್ನು ಮುಂದೆ ಪಾಲಿಸಿ ಕೊಂಡು ಹೋಗುವುದಿಲ್ಲವೆಂದು ವೈಸ್‌ರಾಯ್‌ಗೆ ತಿಳಿಸಿದರು.



ಪ್ರಜಾಪ್ರಭುತ್ವದಲ್ಲಿ ಬಲಿಷ್ಠನಿಗಿರುವ ಅವಕಾಶಗಳು ದುರ್ಬಲನಿಗೂ ಇರಬೇಕು. ಇದೇ ನಿಜವಾದ ಪ್ರಜಾಪ್ರಭುತ್ವ.

—ಗಾಂಧೀಜಿ

ಒಬ್ಬನು ಸಾವಿರಸಲ ಸಾವಿರ ಜನರನ್ನು ಗೆಲ್ಲಬಹುದು. ಅದಕ್ಕಿಂತ ಯಾರು ತನ್ನನ್ನು ತಾನೇ ಗೆಲ್ಲುತ್ತಾನೋ ಅವನೇ ನಿಜವಾದ ವೀರನೂ, ಪರಾಕ್ರಮಿಯೂ ಆಗಿರುತ್ತಾನೆ.

—ಮಹಾವೀರ

ಜ್ಯೋತಿಷ್ಯದ ಭವಿಷ್ಯವಾಣಿ—ಒಂದು ಅನುಭವ

ಪ್ರೊ|| ಆರ್. ಎನ್. ದೊರೆಸ್ವಾಮಿ
ಸಂಖ್ಯೆ ೬, ೧೩ನೆಯ ಮುಖ್ಯರಸ್ತೆ
ಜಯನಗರ, ಮೈಸೂರು-೫೭೦ ೦೧೪

ಅಂದು ಮಧ್ಯಾಹ್ನ ನಾನು ಎಂದಿನಂತೆ ಗುರುಗಳ (ವೀಣಾ ಕೆ. ವೆಂಕಟಗಿರಿಯಪ್ಪನವರು) ಮನೆಗೆ ಹೋದಾಗ ಅವರು ಆಗ ತಾನೇ ಊಟ ಮುಗಿಸಿ ಹರ್ಷಚಿತ್ತರಾಗಿ ಕುಳಿತು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ನನ್ನನ್ನು ನೋಡಿ ಆದರದಿಂದ ಬರಮಾಡಿಕೊಂಡರು. ಅವರು ಇಂದು ಇಷ್ಟು ಸಂತೋಷದಿಂದಿರಲು ಕಾರಣವೇನಿರಬಹುದೆಂದು ಯೋಚಿಸುತ್ತಿದ್ದಂತೆಯೇ ಅವರೇ ಹೇಳಿದರು "ನೋಡಯ್ಯಾ, ನಾನು ಉತ್ತರ ಭಾರತದ ಒಂದು ರಾಜ ವಿವಾಹ ಸಮಾರಂಭಕ್ಕೆ ಹೋಗಬೇಕಾಗಿದೆ. ನೀನು ಹೇಗೂ ಹಿಂದಿ ವಿಶಾರದ ಆಗಿದ್ದೀಯ, ನನ್ನ ಜತೆ ಬಂದರೆ ತುಂಬಾ ಅನುಕೂಲ. ಒಂದೆರಡು ತಿಂಗಳು ಪ್ರವಾಸ ಮಾಡಬೇಕಾಗಬಹುದು. ನಿನಗೂ ಸಂಸಾರದ ಜವಾಬ್ದಾರಿ ಇದೆ. ಯಾವುದಕ್ಕೂ ಯೋಚಿಸಿ ಹೇಳು" ಎಂದರು. ಗುರುಗಳ ಅಂದಿನ ಪ್ರಸನ್ನತೆಗೆ ಈ ಪ್ರವಾಸದ ವಿಷಯವೇ ಕಾರಣವೆಂದು ಆಗ ನನಗೆ ಹೊಳೆಯಿತು. ಇಂತಹ ಪ್ರವಾಸ ಹೋಗುವುದೆಂದರೆ ಗುರುಗಳಂತೆಯೇ ನನಗೂ ಎಲ್ಲಿಲ್ಲದ ಖುಷಿ. ಇದರ ಮೇಲೆ, ಬೊಂಬಾಯಿ ಮುಂತಾದ ಕಡೆಗೆ ಹೋಗುವುದೆಂದರೆ ಕೇಳಬೇಕೇ ? ನನ್ನ ಹೃದಯ ಆನಂದದಿಂದ ಕುಣಿದಾಡಿತು. ಎಷ್ಟೇ ಕಷ್ಟವಾದರೂ ಸರಿ ಈ ಸದವಕಾಶವನ್ನು ಬಿಡಬಾರದೆಂದು ತೀರ್ಮಾನಿಸಿದೆ. ಮನೆಯಲ್ಲಿ ನನ್ನ ತಂದೆತಾಯಿಯರಿಗೆ ಈ ವಿಷಯ ತಿಳಿಸಿದಾಗ ಅವರೂ ತಮ್ಮ ಸಂತೋಷವನ್ನು ವ್ಯಕ್ತಪಡಿಸಿ ಇದಕ್ಕೆ ಕೂಡಲೇ ಸಮ್ಮತಿಸಿದರು. ನಾನು ಗುರುಗಳಿಗೆ ನನ್ನ ಒಪ್ಪಿಗೆಯನ್ನು ತಿಳಿಸಿದಾಗ ಅವರಿಗೂ ತುಂಬ ಸಂತೋಷವಾಯಿತು.

ಸರಿ, ಪ್ರವಾಸ ಹೊರಡುವ ಸಿದ್ಧತೆಗೆ ಪ್ರಾರಂಭ ಮಾಡಿದೆವು. ಮೈಸೂರು ಮಹಾರಾಣಿಯವರ ಸಂಬಂಧದ ಒಂದು ರಾಜ ವಿವಾಹ ಗುಜರಾತಿನ ಒಂದು ಸಂಸ್ಥಾನದಲ್ಲಿ ನಡೆಯುವುದಿತ್ತು. ಮೈಸೂರು ಅರಮನೆಯ ವತಿಯಿಂದ ಗುರುಗಳನ್ನು ವೀಣಾವಾದನಕ್ಕೆ ಅಲ್ಲಿಗೆ ಕಳುಹಿಸುವ ಏರ್ಪಾಡಾಗಿತ್ತು. ಉಡಿಗೆ ತೊಡಿಗೆಗಳಲ್ಲಿ ಬಹಳ ವರ್ಣರಂಜಿತರಾಗಿರುತ್ತಿದ್ದ ಗುರುಗಳು ನಾನೂ ಹಾಗೆಯೇ ಇರಬೇಕೆಂದೂ, ಅದೇ ರಾಜರ ಆಸ್ಥಾನಗಳಲ್ಲಿನ ಗೌರವ ಗಾಂಭೀರ್ಯಗಳಿಗೆ ತಕ್ಕುದೆಂದೂ ತಿಳಿಸಿದರು. ಅವರ ಆಜ್ಞೆಯಂತೆ ನಾನೂ ಒಳ್ಳೆಯ ನಿಲುವಂಗಿ, ಷರಾಯಿ, ಜರತಾರಿ ಪೇಟ, ವಲ್ಲಿಗಳು ಎಲ್ಲವನ್ನೂ ಸಿದ್ಧಪಡಿಸಿಕೊಂಡಿದ್ದಾಯಿತು. ಗುರುಗಳಂತೂ ತಮ್ಮ ಸಕಲ ರಾಜಮರ್ಯಾದೆಯ ದಿರುಸುಗಳನ್ನೂ, ಬಿರುದು ಬಾವಲಿಗಳನ್ನೂ ಪೆಟ್ಟಿಗೆಗಳಲ್ಲಿ ಸಿದ್ಧಪಡಿಸಲು ನನಗೆ ಆದೇಶಿಸಿದರು.

ಅವರು ಆಸ್ಥಾನದ ಉಡುಪನ್ನು ಧರಿಸಿದಾಗ ಅವರೂ ಒಬ್ಬ ಮಹಾರಾಜರಂತೆಯೇ ಕಂಗೊಳಿಸುತ್ತಿದ್ದರು. ಅಂತಹ ಸ್ಫುರದ್ರೂಪಿಗಳವರು.

ಇಷ್ಟೆಲ್ಲಾ ಸಿದ್ಧತೆಗಳಾದ ಮೇಲೆ ಇನ್ನೇನು ಪ್ರವಾಸ ಹೊರಡುವ ದಿನ ಹತ್ತಿರ ಬರುತ್ತಿದೆ ಎನ್ನುವಾಗ ನನಗೆ ಒಂದು ದೊಡ್ಡ ಸಮಸ್ಯೆ ಎದುರಾಯಿತು. ನನ್ನ ಗುರುಗಳಿಗೆ ಫಲಜ್ಯೋತಿಷ್ಯದಲ್ಲಿ ಅಚಲ ನಂಬಿಕೆ. ಅವರು ಮನೆಯಿಂದ ಹೊರಗೆ ಹೊರಟಾಗ ಒಂದು ಬೆಕ್ಕು ಅಡ್ಡ ಬಂದರೆ, ಒಂಟಿ ಬ್ರಾಹ್ಮಣ ಎದುರಾದರೆ ಅಲ್ಲಿಂದಲೇ ಮನೆಗೆ ಹಿಂತಿರುಗಿ ಬಿಡುತ್ತಿದ್ದರು. ಅಷ್ಟು ನಂಬಿಕೆ ಅವರಿಗೆ ಈ ಶಕುನಗಳಲ್ಲಿ. ಫಲ ಜ್ಯೋತಿಷ್ಯವನ್ನಂತೂ ಅವರು ಬಹಳವಾಗಿ ನೆಚ್ಚಿಕೊಂಡಿದ್ದರು. ಅವರು ತಮ್ಮ ಜಾತಕವನ್ನು ಆಗಾಗ ಜ್ಯೋತಿಷಿಗಳಿಗೆ ತೋರಿಸಿ ಅವರು ಬರೆದು ಕೊಡುವ ಫಲಾ ಫಲಗಳನ್ನು ನಂಬಿ ಕಾತರದಿಂದ ಅವುಗಳು ಕೈಗೂಡುವುದನ್ನೇ ಎದುರು ನೋಡುತ್ತಿದ್ದರು. ಆದರೆ, ಅಂತಹ ಒಂದು ಭವಿಷ್ಯ ವಾಣಿಯೂ ಅವರಿಗೆ ಫಲಿಸಲಿಲ್ಲ. ಇಷ್ಟಾದರೂ, ಅವರಿಗೆ ಫಲಜ್ಯೋತಿಷ್ಯದಲ್ಲಿದ್ದ ನಂಬಿಕೆ ಮಾತ್ರ ಕಡಿಮೆಯಾಗಲಿಲ್ಲ. ಕಾರಣ, ಆ ಜ್ಯೋತಿಷಿಗಳು ಇನ್ನೇನೋ ಲೆಕ್ಕಾಚಾರ ಹಾಕಿ ಕೆಲವು ಗ್ರಹದೋಷ ನಿವಾರಣೆಗಾಗಿ ಇನ್ನೇನೋ ಪರಿಹಾರಗಳನ್ನು ಸೂಚಿಸಿ ಅವರಿಗೆ ಮತ್ತೆ ಆಸೆ ಹುಟ್ಟಿಸುತ್ತಿದ್ದರು.

ಗುರುಗಳು ಈ ಪ್ರವಾಸ ಕಾಲದಲ್ಲಿ ತಮ್ಮ ಜಾತಕದ ಗ್ರಹಬಲ ಮತ್ತು ಫಲಾಫಲಗಳ ಬಗ್ಗೆ ಆಗಲೇ ಜ್ಯೋತಿಷಿಗಳಿಗೆ ತೋರಿಸಿ ಎಲ್ಲವೂ ಬಹಳ ಪ್ರಶಸ್ತವಾಗಿವೆಯೆಂಬು
ದನ್ನು ಖಚಿತಪಡಿಸಿಕೊಂಡಿದ್ದರು. ಅದೆ
ರೀತಿ ನನ್ನ ಜಾತಕವನ್ನೂ ಸರಿಯಾದ ಕಡ
ತೋರಿಸಿ ನನ್ನ ಫಲಾಫಲಗಳನ್ನು ತಿಳಿದು
ಕೊಂಡು ಬಾ ಎಂದು ನನಗೂ ಅಪ್ಪಣ
ಮಾಡಿದರು. ನನಗೆ ಜ್ಯೋತಿಷ್ಯ, ಶುಭ
ಅಶುಭ, ಶಕುನಗಳಲ್ಲಿ ಸ್ವಲ್ಪವೂ ನಂಬಿ
ಇರಲಿಲ್ಲ. ಆದರೂ, ನನ್ನ ಮುಂದಿರುವ
ಪ್ರವಾಸದ ಆಕರ್ಷಣೆಯಿಂದ ನನಗೆ ಇಷ್ಟ
ವಿಲ್ಲದಿದ್ದರೂ ಜಾತಕವನ್ನು ತೋರಿಸಲ
ಸಿದ್ಧನಾದೆ. ನನಗೆ ಚೆನ್ನಾಗಿ ಪರಿಚಿತರಾಗಿದ್ದ
ಒಬ್ಬ ಜ್ಯೋತಿಷಿಯನ್ನು ಕಂಡು ಅವರಿ
ಜಾತಕವನ್ನು ತೋರಿಸಿದೆ. ಅವರ
ಎಲ್ಲವನ್ನೂ ಪರಿಶೀಲಿಸಿ ನೋಡಿ ನನ
ಈ ಪ್ರವಾಸ ಕಾಲವು ಅತ್ಯಂತ ಶು
ಪ್ರದವಾಗಿದೆಯೆಂದೂ ರಾಜಮರ್ಯಾದ
ಸುಖಪ್ರಯಾಣ, ಧನಾಗಮ ಮುಂತಾ
ಶುಭ ಫಲಗಳು ಇರುವುದೆಂದೂ ಭವಿಷ
ನುಡಿದಾಗ ನನಗೆ ಒಂದು ರೀತಿಯ
ಸಮಾಧಾನವೇ ಆಯಿತು. ಆಗಲೇ ಹೋ
ಗುರುಗಳಿಗೆ ಈ ವಿಷಯ ತಿಳಿಸಿದೆ. ಅವರು
ಬಹಳ ಸಂತೋಷಪಟ್ಟರು. ಪ್ರವಾಸಕೆ
ಬೇಕಾದ ಎಲ್ಲ ಸಿದ್ಧತೆಗಳನ್ನೂ ಮಾಡು
ಹಾಗೂ ಗುರುಗಳನ್ನು ಪ್ರವಾಸ ಕಾಲದ
ಚೆನ್ನಾಗಿ ನೋಡಿಕೊಳ್ಳುವ ಜವಾಬ್ದ
ಎಲ್ಲವೂ ನನ್ನ ಮೇಲಿತ್ತು. ನಾನು ಸ
ಬಹಳ ಚಾಕಚಕ್ಯದಿಂದ ಎಲ್ಲವನ್ನೂ ನಿರ್ವ
ಸುತ್ತಿದ್ದೆ. ಗುರುಗಳು ಇದರಿಂದ ನನ್ನ ಬ
ಬಹಳ ಪ್ರಸನ್ನರಾಗಿದ್ದರು.

ಸರಿ, ಗೊತ್ತಾದ ದಿನದಂದು ನಾ
ಮೈಸೂರಿನಿಂದ ರೈಲಿನಲ್ಲಿ ಅರಸೀಕೆರೆ ತಲು
ಬೆಂಗಳೂರು, ಪುಣೆ ಎಕ್ಸ್‌ಪ್ರೆಸ್ ರೈಲನ
ಹಿಡಿದು ಪುಣೆಯಲ್ಲಿ ಮತ್ತೆ ಬ್ರಾಡ್‌ಗೇ

ರೈಲಿಗೆ ಬದಲಾಯಿಸಿ ಮೂರನೇ ದಿನ ರಾತ್ರಿ ಮುಂಬಯಿ ತಲುಪಿದೆವು. ರೈಲು ಪ್ರಯಾಣ ಸುಖಕರವಾಗಿತ್ತು. ಗುರುಗಳು ಎರಡನೇ ದರ್ಜೆಯಲ್ಲಿ ಪ್ರಯಾಣಮಾಡುತ್ತಿದ್ದರು. ಅದೇ ಆಗಿನ ಕಾಲಕ್ಕೆ ವೈಭವದ ಪ್ರಯಾಣವಾಗಿತ್ತು. ನನಗೆ ಸಹಾಯಕನ ದರ್ಜೆ ಬೇರೆ ಇದ್ದರೂ ಸಹ ನಾನು ಹೆಚ್ಚು ಕಾಲ ಅವರ ಜತೆಯೇ ಇರುತ್ತಿದ್ದೆ. ಗುರುಗಳಿಗೆ ಹೊತ್ತು ಹೊತ್ತಿಗೆ ಎಲ್ಲವೂ ಅಚ್ಚುಕಟ್ಟಾಗಿ ನಡೆಯಬೇಕು. ಊಟ, ವಿಶ್ರಾಂತಿಗಳಲ್ಲಿ ಸ್ವಲ್ಪವೂ ವ್ಯತ್ಯಾಸವಾಗಬಾರದು. ಅದಕ್ಕೆಲ್ಲಾ ಪೂರ್ವಭಾವಿ ಏರ್ಪಾಡುಗಳನ್ನು ನಾನು ನೋಡಿಕೊಳ್ಳುತ್ತಿದ್ದೆ. ಎರಡು ಬುಟ್ಟಿಗಳಲ್ಲಿ ಕಿತ್ತಲೆ, ಸೇಬು, ರಸಬಾಳೆ ಹಣ್ಣು, ಕಾಬೂಲ್ ದ್ರಾಕ್ಷಿ, ದಾಳಿಂಬೆ, ಇವುಗಳೆಲ್ಲಾ ತುಂಬಿರುತ್ತಿದ್ದವು. ಗುರುಗಳು ಹಣ್ಣುಗಳನ್ನು ಯಥೇಚ್ಛವಾಗಿ ಸೇವಿಸುತ್ತಿದ್ದರು. ಹಾಗೆಯೇ ಜತೆಯಲ್ಲಿರುವವರಿಗೂ ಧಾರಾಳವಾಗಿ ತಿನ್ನಿಸುತ್ತಿದ್ದರು. ಅವರು ಹಸಿವು ತಡೆಯುತ್ತಿರಲಿಲ್ಲ. ಹಾಗಾಗಿ, ಎಲ್ಲೆಡೆ ಅವರಿಗೆ ಸುಖ ಭೋಜನ, ಜತೆಯುವರಿಗೂ ಸಹ ರಸಕವಳ. ನನಗಂತೂ ಅವರ ಜತೆ ಇದ್ದಾಗ ರಾಜಭೋಗ. ಇಂತಹ ಪ್ರವಾಸಗಳನ್ನು ಮುಗಿಸಿ ಊರಿಗೆ ಹಿಂತಿರುಗಿದಾಗ ರೆಲ್ಲಾ ನಾನು ಮೈ ಕೈ ತುಂಬಿಕೊಂಡು ಳ್ಳಿಯ ಟೊಮ್ಯಾಟೋ ತರಹ ಆಗಿರುತ್ತಿದ್ದೆನೆಂದು ಎಲ್ಲರೂ ನನ್ನನ್ನು ಚುಡಾಯಿಸುತ್ತಿದ್ದುದುಂಟು. ಹೀಗೆ, ನಾವು ಸುಖ ಪ್ರಯಾಣ ಮುಗಿಸಿ ಬೊಂಬಾಯಿ ವಿ.ಟಿ. ಸ್ಟೇಷನ್‌ನಲ್ಲಿ ಇಳಿದಾಗ ನಮಗೆ ಆಘಾತದ ಸುದ್ದಿಯೊಂದು ಕಾದಿತ್ತು.

ಸ್ವಾತಂತ್ರ್ಯಪೂರ್ವದ ಬೊಂಬಾಯಿ (ಈಗಿನ ಮುಂಬಯಿ) ಬ್ರಿಟಿಷರ ಆಳ್ವಿಕೆಯಲ್ಲಿ ವಿಶ್ವದ ಅತ್ಯಂತ ಸುಂದರ ನಗರಗಳಲ್ಲೊಂದಾಗಿ ಕಂಗೊಳಿಸುತ್ತಿತ್ತು. ಈ ಸುಂದರ ನಗರದಲ್ಲಿ ಆಗಿನ ರಾಜ ಮಹಾರಾಜರುಗಳು ವರ್ಷದ ಬಹುಭಾಗವನ್ನು ಮೋಜಿನಲ್ಲಿ ಕಳೆಯುತ್ತಿದ್ದರು. ಇವರುಗಳು ಇಲ್ಲಿ ತಮ್ಮದೇ ಆದ ವೈಭವೋಪೇತಕರು ಅರಮನೆಗಳನ್ನೂ, ಸಿಬ್ಬಂದಿ ವರ್ಗವನ್ನೂ ಹೊಂದಿದ್ದರು. ಅಂತೆಯೇ ಮೈಸೂರು ಮಹಾರಾಜರ ಅರಮನೆಯೂ ಸಹ ತಾಜ್ ಹೋಟೆಲ್ ಪಕ್ಕದಲ್ಲಿತ್ತು. ಅದು ಗೇಟ್‌ವೇ ಆಫ್ ಇಂಡಿಯಾ ಹಾಗೂ ಸಮುದ್ರದ ಸನಿಹದಲ್ಲಿ ಅತ್ಯಂತ ರಮಣೀಯವಾದ ತಾಣವಾಗಿತ್ತು. ಅಲ್ಲಿಯ ಅಧಿಕಾರಿಗಳು ಗುರುಗಳನ್ನು ಸ್ವಾಗತಿಸಲು ವಿ. ಟಿ. ಸ್ಟೇಷನ್ನಿಗೆ ಬಂದಿದ್ದರು. ನಮ್ಮನ್ನು ಬಹಳ ಗೌರವದಿಂದ ಬರಮಾಡಿಕೊಂಡ ಅನಂತರ ಗುರುಗಳ ಕೈಲಿ ಒಂದು ತಂತಿ ಸಂದೇಶವನ್ನಿತ್ತರು. ಅದು ಮೈಸೂರು ಅರಮನೆಯಿಂದ ಬಂದದ್ದು. ಅದರಲ್ಲಿ ನಾವು ಹೋಗಬೇಕಾಗಿದ್ದ ರಾಜವಿವಾಹ ಕಾರಣಾಂತರಗಳಿಂದ ಮುಂದೂಡಲಾಗಿದೆಯೆಂದೂ, ನಾವು ಕೂಡಲೇ ಮೈಸೂರಿಗೆ ಹಿಂತಿರುಗಬೇಕೆಂದೂ ಸೂಚಿಸಲಾಗಿತ್ತು. ಈ ಸುದ್ದಿಯನ್ನು ಕೇಳಿದಕೂಡಲೇ ಗುರುಗಳು ಕಂಗಾಲಾದರು. ಹತಾಶೆಯಿಂದ ತಲೆಯ ಮೇಲೆ ಕೈ ಹೊತ್ತು ಕುಳಿತರು. ಬಹಳ ಉದ್ವಿಗ್ನರಾಗಿ ನನ್ನನ್ನು ತೀಕ್ಷ್ಣ ದೃಷ್ಟಿಯಿಂದ ನೋಡುತ್ತಾ 'ನನಗೂ ನಿನಗೂ ಷಷ್ಠಾಷ್ಟಕ ಕಣಯ್ಯಾ' ಅದಕ್ಕೇ ಹೀಗಾಗಿದೆ ಎಂದುಬಿಟ್ಟರು. ನಾನು ಒಂದು ಕ್ಷಣ ತಬ್ಬಿಬ್ಬಾದೆ. ಮೊದಲೇ ನನಗೆ ಇದರಲ್ಲಿ ಸ್ವಲ್ಪವೂ ನಂಬಿಕೆ ಇರಲಿಲ್ಲ. ಸಾಲದ್ದಕ್ಕೆ

ಗುರುಗಳ ಭರ್ತ್ಸನೆಯ ಈ ಕಟು ನುಡಿಗಳು. ಇದರಿಂದ ನನಗಾದ ಬೇಸರದಲ್ಲಿ ನಾನೂ ತಾಳ್ಮೆ ಕಳೆದುಕೊಳ್ಳುವುದರಲ್ಲಿದ್ದೆ. ಆದರೆ ಅದು ಹೇಗೋ ಮನಸ್ಸನ್ನು ಹಿಡಿತದಲ್ಲಿಟ್ಟು ಕೊಂಡು ಏನೂ ಪ್ರತಿಕ್ರಿಯೆ ವ್ಯಕ್ತ ಪಡಿಸದೇ ಮೌನವಾಗಿದ್ದು ಬಿಟ್ಟೆ. ಸ್ವಲ್ಪ ಹೊತ್ತಿಗೆಲ್ಲಾ ಗುರುಗಳ ಉದ್ವಿಗ್ನತೆ ಕಡಿಮೆ ಯಾಗತೊಡಗಿತು. ಅರಮನೆಯ ಕಾರಿನಲ್ಲಿ ಎಲ್ಲರೂ ರಾಜಗೃಹ 'ಆ್ಯಂಕರೇಜ್'ಗೆ ಬಂದು ನಮಗೆ ಮೀಸಲಾಗಿದ್ದ ಭವ್ಯ ಕೊಠಡಿಯೊಂದರಲ್ಲಿ ಮೊಕ್ಕಾಂ ಮಾಡಿದೆವು. ಅಲ್ಲಿ ನಮಗೆ ಎಲ್ಲ ರೀತಿಯ ರಾಜೋಪ ಚಾರಗಳೂ ನಡೆದುದಲ್ಲದೇ ಮಾರನೆಯ ದಿನ ನಮ್ಮನ್ನು ಬೊಂಬಾಯಿನಗರದೆಲ್ಲೆಲ್ಲಾ ಸುತ್ತಾಡಿಸಿದರು. ಅಲ್ಲಿಯ ಕನ್ನಡ ಸಂಘ ದಲ್ಲಿ ನಮ್ಮ ಒಂದು ವೀಣಾ ಕಛೇರಿಯೂ ಸಹ ನಡೆಯಿತು. ೧೯೪೪ರ ಈ ಪ್ರವಾಸ ದಲ್ಲಿ ನಾನು ಪ್ರಪ್ರಥಮವಾಗಿ ನೋಡಿದ ಆ ಬೊಂಬಾಯಿ ನಗರದ ಸೌಂದರ್ಯ ಶ್ರೀಮಂತಿಕೆಗಳ ಚಿತ್ರ ಈಗಲೂ ನನ್ನ ಕಣ್ಣಿಗೆ ಕಟ್ಟಿದಂತಿದೆ. ಮೂವತ್ತು ವರ್ಷಗಳ ತರುವಾಯ ನಮ್ಮ ಸ್ವತಂತ್ರ ಭಾರತದ ಮುಂಬಯಿ ನಗರವನ್ನು ಮತ್ತೊಮ್ಮೆ ನೋಡಿದಾಗ ಅದರ ದುಸ್ಥಿತಿಯನ್ನು ಕಂಡು ನನಗೆ ಅತೀವ ನಿರಾಸೆಯೂ, ಸಂಕಟವೂ ಆಯಿತು. ನಮ್ಮ ಸ್ವಾತಂತ್ರ್ಯ ನಮಗೆ ಕೊಟ್ಟಿರುವ ಬಳುವಳಿ ಇದಾದರೆ, ನಾವು ಸ್ವಾತಂತ್ರ್ಯಕ್ಕೆ ಎಷ್ಟರ ಮಟ್ಟಿಗೆ ಅರ್ಹರು ಎಂಬುದನ್ನು ಯೋಚಿಸಬೇಕಾಗುತ್ತದೆ.

ಸರಿ, ಇನ್ನು ನಮ್ಮ ವಾಪಸ್ಸು ಮೈಸೂರು ಪ್ರಯಾಣದ ಏರ್ಪಾಡಾಯಿತು. ಈ ಪ್ರಯಾಣವು ಗುಂತಕಲ್ ಮಾರ್ಗ ವಾಗಿದ್ದುದರಿಂದ ನಾವು ಮಧ್ಯೆ ಮಂತ್ರಾಲಯದಲ್ಲಿ ಇಳಿದು, ರಾಘವೇಂದ್ರ ಸ್ವಾಮಿಗಳ ಬೃಂದಾವನ ದರ್ಶನಮಾಡಿ, ಅಲ್ಲಿ ವೀಣಾ ಕಛೇರಿಯನ್ನು ನಡೆಸಿದೆವು. ಗುರುಗಳಿಗೂ, ಶಿಷ್ಯನಾದ ನನಗೂ ಫಲ, ಮಂತ್ರಾಕ್ಷತೆ, ಶ್ರೀಮಠದ ಖಿಲ್ಲತ್ತು ಸಂಭಾವನೆ ಲಭ್ಯವಾಯಿತು. ಇದು ಗುರು ಗಳಿಗೆ ಅತ್ಯಂತ ಸಂತಸದ ವಿಷಯವಾಗಿತ್ತು. ನನಗೂ ಒಂದು ರೀತಿಯ ಧನ್ಯತೆಯ ಅನುಭವವಾಯಿತು. ಬೊಂಬಾಯಿನಲ್ಲಿ ನಮಗಾಗಿದ್ದ ಮನಸ್ಸಿನ ದುಗಡವೆಲ್ಲಾ ಪರಿಹಾರವಾಗಿ, ಪ್ರವಾಸ ನೋಟಕಾದರೂ ಹರ್ಷಚಿತ್ತರಾಗಿ ಮೈಸೂರಿಗೆ ಹಿಂತಿರುಗಿ ದೆವು. ಆದರೂ, ಜ್ಯೋತಿಷ್ಯದ ಬಗ್ಗೆ ನನಗಿದ್ದ ಮಾನಸಿಕ ಗೊಂದಲ ನನ್ನನ್ನು ಇನ್ನೂ ಕಾಡುತ್ತಿತ್ತು.

ಮೂಢನಂಬಿಕೆಗಳನ್ನು ಸಾರಾಸಗಟು ತಿರಸ್ಕರಿಸುತ್ತಿದ್ದ ನನಗೆ ಅವುಗಳನ್ನು ಆಚರಣೆಯಲ್ಲಿಟ್ಟುಕೊಂಡಿರುವವರನ್ನು ಕಂಡಾಗ ಮರುಕ ಉಂಟಾಗುತ್ತಿತ್ತು. ಹಳೆಯ ತಲೆಮಾರಿನವರಾಗಿದ್ದ ನನ್ನ ಗುರು ಗಳ ಕೆಲವು ಮೂಢನಂಬಿಕೆಗಳು ನನಗೆ ಒಪ್ಪಿಗೆ ಇರಲಿಲ್ಲವಾದರೂ ಅವುಗಳ ವಿರುದ್ಧ ನನ್ನ ವೈಚಾರಿಕತೆಯನ್ನು ಪ್ರದರ್ಶಿಸಿ ಅವರ ಮನಸ್ಸಿಗೆ ನೋವು ಉಂಟುಮಾಡು ವುದು ನನಗೆ ಇಷ್ಟವಿರಲಿಲ್ಲ ಹೀಗಾಗಿ, ಅವರ ನಂಬಿಕೆಗಳನ್ನು ಅವರಿಗೇ ಬಿಟ್ಟುಕೊಟ್ಟು ಸುಮ್ಮನೆ ಇದ್ದುಬಿಡುತ್ತಿದ್ದೆ. ಇಷ್ಟಾದರೂ ನನ್ನ ನಡೆನುಡಿಗಳನ್ನು ಗಮನಿಸುತ್ತಿದ್ದ ಅವರಿಗೆ ನನ್ನ ವಿಚಾರಗಳ ಬಗ್ಗೆ ಅರಿವಾಗದೇ ಇರಲಿಲ್ಲ. "ನೋಡಯ್ಯಾ, ನಮ್ಮ ಸಂಪ್ರದಾಯಗಳು, ದೇವರು, ದಿಂಡರು,

ಪೂಜೆ, ಪುರಸ್ಕಾರಗಳು, ಶುಭ, ಅಶುಭಗಳು ಇವುಗಳಲ್ಲಿ ನಂಬಿಕೆ ಇಟ್ಟುಕೊಳ್ಳುವುದು ಒಳ್ಳೆಯದು. ಅದರಿಂದ ನಮಗೇ ಶ್ರೇಯಸ್ಸು. ನಮ್ಮ ಪೂರ್ವಿಕರೆಲ್ಲ ಇದನ್ನು ಅನೂಚಾನವಾಗಿ ಆಚರಿಸಿಕೊಂಡು ಬಂದಿಲ್ಲವೇ? ಹಾಗಾದರೆ, ಅವರೆಲ್ಲ ದಡ್ಡರೇ?" ಎಂದು ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳುತ್ತಿದ್ದರು. ನನಗೆ ಇವುಗಳ ಆಚರಣೆಯಲ್ಲಿ ಅಷ್ಟಾಗಿ ಆಸಕ್ತಿ ಇಲ್ಲದಿದ್ದರೂ, ನನ್ನಲ್ಲಿ ಒಂದು ರೀತಿಯ ಆಂತರಿಕ ಭಕ್ತಿ ಹಾಗೂ ಆಧ್ಯಾತ್ಮಿಕ ಮನೋವೃತ್ತಿ ಬಾಲ್ಯದಿಂದಲೂ ರೂಪುಗೊಂಡಿತ್ತು. ದೇವರ ಬಗ್ಗೆ ನನ್ನದೇ ಆದ ಒಂದು ಸಿದ್ಧಾಂತವನ್ನು ನಾನು ಅಂದಿಗೂ ಇಂದಿಗೂ ಒಂದೇ ರೀತಿ ಅನುಸರಿಸಿಕೊಂಡು ಬಂದಿದ್ದೇನೆ. ಬಾಹ್ಯಾಚರಣೆಗಳಲ್ಲಿ ನನಗೆ ಇಂದಿಗೂ ನಂಬಿಕೆ ಇಲ್ಲ.

ಇನ್ನು, ಜ್ಯೋತಿಷ್ಯ ಜಾತಕ ಇವುಗಳ ಫಲಾಫಲಗಳನ್ನು ಮುಂಚಿತವಾಗಿ ತಿಳಿದುಕೊಂಡು ಅವುಗಳನ್ನು ನಂಬಿ ಕುಳಿತುಕೊಳ್ಳುವ ಪ್ರಯತ್ನವನ್ನು ನಾನೆಂದೂ ಮಾಡಿಲ್ಲ. ಗುರುಗಳ ಜತೆ ನನ್ನ ಪ್ರವಾಸದಲ್ಲಾದ ಅನುಭವವು ಜ್ಯೋತಿಷ್ಯದ ಬಗ್ಗೆ ನನಗಿದ್ದ ಅವಿಶ್ವಾಸವನ್ನು ಪುಷ್ಟೀಕರಿಸಿತ್ತು. ದನ್ನು ಮತ್ತೊಂದು ರೀತಿಯಲ್ಲಿ ಒರಗೆ ಚ್ಚಿ ಅದರ ಸತ್ಯಾಸತ್ಯತೆಯನ್ನು ಪರೀಕ್ಷಿಸಡಬೇಕೆಂಬ ನನ್ನ ಅಪೇಕ್ಷೆ. ಕೂಡಲೇ ಡೇರುವ ಸಂದರ್ಭ ಒದಗಿತು. ಅದು ರುಗಳ ಜತೆ ನಾನು ಎರಡನೆಯ ಸಲ ವಾಸ ಹೊರಟಾಗ. ಅದು ನಡೆದದ್ದು ಗೆ.

ಮಾರನೇ ವರ್ಷವೇ ನಮ್ಮ ಗುರು ಗೆ ಬೊಂಬಾಯಿನಲ್ಲಿ ನಡೆಯಲಿದ್ದ ವಿಕ್ರಮ ಶಕೆಯ ಮಹೋತ್ಸವದ ಅಖಿಲ ಭಾರತ ಸಂಗೀತ ಸಮ್ಮೇಳನಕ್ಕೆ ಆಹ್ವಾನ ಬಂತು. ಸರಿ, ಯಥಾ ಪ್ರಕಾರ ಗುರುಗಳು ನನ್ನನ್ನು ಜತೆಯಲ್ಲಿ ಕರೆದುಕೊಂಡು ಹೋಗಲು ತೀರ್ಮಾನಿಸಿದರು. ನನಗೆ ತುಂಬ ಸಂತೋಷವೇ ಆಯಿತು. ಗುರುಗಳು ನನ್ನ ಗ್ರಹಗತಿಯ ಬಗ್ಗೆ ಇನ್ನೂ ಸರಿಯಾದವರಲ್ಲಿ ಜಾತಕವನ್ನು ತೋರಿಸಿ ತಿಳಿದುಕೊಂಡು ಬರುವಂತೆ ಅಪ್ಪಣೆ ಮಾಡಿದರು. ಅಂತೆಯೇ, ಅದನ್ನು ಬೇರೊಬ್ಬ ಪ್ರಸಿದ್ಧ ಜ್ಯೋತಿಷಿಗೆ ತೋರಿಸಿದೆ. ಅವರು ಎಲ್ಲವನ್ನೂ ನೋಡಿ ನನ್ನ ಗ್ರಹಗತಿ ಈಗ ಅಷ್ಟೇನೂ ಪ್ರಶಸ್ತವಾಗಿಲ್ಲವೆಂದೂ, ಯಾವ ಶುಭಯೋಗವೂ ಇಲ್ಲವೆಂದೂ ನಿರಾಶಾದಾಯಕವಾಗಿ ಹೇಳಿಬಿಟ್ಟರು. ನಾನು ನನ್ನ ಮನಸ್ಸಿನಲ್ಲೇ ತರ್ಕಮಾಡಿದೆ. ಇದರಲ್ಲಿ ನಿಜಾಂಶ ಎಷ್ಟು ಎಂಬುದನ್ನು ಪರೀಕ್ಷಿಸಿಬಿಡಲು ತೀರ್ಮಾನಿಸಿದೆ. ಇದಕ್ಕೆ ಒಂದು ಉಪಾಯ ಹೊಳೆಯಿತು. ಗುರುಗಳಲ್ಲಿ ಒಂದು ಸಣ್ಣ ಸುಳ್ಳು ಹೇಳುವುದು. ಫಲಿತಾಂಶವನ್ನು ಪರಿಕ್ಷಿಸಿ ಬಿಡುವುದು. ಹೀಗೆ ಆಲೋಚನೆ ಮಾಡಿ, ಮನಸ್ಸಿನಲ್ಲಿಯೇ ಗುರುಗಳಲ್ಲಿ ಕ್ಷಮೆ ಬೇಡಿ, ನನ್ನ ಜಾತಕದ ಪ್ರಕಾರ ಎಲ್ಲವೂ ಶುಭಪ್ರದವಾಗಿದೆಯೆಂದು ಅವರಿಗೆ ತಿಳಿಸಿಬಿಟ್ಟೆ. ಅವರು ಸಂತೋಷದಿಂದ ನನ್ನನ್ನು ಪ್ರಯಾಣಕ್ಕೆ ಸಿದ್ಧನಾಗುವಂತೆ ಸೂಚಿಸಿದರು. ನಾವು ಗೊತ್ತಾದ ದಿನದಂದು ಬೊಂಬಾಯಿಗೆ ಎರಡನೇ ಪ್ರವಾಸ ಹೊರಟದ್ದಾಯಿತು. ಅದೊಂದು ಅದ್ದೂರಿಯ ಸಮಾರಂಭ. ಎಲ್ಲೆಡೆಯಿಂದ ಕಲಾವಿದರ ಮಹಾಪೂರ. ಎಲ್ಲರಿಗೂ ಅಚ್ಚುಕಟ್ಟಾದ ವಸತಿ, ಊಟ, ಉಪಹಾರ


ಗಳ ವ್ಯವಸ್ಥೆ, ಬೆಳಗಿನಿಂದ ಇಡೀ ರಾತ್ರಿ ಸಂಗೀತ ಕಛೇರಿಗಳ ದಿನ. ಎಲ್ಲೆಲ್ಲೂ ಸಂಭ್ರಮ, ನಾಡ ವೈಭವ. ಕಲಾವಿದರ ಪರಸ್ಪರ ಮಿಲನ, ಹೊಸ ಹೊಸ ಪರಿಚಯ. ಅದೊಂದು ಮರೆಯಲಾಗದ ಐತಿಹಾಸಿಕ ಸಮಾವೇಶ.

ಸಮ್ಮೇಳನದಲ್ಲಿ ಗುರುಗಳ ಕಛೇರಿ ಬಹಳ ರಂಜನೀಯವಾಗಿತ್ತು. ಎಲ್ಲರೂ ಬಾಯಿ ತುಂಬಾ ಹೊಗಳಿದರು. ಮದರಾಸಿನಿಂದ ಎಂ. ಎಸ್. ಸುಬ್ಬಲಕ್ಷ್ಮಿಯವರು ಬಂದಿದ್ದರು. ಗುರುಗಳ ಕಛೇರಿ ಆದ ಬಳಿಕ ಅವರ ಕಛೇರಿ ಇತ್ತು. ವೇದಿಕೆಯ ಮೇಲೆ ಹೋಗುವುದಕ್ಕೆ ಮುನ್ನ ಅವರು ಗುರುಗಳ ಪಾದ ಮುಟ್ಟಿ ನಮಸ್ಕಾರ ಮಾಡಿದರು. ಅವರ ಕಛೇರಿಯಂತೂ ಅತ್ಯಮೋಘವಾಗಿತ್ತು. ಸಭೆಯಲ್ಲಿ ಅನೇಕ ಸಂಸ್ಥಾನಗಳ ರಾಜಮಹಾರಾಜರುಗಳು ಉಪಸ್ಥಿತರಿದ್ದರು. ಎಲ್ಲರೂ ಸಂಗೀತವನ್ನು ಕೇಳಿ ಆನಂದಿಸಿ ಕಲಾವಿದರನ್ನು ಅಭಿನಂದಿಸುತ್ತಿದ್ದರು. ಅವರಲ್ಲಿ ತಮ್ಮ ಮೇಲೆ ಅತ್ಯಂತ ಪ್ರಭಾವ ಬೀರಿದ ಕೆಲವು ಕಲಾವಿದರನ್ನು ತಂತಮ್ಮ ಅರಮನೆಗಳಿಗೆ ಆಹ್ವಾನಿಸುತ್ತಿದ್ದರು. ಅಂತವರಲ್ಲಿ ನಮ್ಮ ಗುರುಗಳು ಒಬ್ಬರು. ಬರೋಡಾ ಮತ್ತು ಗ್ವಾಲಿಯರ್ ಮಹಾರಾಜರು ಗುರುಗಳ ಕಛೇರಿಯನ್ನು ಬೊಂಬಾಯಿನ ತಮ್ಮ ಅರಮನೆಗಳಲ್ಲಿ ಏರ್ಪಡಿಸಿ ಕೇಳಿ ಆನಂದ ಪಟ್ಟು ಅವರಿಗೆ ಕೈತುಂಬಾ ಸಂಭಾವನೆ, ಖಿಲ್ಲತ್ತುಗಳನ್ನು ಕೊಟ್ಟು ಗೌರವಿಸಿದರು. ಅಲ್ಲದೇ, ಜಯಪುರ, ಭರತ್ಪುರ ಕೋಟಾ ಸಂಸ್ಥಾನಗಳ ಮಹಾರಾಜರು ತಮ್ಮ ರಾಜಧಾನಿಗಳಿಗೆ ಬರುವಂತೆ ಆಹ್ವಾನಿಸಿದರು. ನಾವು ಆ ಮೂರು ಸಂಸ್ಥಾನಗಳಲ್ಲೂ ಪ್ರವಾಸ ಮಾಡಿ ಅರಮನೆಗಳಲ್ಲಿ ರಾಜೋಪಚಾರ, ರಾಜ ಮರ್ಯಾದೆ, ಖಿಲ್ಲತ್ತು ಸಂಭಾವನೆಗಳನ್ನು ಪಡೆದು ಅತ್ಯಂತ ಯಶಸ್ವಿಯಾದ ಎರಡು ತಿಂಗಳ ಪ್ರವಾಸವನ್ನು ಮುಗಿಸಿ ಬಹಳ ಸಂತೋಷದಿಂದ ಮೈಸೂರಿಗೆ ಹಿಂದಿರುಗಿದೆವು. ಗುರುಗಳಿಗೆ ಅಪಾರ ಯಶಸ್ಸು, ಜನಪ್ರಿಯತೆ ಲಭಿಸಿದ್ದರ ಜತೆಗೆ ಸಹಸ್ರಾರು ರೂಪಾಯಿಗಳನ್ನೂ, ಖಿಲ್ಲತ್ತುಗಳನ್ನೂ ಕೈಯಲ್ಲಿಟ್ಟುಕೊಂಡು ಬಹಳ ಹರ್ಷಚಿತ್ತರಾಗಿ ಹಿಂತಿರುಗಿದ್ದರು. ಶಿಷ್ಯನಾದ ನನಗೂ ನನ್ನ ನಿರೀಕ್ಷೆಮೀರಿ ಎಲ್ಲ ರೀತಿಯಲ್ಲಿಯೂ ಪ್ರಯೋಜನವಾಗಿತ್ತು. ನನ್ನ ಸಂತೋಷಕ್ಕೆ ಪಾರವೇ ಇಲ್ಲ.

ಊರಿಗೆ ಹಿಂತಿರುಗಿದ ಮೇಲೆ ನಮ್ಮ ಪ್ರವಾಸದ ಗುಂಗಿನಲ್ಲೇ ಸ್ವಲ್ಪ ಕಾಲ ಕಳೆಯಿತು. ಗುರುಗಳು ನನ್ನ ಮೇಲೆ ಅಪಾರ ಪ್ರೀತಿ, ವಿಶ್ವಾಸಗಳನ್ನು ತೋರಿಸುತ್ತಿದ್ದರು. ಮುಂದಿನ ವರ್ಷಗಳಲ್ಲಿ ಮತ್ತೆ ಎರಡು ಬಾರಿ ಇದೇ ರೀತಿ ಉತ್ತರ ಭಾರತದ ಪ್ರವಾಸಗಳನ್ನು ಗುರುಗಳ ಜತೆ ನಡೆಸಿದ್ದಾಯಿತು. ಎಲ್ಲವೂ ಚೆನ್ನಾಗಿಯೇ ನಡೆಯಿತು. ಗುರುಗಳಲ್ಲಾದ ಒಂದು ಬದಲಾವಣೆ ಎಂದರೆ ಅವರು ಮತ್ತೆ ಎಂದೂ ನನ್ನ ಜಾತಕವನ್ನು ನೋಡಿಸುವಂತೆ ಕೇಳದೇ ಇದ್ದುದು. ಇದಕ್ಕೆ ಕಾರಣ ಏನಿರಬಹುದೆಂದು ನನಗೆ ಇಂದಿಗೂ ಗೊತ್ತಾಗಿಲ್ಲ. 'ಸಕಲ ಗ್ರಹಬಲ ನೀನೇ ಸರಸಿಜಾಕ್ಷ' ಎಂಬ ದಾಸರ ವಾಣಿಗೆ ಅವರು ಶರಣಾಗಿರಬಹುದೇನೋ ಎನಿಸುತ್ತದೆ. ಅಥವಾ ಜ್ಯೋತಿಷ್ಯದ ಟೊಳ್ಳುತನದ ಸ್ವಾನುಭವದಿಂದ ಅದರಲ್ಲಿ ಅವರ ನಂಬಿಕೆ ಕಡಿಮೆ

ಯಾಗಿದ್ದಿರಬಹುದೇ? ಇಲ್ಲವೇ ಯಾರಿಗೂ ಗೋಚರವಾಗದ ಅದೃಷ್ಟದ ಬಗ್ಗೆ ವೃಥಾ ತಲೆಕೆಡಿಸಿಕೊಳ್ಳಬೇಕು ಎಂಬ ತೀರ್ಮಾನಕ್ಕೆ ಬಂದಿರಬಹುದೇ?

ಒಟ್ಟಿನಲ್ಲಿ, ನಾನು ಜ್ಯೋತಿಷ್ಯ ಮತ್ತು ಭವಿಷ್ಯಗಳ ಬಗ್ಗೆ ತಾಳಿದ್ದ ನನ್ನ ನಿಲುವು ಈ ಅನುಭವಗಳಿಂದ ಮತ್ತೂ ಗಟ್ಟಿಯಾಯಿತು. ಒಂದು ಸುಳ್ಳು ಹೇಳಿದ ಅಪರಾಧವನ್ನು ನಾನು ಎಸಗಿದುದು ನಿಜ. ಆದರೆ, ಅದು ಕೇವಲ ಒಂದು ಸತ್ಯಾನ್ವೇಷಣೆಗಾಗಿ ಎಂಬುದೇ ನನಗಿರುವ ಸಮಾಧಾನ. ಯಾವ ಗ್ರಹಗಳೂ ನಮ್ಮ ಅದೃಷ್ಟವನ್ನು ನಿಯಂತ್ರಿಸುವುದಿಲ್ಲ ಎಂಬುದರ ಖಚಿತತೆಯ ಸಲುವಾಗಿಯೇ ನಾನು ಈ ಬಗೆಯ ಪ್ರಯೋಗ ಮಾಡಿದ್ದು. ಅದು ಸಂಪೂರ್ಣವಾಗಿ ಫಲಿಸಿತು. ನನ್ನ ಸಿದ್ಧಾಂತಗಳಿಗೆ ಪುಷ್ಟಿ ದೊರೆಯಿತು. ಆದರೇನು? ಜ್ಯೋತಿಷ್ಯ, ಭವಿಷ್ಯಗಳನ್ನು ನಂಬುವವರು ಈಗಲೂ ಇದ್ದಾರೆ, ಮುಂದೆಯೂ ಇರುತ್ತಾರೆ. ಇದು ಅವರವರ ನಂಬಿಕೆಗೆ ಬಿಟ್ಟ ವಿಷಯ ತಾನೇ?



ಕಾಲ ಕೆಟ್ಟಿತೆಂದು ಹೇಳುತ್ತಾರೆ. ಆದರೆ ಕಾಲ ಕೆಡದು. ಅದೇ ಸೂರ್ಯ ಚಂದ್ರರು, ಅದೇ ಭೂಮಿ, ಅದೇ ಲೋಕ, ಅದೇ ಕಾಲ. ಆದರೆ ಕೆಡುವುದು ಜನರ ನಡೆನುಡಿ, ಆಚಾರ ವಿಚಾರಗಳು ಮಾತ್ರ.

—ಸ್ವಾಮಿ ವಿವೇಕಾನಂದ

ಧರ್ಮ ಧರ್ಮಗಳ ಮಧ್ಯೆ ಜಗಳವಿರಬಾರದು. ಆದರೆ ಎಲ್ಲ ಧರ್ಮಗಳೂ ಅಧರ್ಮದ ವಿರುದ್ಧ ಹೋರಾಡಬೇಕು.

—ಗಾಂಧೀಜಿ

ಥಾಯ್‌ಲ್ಯಾಂಡಿನಲ್ಲಿ ಪ್ರೇತಾತ್ಮಗಳ ಮನೆ

ಕೆ. ಶಾಂತಾಮಣಿ
೧೦೦೯, 'ಕಲ್ಪದ್ರುಮ'
ಇ ಅಂಡ್ ಎಫ್ ಬ್ಲಾಕ್
ಉದಯರವಿ ರಸ್ತೆ, ಕುವೆಂಪುನಗರ
ಮೈಸೂರು

ಪ್ರಪಂಚದ ಎಲ್ಲ ದೇಶಗಳಲ್ಲಿ ಅದು ಮುಂದುವರಿದಿರಲಿ ಅಥವಾ ಹಿಂದುಳಿದಿರಲಿ ಭೂತ-ಪ್ರೇತಗಳ ಭಯ. ಮಂತ್ರ-ತಂತ್ರಗಳ ಬಗ್ಗೆ ನಂಬಿಕೆ ಇದ್ದೇ ಇದೆ. ವಿಜ್ಞಾನದ ಹೊಸ ಸಂಶೋಧನೆ ಅಸಂಭವವನ್ನು ಸಂಭವ ಮಾಡಿದ್ದರೂ ಕೂಡ ಈ ದೇಶಗಳ ನಿವಾಸಿಗಳು, ಇಂದಿನ ವಿಜ್ಞಾನ ಯುಗದಲ್ಲೂ ಕೂಡ ಈ ಅಂಧವಿಶ್ವಾಸಗಳಿಂದ ತಮ್ಮನ್ನು ಮುಕ್ತರನ್ನಾಗಿ ಮಾಡಿಕೊಂಡಿಲ್ಲ. ಅಂತರಿಕ್ಷದಲ್ಲಿ ಸೈನ್ಯಗಳ ಠಾಣಗಳಾಗಿವೆ, ಸಮುದ್ರಗಳ ಒಳಗೆ ನೂರಾರು ಮೈಲಿಗಳವರೆಗೂ ಹೋಗಿಯಾಗಿದೆ, ದುರ್ಗಮವಾದ ಪರ್ವತಗಳನ್ನು ಕತ್ತರಿಸಿ ಸುಗಮ ಮಾರ್ಗಗಳನ್ನಾಗಿ ಮಾಡಿಯಾಗಿದೆ. ಕಂಪ್ಯೂಟರ್ ಮೂಲಕ ರೋಬಾಟ್ ಮಾನವ ಯಂತ್ರ ನಿರ್ಮಿಸಿಯಾಗಿದೆ. ವಿಜ್ಞಾನ ಚರಮೋತ್ಕರ್ಷ ತಲುಪಿದಾಗಲೂ ಕೂಡ ಮನುಷ್ಯ ಇಂದು ತನ್ನ ಜೀವಿತ ಬುದ್ಧಿಗೆ ಮೀರಿದ ಯಾವುದಾದರೊಂದು ಚಮತ್ಕಾರವನ್ನು ಕಂಡ ಕೂಡಲೆ ಅದನ್ನು ಆಶ್ಚರ್ಯದಿಂದ ನೋಡಿ, ಕೂಡಲೆ ಅದರಲ್ಲಿ ಅಲೌಕಿಕ ಶಕ್ತಿ ಅಥವಾ ಚಮತ್ಕಾರವನ್ನು ಕಂಡುಕೊಳ್ಳುತ್ತಾನೆ. ತನಗೆ ಒದಗಿದ ವಿಘ್ನ ಮತ್ತು ಆಪತ್ತುಗಳನ್ನು ದೂರ ಮಾಡಲು ಇದರ ಶಕ್ತಿ ಮತ್ತು ಇದರ ಪೂಜೆಯಲ್ಲಿ ಆಸಕ್ತಿವಹಿಸುತ್ತಾನೆ. ಫಲಸ್ವರೂಪವಾಗಿ ಅನೇಕ ವಿಧಿ-ವಿಧಾನಗಳಿಂದ ಆ ಶಕ್ತಿಗೆ ಆರಾಧನೆ ಸಲ್ಲಿಸುತ್ತಾನೆ.

ಆಧುನಿಕ ಯುರೋಪೀಯ ಸಂಸ್ಕೃತಿಯಿಂದ ಪ್ರಭಾವಿತಗೊಂಡರೂ ಜೊತೆಗೇ ಪ್ರಾಚೀನ ಧಾರ್ಮಿಕ ಪರಂಪರೆಯನ್ನು ನಿರ್ವಹಿಸುವ ದೇಶವೆಂದರೆ ಥಾಯ್‌ಲ್ಯಾಂಡ್. ಅಲ್ಲಿಯ ನಿವಾಸಿಗಳ ಹೃದಯದಲ್ಲಿ ಇಂದೂ ಕೂಡ ಪ್ರೇತಾತ್ಮಗಳ ಬಗ್ಗೆ ಬಲವಾದ ನಂಬಿಕೆ ಬೇರೂರಿದೆ. ಇಂದಿಗೂ ಕೂಡ ಬಾಂಕಾಕ್ ನಗರದಲ್ಲಿ ಸರ್ಕಾರದ ಕಛೇರಿಗಳ, ಸಾರ್ವಜನಿಕ ಭವನ, ಹೋಟೇಲ್, ಅತಿಥಿಗೃಹಗಳ ಎದುರಿಗೆ ಯಾವುದಾದರೊಂದು ರಸ್ತೆಯಲ್ಲಿ ಸಹಜವಾಗಿಯೇ ಕಂಡುಬರುತ್ತವೆ. ಈ ಮನೆಗಳು ಯಾತ್ರಿಗಳನ್ನು ತನ್ನೆಡೆಗೆ ಆಕರ್ಷಿಸುತ್ತವೆ.

೧೯೮೮ರ ಏಪ್ರಿಲ್ ತಿಂಗಳ 'ನವನೀತ' ಹಿಂದಿ ಮಾಸಿಕದಲ್ಲಿ ಪ್ರಕಟವಾದ ರೇಖಾ ರಸ್ತೋಗಿಯವರ "ಥಾಯ್ಲ್ಯಾಂಡ್ ಮೇ ಪ್ರೇತಾತ್ಮಾವೋಂಕಾ ಘರ್" ಲೇಖನದ ಅನುವಾದ.

ವಿಚಿತ್ರವೆಂದರೆ ಪ್ರೇತಾತ್ಮಗಳ ಸಾಕಾರ ರೂಪ ಕಂಡುಬರದೆ ಅಲ್ಲಿ-ಇಲ್ಲಿ ಅವುಗಳ ಮನೆ ಕಂಡುಬರುತ್ತವೆ. ಈ ಸುಸಜ್ಜಿತ ಮನೆಗಳನ್ನು ‘ಆತ್ಮಗಳ ಮನೆ’ ಎಂದು ಕರೆಯುತ್ತಾರೆ. ಇವುಗಳ ಬಗ್ಗೆ ಥಾಯ್ಲ್ಯಾಂಡ್ ನಿವಾಸಿಗಳಿಗೆ ಆಳವಾದ ಶ್ರದ್ಧೆಯಿದೆ. ಹತ್ತಿರದಿಂದ ಈ ಮನೆಗಳನ್ನು ನೋಡಿದರೆ ಮನುಷ್ಯರಿಗಾಗಿ ಕಟ್ಟಿದ ಯಾವುದೋ ಒಂದು ಆಧುನಿಕ ಭವನದ ಮಾಡಲ್ ಎನಿಸುತ್ತದೆ. ಬೌದ್ಧ ಮತ್ತು ಕ್ರಿಶ್ಚಿಯನ್ ವಾಸ್ತುಶಿಲ್ಪ ಶೈಲಿಯನ್ನು ಆಧರಿಸಿದ ಇವುಗಳನ್ನು ಮರ, ಇಟ್ಟಿಗೆ ಮತ್ತು ಕಾಂಕ್ರೀಟ್‌ಗಳಿಂದ ಕಟ್ಟಿರುತ್ತಾರೆ. ಇದರಲ್ಲಿ ಕಿಟಕಿ, ಬಾಗಿಲು, ಕಂಬ ಚಿಕ್ಕ ಪುಟ್ಟ ಕೊಠಡಿಗಳು ಇರುತ್ತವೆ. ಈ ರೂಮುಗಳು ಆಯತಾಕಾರದಲ್ಲಿರುತ್ತವೆ. ಈ ಮನೆಯ ಹೊರಗೆ ಪ್ಲಾಸ್ಟರ್ ಇದ್ದರೆ ಒಳಗೆ ಪ್ಲಾಸ್ಟಿಕ್ ಪೈಂಟ್ ಮಾಡಲಾಗಿರುತ್ತದೆ. ಧರ್ಮಶಾಲೆ, ಸಾಮಾನ್ಯ ಗೃಹ, ರಾಜಭವನದ ರೂಪದಲ್ಲಿರುವ ಈ ಮನೆಗಳಲ್ಲಿ ಪೂಜೆಯ ಉಪಕರಣಗಳಷ್ಟೇ ಅಲ್ಲದೆ ಸಂಸಾರಕ್ಕೆ ಬೇಕಾದ ಪಾತ್ರೆ, ಪೀಠೋಪಕರಣಗಳು ಆವಶ್ಯಕ ವಸ್ತುಗಳು ಇರುತ್ತವೆ. ಮನುಷ್ಯ ಮತ್ತು ಜೀವಜಂತುಗಳ ಮೂರ್ತಿಯಿಂದ ಈ ಮನೆ ಅಲಂಕೃತಗೊಂಡಿರುತ್ತವೆ. ಹೂಬಳ್ಳಿಗಳಿಂದ ಅಲಂಕೃತವಾದ ಈ ಮನೆಯ ಮೂಲೆ ಮೂಲೆಗಳನ್ನು ಚಿನ್ನ-ಹಿತ್ತಾಳೆಗಳಿಂದ ಅಲಂಕರಿಸಿರುತ್ತಾರೆ.

ಈ ಮನೆಗಳನ್ನು ಆಗ-ಈಗ ಅಲ್ಲಿ-ಇಲ್ಲಿ ಮನಸ್ಸು ಬಂದ ಕಡೆ ನಿರ್ಮಿಸಲಾಗುವುದಿಲ್ಲ. ಮನುಷ್ಯರ ಮನೆ ನಿರ್ಮಾಣದಂತೆ ಸುಲಭದ ಕಾರ್ಯವೂ ಅಲ್ಲ. ಈ ಭವನಗಳ ನಿರ್ಮಾಣ ಯೋಜನೆ, ನಿರ್ಮಾಣ ಮುಹೂರ್ತ, ನಿರ್ಮಾಣ ಸಾಮಗ್ರಿಯನ್ನು ನಿರ್ಧಾರಗೊಳಿಸಲು ಒಬ್ಬ ಪುರೋಹಿತನನ್ನು ನೇಮಿಸುತ್ತಾರೆ. ಪುರೋಹಿತನು ಧಾರ್ಮಿಕ ಕೆಲಸಗಳಲ್ಲಿ ಪಾರಂಗತನಾಗಿರಬೇಕು. ಅವನಿಗೆ ಇಹಲೋಕ ಪರಲೋಕಗಳ ಬಗ್ಗೆ ಆಳವಾದ ಜ್ಞಾನ ಇರಬೇಕು. ಅವನಿಗೆ ಆತ್ಮಗಳ ಇಚ್ಛೆ ಏನೆಂಬುದು ತಿಳಿದಿರಬೇಕು. ಥಾಯ್‌ಲ್ಯಾಂಡಿನ ಕಟ್ಟಾ ಧಾರ್ಮಿಕರು ಆತ್ಮಗಳ ಮನೆಯನ್ನು ತಪ್ಪು ದಿಕ್ಕಿನಲ್ಲಿ ಕಟ್ಟಿದರೆ ಆತ್ಮಗಳು ಅಲ್ಲಿ ವಾಸಿಸುವುದಿಲ್ಲ ಎಂದು ತಿಳಿಯುತ್ತಾರೆ. ಈ ಮನೆಯನ್ನು ಸ್ಥಾಪತ್ಯ ಶೈಲಿಗೆ ಅನುಸಾರವಾಗಿ ಶುಭ ಮುಹೂರ್ತದಲ್ಲಿ ಬಲಿಯ ಅರ್ಪಣೆಯೊಂದಿಗೆ ಪ್ರಾರಂಭಿಸಲಾಗುತ್ತದೆ. ಹೀಗೆ ಅರ್ಪಿಸಿದ ಸಾಮಗ್ರಿಗಳಲ್ಲಿ ಅಕ್ಕಿ, ಹೂವು, ಹಂದಿಯ ತಲೆಯನ್ನು ಬೇಯಿಸಿದ ಮಾಂಸ, ಬಾಳೆಯ ದೊನ್ನೆಯಲ್ಲಿ ಬೇಯಿಸಿದ ಮೊಟ್ಟೆ, ಅನ್ನದಿಂದ ಮಾಡಿದ ವಿಶೇಷವಾದ ಖೀರು, ವಿಳ್ಯದೆಲೆ, ಕೆಂಪುಬಟ್ಟೆ, ವಿವಿಧ ರೀತಿಯ ಮಿಠಾಯಿ, ಹೂವಿನಹಾರ, ಧೂಪ, ಸುಗಂಧ ದ್ರವ್ಯ, ಮೋಂಬತ್ತಿಗಳಿಂದ ಪೂಜೆ ಮಾಡಲಾಗುತ್ತದೆ.

ಈ ಅಜ್ಞಾತ ಅಲೌಕಿಕ ಶಕ್ತಿಗಳನ್ನು ಸುರ (ಒಳ್ಳೆಯ), ಅಸುರ (ಕೆಟ್ಟ) ಶಕ್ತಿಗಳೆಂದು ವಿಂಗಡಿಸಲಾಗುತ್ತದೆ. ಈ ಎರಡು ವರ್ಗದ ಆತ್ಮಗಳಿಗೆ ಅವುಗಳ ಸ್ವಭಾವ ರುಚಿಗೆ ಅನುಸಾರವಾಗಿ ದಾನ ದಕ್ಷಿಣೆ, ಸನ್ಮಾನಗಳನ್ನು ಮಾಡಲಾಗುತ್ತದೆ. ಇವುಗಳಿಗೆ ವಿರೋಧವಾಗಿ ವರ್ತಿಸಿದರೆ ಇವು ಅಶುಭವನ್ನು ಮಾಡುವುದು. ಆತ್ಮಗಳು ಬೇಗನೆ ಅಸಂತುಷ್ಟಗೊಳ್ಳುತ್ತವೆ. ಈ ಆತ್ಮ

ಗಳನ್ನು ಅವುಗಳ ಇಷ್ಟದ ಪ್ರಕಾರ ಸಂತುಷ್ಟಗೊಳಿಸಿದರೆ ಮನುಷ್ಯ ಯಾವ ಕಷ್ಟವನ್ನೂ ಅನುಭವಿಸಬೇಕಾಗುವುದಿಲ್ಲ. ವ್ಯಾಪಾರಿಗಳು ತಮ್ಮ ಕಷ್ಟವನ್ನು ಎದುರಿಸುವಂಥ ಶಕ್ತಿಗಾಗಿ ಅಥವಾ ಅನಿಷ್ಟ ನಿವಾರಣೆಗಾಗಿ, ಲಾಭಕ್ಕಾಗಿ ವಿಧಿವತ್ತಾಗಿ ಆತ್ಮಗಳನ್ನು ಪೂಜಿಸುತ್ತಾರೆ. ಶ್ರೇಷ್ಠ ಆತ್ಮಗಳು ಮೂರು ವಿಧವಾಗಿರುತ್ತವೆ. ಆಕಾಶಗಾಮೀ ದೈವೀಆತ್ಮಗಳು ದೇವತೆಗಳ ಹಾಗೆ ಅದ್ಭುತ ಶಕ್ತಿಯನ್ನು ಹೊಂದಿರುತ್ತವೆ. ಇವುಗಳನ್ನು 'ಬುದ್ಧ' ಅಥವ 'ಅರಹಂತ' ಸ್ಥಾನದಲ್ಲಿ ಇಡಲಾಗುತ್ತದೆ. ಇದಲ್ಲದೆ ರಾಜ ಅಥವ ಮನುಷ್ಯ ಸ್ವಭಾವವುಳ್ಳ ಈ ಆತ್ಮಗಳನ್ನು ರಜಸ್ಸು ಅಥವ ತಾಮಸದವೆಂದು ಹೇಳಲಾಗುತ್ತದೆ. ಸುರವರ್ಗದ ಈ ಮೂರು ಆತ್ಮಗಳು ಆಕಾಶದಲ್ಲಿ ತಿರುಗಾಡುತ್ತವೆ.

ಯಾವುದಾದರೊಂದು ಶುಭ ಕೆಲಸ ಮಾಡುವ ಮೊದಲು ಥಾಯ್ ವಾಸಿಯು ಈ ಆತ್ಮಗಳನ್ನು ತನ್ನ ಧಾರ್ಮಿಕ ಪರಂಪರೆಗೆ ಅನುಗುಣವಾಗಿ ತಂತ್ರಯಾನದ ನಿಯಮಕ್ಕೆ ಅನುಸಾರವಾಗಿ ಪೂಜಿಸುತ್ತಾನೆ ಮತ್ತು ಸ್ತುತಿಸುತ್ತಾನೆ.

ಇನ್ನೂ ಕೆಲವು ಸಮಾಜಗಳಲ್ಲಿ ದೈವೀ ಆತ್ಮಗಳಲ್ಲದೆ ಭೂತ ಪ್ರೇತ ಮತ್ತು ಅಲೌಕಿಕ ಆತ್ಮಗಳ ಅಸ್ತಿತ್ವದಲ್ಲಿ ನಂಬಿಕೆ ಇದೆ. ಇಂಥ ಆತ್ಮಗಳು ದಯಾಳು, ಕೃಪಾಮಯಿ ಆಗಿರುತ್ತವೆ. ಆದರೆ ಯಾವುದಾದರೊಂದು ಕಾರಣದಿಂದ ಅವು ಕೋಪಗೊಂಡರೆ ಫಸಲು ನಷ್ಟವಾಗಬಹುದು. ದೈಹಿಕ, ದೈವೀಕ ವಿಪತ್ತಿಗೆ ಒಳಗಾಗಬಹುದು. ಚಿಕ್ಕ ಮಕ್ಕಳನ್ನು ಇವು ತಿಂದುಹಾಕಬಹುದು. ಈ ಆತ್ಮಗಳನ್ನು ಭೂಮಿಯ ಸಂರಕ್ಷಕ 'ಫ್ರಬವನ್ ಕಾ ಓಥೀ' ಎನ್ನುತ್ತಾರೆ. ಮಾನವರ ಕಣ್ಣಿಗೆ ಈ ಆತ್ಮಗಳು ಕಾಣುವುದಿಲ್ಲ. ಇವುಗಳು ಕಾಡಿನಲ್ಲಿ, ಗುಹೆಗಳಲ್ಲಿ, ದಟ್ಟವಾದ ವೃಕ್ಷಗಳಲ್ಲಿ ಇರುತ್ತವೆ.

ಈ ಸಂರಕ್ಷಕ ಆತ್ಮಗಳ ಸ್ವಭಾವಕ್ಕೆ ಅನುಗುಣವಾಗಿ ಒಂಭತ್ತು ವಿಧವಾಗಿರುತ್ತವೆ. ಇವು ಭೂಮಿಯ ಮೇಲೆ ಭಿನ್ನ ಭಿನ್ನ ಸ್ಥಳಗಳಲ್ಲಿ ವಾಸಿಸುತ್ತವೆ.

ಹಸು, ಕರು, ಎಮ್ಮೆ, ಕುರಿ, ಆಡು, ಎತ್ತು, ನಾಯಿಗಳ ಸಂರಕ್ಷಕ, ಅಡಿಗೆಮನೆ ಸಂರಕ್ಷಕ, ಉಗ್ರಾಣದ ಸಂರಕ್ಷಕ, ಕೋಶಾಗಾರದ ಸಂರಕ್ಷಕ, ನವವಧು ಕೋಣೆಯ ಸಂರಕ್ಷಕ, ಕಾಡು, ಬೆಟ್ಟಗುಡ್ಡಗಳ ಸಂರಕ್ಷಕ, ದೇವಸ್ಥಾನ ಧಾರ್ಮಿಕ ಸಂಸ್ಥೆಗಳ ಸಂರಕ್ಷಕ, ಸೀಮಾರೇಖೆ, ನದಿ, ತೋಟಗಳ ಸಂರಕ್ಷಕ, ಈ ಎಲ್ಲ ಸಂರಕ್ಷಕ ಆತ್ಮಗಳಲ್ಲಿ ಕೇವಲ ಮನೆ ಸಂರಕ್ಷಕ ಆತ್ಮಗಳಿಗೆ ಸ್ಥಿರಮನೆ ಮಾಡಿಕೊಡಲಾಗುತ್ತದೆ. ಸಮಯ ಆವಶ್ಯಕತೆಗೆ ಅನುಸಾರವಾಗಿ ಅವುಗಳನ್ನು ಕರೆದು ಅವುಗಳಿಗೆ ಅಸ್ಥಿರವಾದ ಮನೆಗಳನ್ನೂ ಮಾಡಿಕೊಡಲಾಗುತ್ತದೆ.

ಥಾಯ್‌ಲ್ಯಾಂಡಿನ ಬ್ಯಾಂಕಾಕ್ ನಗರಗಳಲ್ಲಿ ಬಹಳ ಹಳೆಯ ಆತ್ಮಗಳ ಮನೆ ಇದ್ದು ನೂರಾರು ವರ್ಷಗಳಿಂದ ತಲೆತಲಾಂತರದಿಂದ ಹರಕೆ ಹೊರುತ್ತಿದ್ದಾರೆ.

ಹರಕೆ ಸಫಲವಾದರೆ ಆ ವಂಶಜರು ಆತ್ಮದ ಮನೆಗಳಿಗೆ ಸೇವಕರು ಆನೆ, ಕುದುರೆ, ಎತ್ತು, ಮಿಠಾಯಿ, ಇತರ ಖಾದ್ಯ ಪದಾರ್ಥಗಳನ್ನು ತಂದು ಒಪ್ಪಿಸುತ್ತಾರೆ.

ಇಂಥ ಸಮಯದಲ್ಲಿ ಸಂಗೀತ ನೃತ್ಯದ ಏರ್ಪಾಟನ್ನೂ ಈ ಮನೆಯ ಹತ್ತಿರ ಮಾಡಲಾಗುತ್ತದೆ. ಕೆಲವು ಶ್ರೀಮಂತರು ತಮ್ಮ

ಇಷ್ಟಾರ್ಥ ಸಿದ್ಧಿಯಾದ ಮೇಲೆ ಇವುಗಳಿಗೆ ಮತ್ತೊಂದು ಮನೆ ಮಾಡಿಕೊಡುತ್ತಾರೆ. ಮನೆ ಕಟ್ಟಲು ಆಗದವರು ಮನೆಗಳ ಮುಂದೆ ಮೂರ್ತಿಗಳನ್ನು ಅಥವಾ ಸುಲಭವಾಗಿ ಸಿಗುವ ವಸ್ತುಗಳನ್ನು ತಂದು ಅರ್ಪಿಸುತ್ತಾರೆ. ಹರಕೆ ಹೊತ್ತು ಪೂರ್ಣವಾಗುವ ಭರವಸೆಯನ್ನು ಹೊಂದಿರುತ್ತಾರೆ.

ಆತ್ಮಗಳ ಮನೆಯ ಬಗ್ಗೆ ಇರುವ ನಂಬಿಕೆಗೆ ಯಾವ ತರ್ಕಗಳ ಆಧಾರವೂ ಇಲ್ಲ. ಏಕೆಂದರೆ ಬಹಳ ವರ್ಷಗಳಿಂದ ಈ ಶಕ್ತಿಯ ಮೇಲೆ ನಂಬಿಕೆ ನಡೆದು ಬರುತ್ತಿದೆ. ಆದ್ದರಿಂದ ಯಾವ ವಿಶ್ಲೇಷಣೆಗೆ ಒಳಗಾಗದೆ ಈ ನಂಬಿಕೆ ನಡೆದು ಬರುತ್ತಿದೆ.



ಮನಸ್ಸಿನಲ್ಲಿ, ಮಾತಿನಲ್ಲಿ, ಕೆಲಸದಲ್ಲಿ ಯಾರನ್ನೂ ನೋಯಿಸದಿರುವುದು, ಎಲ್ಲರನ್ನೂ ಪ್ರೀತಿಸುವುದು, ಎಲ್ಲರಿಗೂ ಒಳ್ಳೆಯದನ್ನು ಬಯಸುವುದು—ಇದೇ ಅಹಿಂಸಾ ಧರ್ಮ.

—ಗಾಂಧೀಜಿ

ಜನನ ಮರಣಗಳೆರಡೂ ಸ್ವಾಭಾವಿಕ ಸೃಷ್ಟಿ ನಿಯಮ. ಆದ್ದರಿಂದ ಅವೆರಡರ ಬಗ್ಗೆಯೂ ಸಂತಸ, ದುಃಖಗಳು ಅನವಶ್ಯಕ.

ಅಸೂಯೆಯ ಲೇಶವೂ ಮನಸ್ಸಿನೊಳಗಿರದವರೇ ಇಹಪರಗಳೆರಡರಲ್ಲೂ ಸುಖವನ್ನು ಹೊಂದುವರು.

–ಗೀತಾ

ನಿಯಮ ಉಲ್ಲಂಘನೆ

ಡಾ|| ಸ. ಜ. ನಾಗಲೋಟಿಮಠ
೨೫, "ಶಾಂತಾ" ಬಸವ ಕಾಲನಿ
ಬೆಳಗಾವಿ-೫೯೦ ೦೧೦

"ವಿದ್ಯೆ ಹೇಳುವವ ನೀನೆ ಬುದ್ಧಿ ಕಲಿಸುವವ ನೀನೆ ಉದ್ಧಾರಕರ್ತ ಮಮಸ್ವಾಮಿ ನೀನೆ" ಈ ಪುರಂದರ ವಾಣಿಯಲ್ಲಿ ನಿಹಿತವಾಗಿರುವ ಜೀವನ ಮೌಲ್ಯ ಕೇವಲ ಅಪ್ರಾಯೋಗಿಕ ಆದರ್ಶವೇ ? ವ್ಯಾವಹಾರಿಕ ನೀತಿಯೋ ? ಸಂಪನ್ನ ಗುರುಗಳು ಪಳೆಯುಳಿಕೆಗಳು ಇಲ್ಲವೇ ಬೆಳಕಿಗೆ ಬರದ ವಜ್ರಗಳು ಆಗಿರುವ ಈ ದಿನಗಳಲ್ಲಿ ಹಳ್ಳಿಯ ಈ ವಾಸ್ತವ ಘಟನೆ ರೋಮಾಂಚಕಾರಿ, ಅರ್ಥದಾಯಕ.

ಒಂದು ಊರು. ಊರಿನ ಸಮೀಪವೇ ಒಂದು ಮಾಧ್ಯಮಿಕ ಶಾಲೆ. ಶಾಲೆಯನ್ನು ಒಂದು ಧಾರ್ಮಿಕ ಸಂಸ್ಥೆ ನಡೆಸುತ್ತಿತ್ತು. ಕನ್ನಡ ಮಾಧ್ಯಮದ ಶಾಲೆ ಅದು. ಅದಕ್ಕೆ ಬರುವ ವಿದ್ಯಾರ್ಥಿಗಳೆಲ್ಲರೂ ಕನ್ನಡ ಭಾಷೆಯವರೇ. ಪ್ರತಿಶತ ೯೫ ರಷ್ಟು ಬಡವರು ಹಾಗು ಹಿಂದುಳಿದವರು. ವಿದ್ಯಾರ್ಥಿಗಳಿಗೆ ಸಮವಸ್ತ್ರ, ಕಾಲಿಗೆ ಬೂಟು, ಕೊರಳಿಗೆ ಕತ್ತಿನ ಪಟ್ಟಿ ಇವುಗಳಿಗೆ ಅಲ್ಲಿ ಆಸ್ಪದ ಇರಲಿಲ್ಲ. ಅಲ್ಲಿಯ ಮುಖ್ಯ ಶಿಕ್ಷಕರೂ ವಿಚಿತ್ರ ಎನಿಸುವ ಸ್ವಭಾವದವರು. ಅವರಿಗೆ ವಿದ್ಯಾರ್ಥಿಗಳು ಬರಿಗಾಲಿನಿಂದ ಓಡಾಡಿದರೆ ಸಮಾಧಾನ. ಹುಡುಗರನ್ನು ಪ್ರಚೋದಿಸಿ ಸುತ್ತಲಿನ ಹೊಲಗದ್ದೆಗಳಲ್ಲಿ ಓಡಾಡಿಸುತ್ತಿದ್ದರು. ಹುಡುಗರೋ ಇದನ್ನೇ ದಾರಿ ಕಾಯುತ್ತಿದ್ದವು. ಮೊದಲೇ ಓಡಾಡುವ ಮಕ್ಕಳಿಗೆ ಓಡಾಡಿರಿ ಎಂದರೆ ಮುಗಿಯಿತು. ಹುಡುಗರು ಓಡಾಡಿ ಓಡಾಡಿ ಕೊನೆಗೆ ಸಾಕಾಗಿ ಶಾಲೆ ಸೇರುತ್ತಿದ್ದರು. ಮುಖ್ಯ ಗುರುಗಳಿಗೆ ಕ್ರಿಕೆಟ್, ಹಾಕಿ, ವಾಲಿಬಾಲ್, ಬಾಸ್ಕೆಟ್‌ಬಾಲ್ ಮುಂತಾದವುಗಳಲ್ಲಿ ಆಸಕ್ತಿ ಇದ್ದಿಲ್ಲ. ಚೆಂಡೆಸೆಯುವ ಆಟ, ದಪ್ಪಾದುಪ್ಪಿ ಆಟ, ಚಿಣಿಫಣಿ, ಲಿಂಗವರೆ, ಕುಣಿಗಾಳು ಮುಂತಾದವುಗಳನ್ನು ಆಡಲು ಬಿಡುತ್ತಿದ್ದರು. ಶಾಲೆಯ ಸಮೀಪದಲ್ಲಿ ಜಿಗಿಯಲು ಅನುಕೂಲ ಮಾಡಿ ಉಸುಕು ಹಾಕಿಸಿದ್ದರು. ಮಕ್ಕಳು ನಾ ಅಗಿ ನೀ ಜಿಗಿ ಎಂದು ಕೇಕೆ ಹಾಕುತ್ತ ಜಿಗಿಯುತ್ತಿದ್ದವು. ನನಗೂ ಇದನ್ನೆಲ್ಲ ಕೇಳಿ ಕುತೂಹಲ ಕೆರಳಿತು. ಒಂದು ದಿನ ಆ ಶಿಕ್ಷಕರು ಸಿಕ್ಕರು ಕೇಳಿಯೇ ಬಿಟ್ಟೆ. "ಏನ್ರಿ ಮಾಸ್ತ್ರ, ನಿಮ್ಮ ಶಾಲೆ ಉಳಿದ ಶಾಲೆಗಳಿಗಿಂತ ಬೇರೆಯೇ ಇದೆಯಂತೆ ಏನು ನಿಮ್ಮ ವಿಚಾರ ಏನು ?" ....ಶಿಕ್ಷಕರು ನಗುತ್ತ ಹೇಳಿದರು "ಸಾಹೇಬ್ರ ಅದರಲ್ಲಿ ಅಂಥಾದೇನು ಹೊಸದು ಇಲ್ರಿ, ಮಕ್ಕಳಿಗೆ ಮೂರು ವಿಷಯಗಳಲ್ಲಿ ಹೆಚ್ಚಿನ ಆಸಕ್ತಿ. ಒಂದು ಓಡುವದು ಎರಡು

ಜಗಿಯುವುದು ಇಲ್ಲವೇ ಹಾರಾಡುವುದು ಮೂರನೆಯದು ಜೋರಿನಿಂದ ತೂರುವುದು. ಈ ಮೂರು ಅವರ ಪ್ರಾಥಮಿಕ ಆಶೆಗಳು. ಇವುಗಳನ್ನು ನಾವು ಪೂರೈಸದೇ ಹೋದರೆ ಅವರು ಶಾಲೆ ಬಿಟ್ಟು ಓಡಾಡುತ್ತಾರೆ. ಶಾಲೆಯೊಳಗೆ ಬಂದರೆ ಬೆಂಚುಗಳ ಮೇಲೆ ಹಾರಾಡಿ ಅವುಗಳನ್ನು ಮುರಿಯುತ್ತಾರೆ. ಅದನ್ನು ಇದನ್ನು ಗೋಡೆಗೆ ಕಿಟಕಿಗೆ ಒಗೆದು ಗ್ಲಾಸುಗಳನ್ನು ಪುಡಿ ಮಾಡುತ್ತಾರೆ. ಪೂರೈಸಿದರೆ ಶಾಲೆಯ ಆಸ್ತಿ ಹಾಳಾಗುವುದಿಲ್ಲ ಹಾಗು ಮಕ್ಕಳು ಶಾಲೆ ತಪ್ಪಿಸಿ ಓಡಿ ಹೋಗುವುದಿಲ್ಲ...." ನನಗೆ ಮಾಸ್ತರರು ಹೇಳಿದ ತತ್ವ ಸರಿಯೋ ಗೊತ್ತಾಗಲಿಲ್ಲ. ಆದರೂ ಅವರು ಮಕ್ಕಳಿಗೆ ಒಳ್ಳೆಯದನ್ನು ಮಾಡಲು ಹಾತೊರೆಯುವರು ಎಂಬುದು ತಿಳಿಯಿತು. ನಾನು ಮಾಸ್ತರ ಜೊತೆಗೆ ಮಾತಾಡಿದ ವಿಷಯವನ್ನು ಯಾರದೋ ಎದುರಿಗೆ ಹೇಳಿದೆ. ಅವರು ಇನ್ನೊಂದು ಘಟನೆಯನ್ನು ನನಗೆ ವಿವರಿಸಿದರು.

ಸುಮಾರು ೨೫ ವರ್ಷಗಳ ಮೊದಲಿನ ಘಟನೆ. ಇದೇ ಮಾಸ್ತರರು ಆಗ ಇನ್ನೂ ತರುಣರು. ಹೊಸದಾಗಿ ಮದುವೆ ಆಗಿತ್ತು. ಮನೆಯ ವಸ್ತುಗಳನ್ನು ಹೊಂದಿಸಲು ಕೈಯಲ್ಲಿದ್ದ ಹಣವೆಲ್ಲ ಖಾಲಿಯಾಯಿತು. ಇನ್ನೇನು ಮಾಡುವುದು? ಸಹಶಿಕ್ಷಕರು ಒಂದು ಸಂಗತಿಯನ್ನು ಸೂಚಿಸಿದರು. ಅದೆಂದರೆ ಶಾಲೆಯನ್ನು ನಡೆಸುತ್ತಿದ್ದ ಧಾರ್ಮಿಕ ಸಂಸ್ಥೆಯವರಿಗೆ ಒಂದು ಅರ್ಜಿ ಹಾಕಿ ಸಾಲ ಕೇಳುವುದು. ಇವರಿಗೂ ಬೇರೆ ಮಾರ್ಗ ಇದ್ದಿಲ್ಲ. ಒಂದು ಅರ್ಜಿಯನ್ನು ಹಾಕಿಯೇ ಬಿಟ್ಟರು. ಸಂಸ್ಥೆಯ ಅಧ್ಯಕ್ಷರು ಹಾಗೆ ಸುಮ್ಮ ಸುಮ್ಮನೇ ಹಣ ಬಿಚ್ಚುವವರಲ್ಲ. ಅರ್ಜಿಯನ್ನು ಇಟ್ಟುಕೊಂಡು ಹಲವಾರು ಕಡೆಗಳಿಂದ ವಿಚಾರಿಸಿದರು. ಎಲ್ಲರೂ ಮಾಸ್ತರರು ಒಳ್ಳೆಯ ಮನುಷ್ಯ ಎಂದೇ ಹೇಳಿದರು. ಅವರಿಗೆ ಹಣದ ಅಡಚಣೆ ಬಹಳ ಇದೆ ಎಂದೂ ಹೇಳಿದರು. ಅರ್ಜಿ ಪ್ರಾಮಾಣಿಕವೆಂದು ಗೊತ್ತಾದ ಮೇಲೆ ಅಧ್ಯಕ್ಷರು ಮಾಸ್ತರರನ್ನು ಕರೆಸಿ ಕೇಳಿದರು "ಏನ್ರಿ ಮಾಸ್ತರರೇ, ಈ ಸಾಲವಿಲ್ಲದೇ ನಿಮ್ಮ ಜೀವನ ಸಾಗಲಾರದೇ?...."

ಮಾಸ್ತರರು: "ಇಲ್ಲಾ ಸಾಹೇಬರೆ, ಅಷ್ಟು ಹಣ ಬೇಕಾಗಿದೆ. ನಾನು ಮತ್ತೆ ಬೇರೆ ಕೆಲಸಕ್ಕೆ ಅದನ್ನು ಬಳಸುವುದಿಲ್ಲ. ಪ್ರತಿ ತಿಂಗಳು ನನ್ನ ಪಗಾರದಲ್ಲಿ ಮುರಿದು ಕೊಡಿರಿ" ಎಂದು ಅಂಗಲಾಚಿದರು.

ಅಧ್ಯಕ್ಷರು ಸಾಧ್ಯವಾದಷ್ಟು ಕಡಿಮೆ ಹಣ ಕೊಡಬೇಕೆಂದು ಪ್ರಯತ್ನಿಸಿದರು. ಕೊನೆಗೆ ಪ್ರಾಮಾಣಿಕ ಮನುಷ್ಯ ಎಂದು ಹಣ ಬಿಡುಗಡೆ ಮಾಡುವುದಾಗಿ ಹೇಳಿದರು. ಮಾಸ್ತರರು ಸಂತೋಷಪಟ್ಟು, ಅಧ್ಯಕ್ಷರಿಗೆ ವಂದಿಸಿ ಮನೆಗೆ ಹೋದರು. ಹಣ ಸಿಗಲು ಒಂದು ವಾರವಾದರೂ ಬೇಕಾಗಿತ್ತು. ಮಾಸ್ತರರು ತಮ್ಮ ಕಾರ್ಯದಲ್ಲಿ ಮಗ್ನವಾಗಿ ಹೋದರು. ಒಂದು ದಿನ ಮಾಸ್ತರರ ಹೆಸರಿನಲ್ಲಿ ಒಂದು ಪೋಸ್ಟ್ ಕಾರ್ಡ್ ಬಂದಿತು. ಕಾರ್ಡಿನಲ್ಲಿ ಹೆಸರಿನ ಬುಡದಲ್ಲಿ "ಹೆಡ್ ಮಾಸ್ತರ" ಎಂಬ ಪದವಿ ಬರೆದಿತ್ತು. ಆದರೆ ಅವರು ಇನ್ನೂ "ಹೆಡ್ ಮಾಸ್ತರ" ಆಗಿರಲಿಲ್ಲ. ಇದು ಸಂಸ್ಥೆಯ ಅಧಿಕಾರಿಗಳಿಗೆ ಸರಿ ಅನಿಸಲಿಲ್ಲ. ಯಾಕೆಂದರೆ

ಆಗ ಬೇರೊಬ್ಬರು ಅಲ್ಲಿ ಹೆಡ್ ಮಾಸ್ತರ ಎಂದು ಕಾರ್ಯನಿರ್ವಹಿಸುತ್ತಿದ್ದರು. ಅವರು ಇನ್ನೂ ಸೇವೆಯಲ್ಲಿರುವಾಗಲೇ ಇದು ಅಸಾಧ್ಯ. ಅಂದಿನ ದಿನದಲ್ಲಿ ಹೆಡ್ ಮಾಸ್ತರ ರೆಂದರೆ ದೊಡ್ಡ ಹುದ್ದೆ. ತಮ್ಮ ಹೆಸರ ಮುಂದೆ ಅಂದು ಜನರು ಪ್ರಾ.ಶಾ.ಹೆ.ಮಾ ಎಂದು ಬರೆದುಕೊಳ್ಳುತ್ತಿದ್ದರು. ಈ ಮನುಷ್ಯ ಆಗಲೇ ತನ್ನ ಹೆಸರಿನ ಮುಂದೆ 'ಹೆಡ್‌ಮಾಸ್ತರ' ಎಂದು ಬರೆದುಕೊಂಡಿರು ವನಲ್ಲ ಎಂಬ ಬೇಜಾರು. ತಾ.ಶಾ.ಹೆ. ಮಾ ಎಂದರೆ "ತಾಲ್ಲೂಕು ಶಾಲಾ ಹೆಡ್‌ಮಾಸ್ತರರು" ಎಂದು ಅರ್ಥ. ಇದನ್ನು ಇನ್ನು ಕೆಲವರು ಅಪಾರ್ಥ ಮಾಡು ತ್ತಿದ್ದರು. ತಾಶಾಹೆಮಾ. ಕಿರಿ ಪದವನ್ನು ಕೆಲವು ಕುಹಕಿಗಳು "ತಾನು ಶಾಣ್ಯ ಆಗಿದ್ದರೆ ಹೆಂಡಿ ತಿನ್ನಲು ಮಾಸ್ತರು ಯಾಕಾಗ ಬೇಕು" ಎಂದು ಹೇಳುತ್ತಿದ್ದರು. ಒಟ್ಟಿನಲ್ಲಿ ಮಾಸ್ತರರು ಪೇಚಿನಲ್ಲಿ ಸಿಕ್ಕಿದರು. ಅದೇನೂ ಅವರು ಮಾಡಿದ ತಪ್ಪಲ್ಲ. ಆ ಪೋಸ್ಟ್ ಕಾರ್ಡ್ ಮಾಸ್ತರರಿಗೆ ಇನ್ನೂ ಮುಟ್ಟಿರ ಲಿಲ್ಲ. ಕಚೇರಿಯಲ್ಲಿ ಕೆಲವು ಕುಹಕಿಗಳು ಪತ್ರವನ್ನು ಓದಿಯೇ ಬಿಟ್ಟರು. ಅದರಲ್ಲಿದ್ದ ಸಂಗತಿ ಕುಹಕಿಗಳನ್ನು ಇನ್ನೂ ಪ್ರಚೋದಿ ಸಿತು. ಅವರು ಅದನ್ನು ಒಯ್ದು ಸಂಸ್ಥೆಯ ಅಧ್ಯಕ್ಷರಿಗೆ ಕೊಟ್ಟರು. ಎರಡು ಸಂಗತಿ ಗಳನ್ನು ಬಿಂಬಿಸಿದರು. ಒಂದು ತಾನು ಹೆಡ್ ಮಾಸ್ತರ ಆಗದೇ ಹೋದರೂ ಹೆಸರಿನ ಮುಂದೆ ಆ ರೀತಿ ಬರೆಸಿಕೊಂಡದ್ದು ಎರಡನೆಯದು ಪತ್ರದಲ್ಲಿಯ ಸಂಗತಿ ಮಾಸ್ತರರು ಪ್ರಾಮಾಣಿಕರಲ್ಲ ಎನ್ನುವ ಸೂಚನೆ ಕೊಡುತ್ತಿತ್ತು. ಎರಡೂ ಸಂಗತಿ ಗಳನ್ನು ಓದಿ, ಕೇಳಿ ತಿಳಿದುಕೊಂಡ ಅಧ್ಯಕ್ಷ ರಿಗೆ ಮತ್ತೆ ಸಂಶಯದ ಭೂತ ಹಿಡಿಯಿತು. ಇದ್ದ ಸಂಗತಿ ಏನು? ಎಂಬುದು ತಿಳಿಯ ಬೇಕಿತ್ತು. ಕಾರಣ ಮತ್ತೆ ಮಾಸ್ತರರನ್ನು ಸಂದರ್ಶನಕ್ಕೆ ಕರೆಸಿದರು. ಅವರ ಕೈಯಲ್ಲಿ ಪೋಸ್ಟ್ ಕಾರ್ಡ್ ಕೊಟ್ಟು ಓದಲು ಹೇಳಿದರು. ಪತ್ರದಲ್ಲಿ ತಮ್ಮ ಹೆಸರಿದೆ. ಅದರ ಮುಂದೆ ಹೆಡ್ ಮಾಸ್ತರ ಎಂದು ಬರೆದಿದೆ. ಅದನ್ನು ನೋಡಿದೊಡನೆ ಮಾಸ್ತರರು, ಕುಸಿದು ಬಿಟ್ಟರು. ಕೈ ಮುಗಿದು ವಿನಂತಿಸಿದರು. "ಅದು ನನ್ನ ತಪ್ಪು ಅಲ್ಲ" ಎಂದು ಪ್ರಾರ್ಥಿಸಿದರು. ಅಧ್ಯಕ್ಷರು ಸುಮ್ಮನಿದ್ದರು. ನಂತರ ಕಾರ್ಡಿನಲ್ಲಿರುವ ವಿಷಯಕ್ಕೆ ಬಂದರು. ಮಾಸ್ತರರು ಅದನ್ನು ಓದಿದ ಮೇಲೆ ಭೂಮಿಯೊಳಗೆ ಹೋದಂತೆ ಆಯಿತು. ಮಾಸ್ತರರು ಮುಖ ಕೆಳಗೆ ಮಾಡಿದರು. ಅಧ್ಯಕ್ಷರು ಹೇಳಿದರು. "ಏನ್ರಿ ಮಾಸ್ತರೇ, ಮೊನ್ನೆಯೇ ಕೇಳಿದ್ದೆ ಹಣ ನಿಮಗೋ ಪರರಿಗೋ" ಎಂದು. ನೀವು ನನಗೆ ಅಂದು ತಿಳಿಸಿದ್ದು ಏನೆಂದರೆ ಹಣ ನಿಮಗೇ ಬೇಕಾಗಿದೆ. ಬೇರೆಯವರಿಗೆ ಅಲ್ಲ ಎಂದು ಮಾಸ್ತರರು ಕೈ ಮುಗಿದು ಹೇಳಿದರು "ಹೌದ್ರಿ".

ಅಧ್ಯಕ್ಷರು: "ಅಲ್ರಿ ಪತ್ರದಲ್ಲಿ ಬರೆದ ವಿಷಯ ಓದಿರಿ."

ಮಾಸ್ತರರು: ಓದಿದ್ದೇನೆ ಸರ್!"

ಅಧ್ಯಕ್ಷರು ಜೋರಿನಿಂದಲೇ ಕೇಳಿದರು "ನೀವು ಸುಳ್ಳು ಹೇಳಿದಂತೆ ಆಯಿತಲ್ಲ...."

ಮಾಸ್ತರರು: "ಸರ್ ನಾನು ಸುಳ್ಳು ಹೇಳಿಲ್ಲ. ಹೇಳುವನಲ್ಲ."

ಅಧ್ಯಕ್ಷರು: "ಹಾಗಾದರೆ ನೀವು ಈ ಓಲೆ ಬರೆದವರಿಗೆ ಹಣ ಕಳಿಸುವುದಿಲ್ಲವೋ?"

ಮಾಸ್ತರರು: "ಸರ್, ಕಳಿಸುವೆನು."

ಅಧ್ಯಕ್ಷರಿಗೆ ಸಿಟ್ಟು ಬಂದಿತು. ಪತ್ರದಲ್ಲಿ ವಿಷಯವೆಂದರೆ ಯಾರೋ ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಪತ್ರ ಬರೆದಿದ್ದ. ಅವನಿಗೆ ಹಣದ ಅಡಚಣೆ ಇತ್ತು. ಪರೀಕ್ಷೆ ಫಾರ್ಮ ತುಂಬಲು ಹಣ ಇದ್ದಿಲ್ಲ. ಫಾರ್ಮ ತುಂಬದೇ ಹೋದರೇ ಒಂದು ವರ್ಷ ಹಾಳಾಗುವುದು. ಕಾರಣ ಏನೇ ಮಾಡಿ ಹಣ ಕಳಿಸಬೇಕು. ಮಾಸ್ತರರು ಆ ವ್ಯಕ್ತಿಗೆ ಹಣ ಕಳಿಸುವನೆಂದು ಹೇಳುತ್ತಾರೆ. ಮೊದಲು ಎಲ್ಲ ಹಣ ತನ್ನ ಖರ್ಚಿಗೆ ಬೇಕೆಂದು ಹೇಳಿದ್ದಾರೆ. ಸಂಸ್ಥೆಯ ಹಣ ಹೀಗೆ ದುಂದು ವೆಚ್ಚಕ್ಕೆ ಅಲ್ಲ. ಅದು ಪರರಿಗೆ ಅಲ್ಲ. ಕೇವಲ ಸಿಬ್ಬಂದಿಗೆ ಮಾತ್ರ. ಇದೆಲ್ಲ ತಿಳಿದಿದ್ದರೂ ಮಾಸ್ತರರು ಹೀಗೇಕೆ ಮಾಡುತ್ತಿರುವರು ಎಂಬುದು ಅಧ್ಯಕ್ಷರಿಗೆ ತಿಳಿಯದಾಯಿತು. ಕೈಯಲ್ಲಿದ್ದ ಒಂದು ಹಾಳೆಯನ್ನು ಅಧ್ಯಕ್ಷರು ಮಾಸ್ತರರ ಮುಖದ ಕಡೆಗೆ ತೂರಿದರು. "ಏನ್ರಿ ಪ್ರಾಮಾಣಿಕ ಎಂದು ತಿಳಿದಿದ್ದೆ. ನೀವು ನನಗೆ ಹಣ ಸ್ವಂತಕ್ಕೆ ಬೇಕೆಂದು ಬರೆದುಕೊಟ್ಟ ಕಾಗದ ಇದು. ನನ್ನೆದುರಿಗೇ ಹಣ ಗುಲ್ಬರ್ಗಾಕ್ಕೆ ಕಳುಹಿಸುವೆ ಎನ್ನುತ್ತಿರುವಿರಿ. ಇದರ ಅರ್ಥ ಏನು?" ಕುಹಕಿಗಳು ಇದನ್ನೇ ಬಯಸುತ್ತ ನಿಂತಿದ್ದರು. ಇವರಿಗೆ ಖುಷಿಯೋ ಖುಷಿ. ಮಾಸ್ತರರ ಪ್ರಾಮಾಣಿಕತೆ ಡಬ್ಬು ಬಿದ್ದು ಹೋಯಿತಲ್ಲ ಎಂಬುದು.

ಮಾಸ್ತರರು: "ಸರ್ ನನ್ನ ಪ್ರಮಾಣಿಕತೆಯ ಮೇಲೆ ಸಂಶಯ ಪಡಬೇಡಿರಿ. ನಾನು ಅರ್ಜಿ ಬರೆಯುವಾಗ ಈ ಓಲೆ ಬಂದಿರಲಿಲ್ಲ. ಆಗ ಹಣ ಎಲ್ಲ ನನ್ನ ಸ್ವಂತಕ್ಕೆ ಎಂದು ಹೇಳಿದೆ. ಬರೆದೂ ಕೊಟ್ಟೆ. ಇಂದು ಪತ್ರ ಬಂದಿದೆ. ಕಾರಣ ಈ ವ್ಯಕ್ತಿಗೆ ಬೇಕಾದ ಹಣ ಕೊಟ್ಟು ಉಳಿದ ಹಣವನ್ನು ನಾನು ಬಳಸುವೆ. ಪತ್ರ ಬರದೇ ಹೋಗಿದ್ದರೆ ಎಲ್ಲವನ್ನೂ ನಾನೇ ಬಳಸುತ್ತಿದ್ದೆ...."

ಅಧ್ಯಕ್ಷರಿಗೆ ಸಮಸ್ಯೆ ತೊಡಕಾಗತೊಡಗಿತ್ತು. ಅವರು ಸಿಟ್ಟಿನಿಂದ ಕೇಳಿದರು. "ಮಾಸ್ತರರೇ, ಏನು ಮಾತಾಡುತ್ತಿರುವಿರಿ ಎಂಬುದು ನಿಮಗೆ ತಿಳಿದಿದೆಯೋ ಇಲ್ಲವೋ?"

ಮಾಸ್ತರರು ಬಹಳ ನಮ್ರರಾಗಿ ಹೇಳಿದರು. "ಸರ್ ನಾನು ಬಡವ ನನಗೆ ಹಣ ಬೇಕಾಗಿದ್ದು ನಿಜ. ಅರ್ಜಿ ಹಾಕಿದ್ದೆ. ತಾವು ದಯಮಾಡಿ ಅದನ್ನು ಮಂಜೂರ ಮಾಡಿದಿರಿ. ಹಣವನ್ನು ಸ್ವಂತಕ್ಕೆ ಮಾತ್ರ ಬಳಸುವೆನೆಂದು ಕಾಗದಬರೆದೂ ಕೊಟ್ಟಿರುವೆ. ಅದೂ ನಿಜ. ಆದರೆ ಈ ಓಲೆ ಓದಿದ ಮೇಲೆ ನನ್ನ ಯೋಜನೆ ಬದಲಾಗಿದೆ. ಈ ಓಲೆಯನ್ನು ಬರೆದ ವ್ಯಕ್ತಿ ಗುಲ್ಬರ್ಗಾ ವಿಶ್ವವಿದ್ಯಾಲಯದಲ್ಲಿ ಎಂ.ಎ. ಮಾಡುತ್ತಿದ್ದಾನೆ. ಅವನು ನಮ್ಮ ಸ್ಕೂಲಿನ ಹಳೆಯ ವಿದ್ಯಾರ್ಥಿ. ಮನೆತನದಿಂದ ಬಹಳ ಬಡವ. ನಿನ್ನ ವಿದ್ಯಾಭ್ಯಾಸಕ್ಕೆ ತೊಂದರೆ ಆದರೆ ತಿಳಿಸು ನಾನು ಸಹಾಯಮಾಡುವೆನೆಂದು ಹೇಳಿದ್ದೆ. ಆಗೀಗ ಅಲ್ಪಸ್ವಲ್ಪ ಹಣ ಕೊಟ್ಟಿದ್ದೂ ಸತ್ಯ ಸಂಗತಿ. ಈಗ ಹಣದ

ಅವಶ್ಯಕತೆ ನನಗಿಂತ ಅವನಿಗೆ ಹೆಚ್ಚು. ಅವನ ಜೀವನದಲ್ಲಿ ಬೆಳಕು ಮೂಡುವುದು. ಇಲ್ಲವಾದರೆ ಬಡವನು ಮತ್ತೆ ಒಂದು ವರ್ಷದ ಖರ್ಚು ಹೊರಬೇಕು. ಅದು ಸಾಧ್ಯವಿಲ್ಲ. ಬಡವನ ಜೀವನ ಹಾಳಾಗುವದು. ಕಾರಣ ಶಿಕ್ಷಕನಾದ ನನ್ನ ಧರ್ಮ ವಿದ್ಯಾರ್ಥಿಯ ಅಭಿವೃದ್ಧಿ. ಈಗ ನಾನು ಸಹಾಯಮಾಡದೇ ಹೋದರೆ ದೇವರು ಮೆಚ್ಚಲಿಕ್ಕಿಲ್ಲ. ನನ್ನ ಮಗುವಿಗೆ ಮಲಗಲು ಒಂದು ತೊಟ್ಟಿಲು ಕೊಳ್ಳಲು ಬಯಸಿದ್ದೆ. ಈಗ ಮಗುವನ್ನು ಜೋಳಿಗೆಯಲ್ಲಿ ಮಲಗಲು ಬಿಟ್ಟು ತೊಟ್ಟಿಲು ಕೊಳ್ಳಬೇಕಾದ ಹಣವನ್ನು ಈ ವಿದ್ಯಾರ್ಥಿಗೆ ಕಳಿಸುತ್ತೇನೆ. ಕ್ಷಮಿಸಿರಿ, ನನ್ನಿಂದ ತಪ್ಪಾಗಿದೆ. ಆದರೆ ನಾನು ಹಾಗೆ ಮಾಡಲೇಬೇಕಾಗಿದೆ. ಅದು ನನ್ನ ಧರ್ಮ" ಎಂದು ತಲೆ ತಗ್ಗಿಸಿ ಕುಳಿತರು.

ಅಧ್ಯಕ್ಷರು: "ಮಾಸ್ತರರೇ, ಆ ಹುಡುಗನ ಹೆಸರೇನು?"

ಮಾಸ್ತರರು: ಸರ್. ಮ.... ಎಂದು....

ಅಧ್ಯಕ್ಷರು: "ಯಾವ ಊರಿನವನು"

ಮಾಸ್ತರರು: "ಸಮೀಪದ....ಹಳ್ಳಿಯವನು...."

ಅಧ್ಯಕ್ಷರು: "ಏನು, ನೀವು ಆ ಅನಾಥ ವಿದ್ಯಾರ್ಥಿಯ ಬಗ್ಗೆ ಹೇಳುತ್ತಿರುವಿರೋ?"

ಮಾಸ್ತರರು: "ಹೌದು ಸರ್"

ಅಧ್ಯಕ್ಷರು ಮಾಸ್ತರರನ್ನು ದಿಟ್ಟಿಸಿ ನೋಡುತ್ತ ಕುಳಿತರು. "ಮಾಸ್ತರರೇ, ನೀವು ಸಂಸ್ಥೆಯ ನಿಯಮದ ವಿರುದ್ಧ ನಡೆಯುತ್ತಿರುವಿರಿ ಎಂಬುದು ಗೊತ್ತೇ?"

ಮಾಸ್ತರರು ಕುಗ್ಗಿದ ಧ್ವನಿಯಲ್ಲಿ "ಹೌದು ಸರ್, ನನ್ನನ್ನು ಶಿಕ್ಷಿಸಿರಿ."

ಅಧ್ಯಕ್ಷರು ಮೇಜಿನ ಮೇಲಿದ್ದ ಗಂಟೆ ಬಾರಿಸಿದರು. ಜವಾನ ಬಾಗಿಲು ತೆಗೆದು ಒಳಗೆ ಬಂದ. ಹಣಕಾಸು ನೋಡುವ ಗುಮಾಸ್ತರನ್ನು ಕರೆಯಲು ಹೇಳಿದರು. ಗುಮಾಸ್ತ ಬಂದ. ಕೈಮುಗಿದು ನಿಂತ. ಅಧ್ಯಕ್ಷರು ಹೇಳಿದರು. "ನೋಡ್ರಿ, ಈ ಮಾಸ್ತರರು ನಮ್ಮ ಸಂಸ್ಥೆಯ ನಿಯಮಗಳಿಗೆ ವಿರುದ್ಧವಾಗಿ ವರ್ತಿಸುತ್ತಿರುವರು. ಅವರ ಅರ್ಜಿ ಬಂದಿದೆ. ಅವರಿಗೆ ಸಾಲ ಬೇಕೆಂದು ಬರೆದಿರುವರು. ಅದರಲ್ಲಿ ನಾನು ಮಂಜೂರಿ ಮಾಡಿದೆ ಎಂದು ಬರೆದಿದ್ದೆ. ಅದನ್ನು ತೆಗೆದುಕೊಂಡು ಬನ್ನಿರಿ."

ಮಂಜೂರಾದ ಸಾಲ ಹೋಯಿತು. ತನಗೂ ಅಡಚಣೆ ಆ ವಿದ್ಯಾರ್ಥಿಗೂ ತೊಂದರೆ ಎಂದು ಮಾಸ್ತರರು ಕುಗ್ಗಿದರು. ದೇವರೇ ಎಂಥ ಪರಿಸ್ಥಿತಿ ತಂದೆ ಎಂದರು. ಹುಟ್ಟಿದ ಮಗುವಿಗೆ ಬೇಕಾದ ತೊಟ್ಟಿಲೂ ಹೋಯಿತು. ವಿದ್ಯಾರ್ಥಿಯ ಪರೀಕ್ಷೆಯೂ ತಪ್ಪಿತು. ಬೆವರು ಬಿಟ್ಟಿತು. ಅಲ್ಲಿ ಕುಳಿತು ಕೊಳ್ಳಲು ಕಸಿವಿಸಿ ಆಯಿತು. ಇದೆಲ್ಲಕ್ಕೂ ಮಿಗಿಲಾಗಿ ತಾನು ಅಪ್ರಾಮಾಣಿಕ ಎಂಬ ಹೊಸ ಪದವಿ ಬೇರೆ. "ನಾನೂ ಹೊರಡಲೇ" ಎಂದು ವಿನಂತಿಸಿದರು.

ಅಧ್ಯಕ್ಷರು "ಇಲ್ಲ ಕುಳಿತುಕೊಳ್ಳಿರಿ" ಎಂದರು.

ಮಾಸ್ತರರಿಗೆ ಅನಿಸಿತು. ಇನ್ನೂ ಇವರ ನನ್ನ ಮೇಲೆ ಉಗುಳಿಲ್ಲ. ಉಗುಳಿಯೆ ಹೊರಹಾಕುವರು ಎಂದು. ಅಷ್ಟರ ಗುಮಾಸ್ತ ಲಗುಬಗೆಯಿಂದ ಮಾಸ್ತರ ಅರ್ಜಿ ತೆಗೆದುಕೊಂಡು ಬಂದು ಮಾಸ್ತ

ರನ್ನು ವಕ್ರ ದೃಷ್ಟಿಯಿಂದ ನೋಡಿ ಅಧ್ಯಕ್ಷರ ಮುಂದೆ ಇಟ್ಟ.

ಅಧ್ಯಕ್ಷರು ಅರ್ಜಿಯನ್ನು ತೆಗೆದುಕೊಂಡು ಮಾಸ್ತರರನ್ನು ನೋಡುತ್ತ ತಾವು ಮೊದಲು ಮಂಜೂರಿಮಾಡಿದ ವಾಕ್ಯವನ್ನು ಕಾಟು ಹೊಡೆದರು. ಗುಮಾಸ್ತನಿಗೆ ಸಂತೋಷ. ಒಳಗೊಳಗೇ ನಗುತ್ತಿದ್ದ. ಮಾಸ್ತರರು ನರಕ ಯಾತನೆ ಅನುಭವಿಸುತ್ತಿದ್ದರು. ಹೊರಗೆ ನಿಂತ ಕುಹಕಿಗಳಿಗೆ ಸಂಭ್ರಮ. ಅಧ್ಯಕ್ಷರು ಹೊಸದಾಗಿ ಬರೆದರು "ಇಂಥ ಮಾಸ್ತರರು ನಮ್ಮ ಶಾಲೆಯಲ್ಲಿರುವುದು ನಮ್ಮ ಸುದೈವ. ಅವರಿಗೆಬೇಕಾದ ಮೊದಲ ಮೊತ್ತದ ಜೊತೆಗೆ ಹೆಚ್ಚಿಗೆಬೇಕಾದ ಮೊತ್ತವನ್ನೂ ಸೇರಿಸಿ ಮಂಜೂರಿಮಾಡಿದೆ. ತಕ್ಷಣ ಹಣ ಅವರಿಗೆ ಸಿಗಲಿ."

ಅರ್ಜಿಯನ್ನು ಗುಮಾಸ್ತನಿಗೆ ಕೊಟ್ಟರು. ಗುಮಾಸ್ತ ಅದನ್ನು ಓದಿದ ಅವನ ಮುಖ ಕಪ್ಪಾಯಿತು. ಮಾಸ್ತರರು ತಪ್ಪಿತಸ್ಥರಾಗಿ ಕುಳಿತಿದ್ದರು. ಮೇಲೆ ಏಳಲು ಶಕ್ತಿಯೂ ಇದ್ದಿಲ್ಲ. ಅಧ್ಯಕ್ಷರೂ ಮಾತಾಡುತ್ತಿಲ್ಲ. ಮಾಸ್ತರರಿಗೆ ಗಂಟಲೇ ಹೋಗಿತ್ತು. ಐದು ನಿಮಿಷದಲ್ಲಿ ಗುಮಾಸ್ತ ಒಂದು ಲಕೋಟೆ ಹಿಡಿದುಕೊಂಡು ಬಂದ, ಅದನ್ನು ಅಧ್ಯಕ್ಷರ ಮುಂದೆ ಇಟ್ಟು ಹೊರಗೆ ಹೋದ. ಅಧ್ಯಕ್ಷರು ಲಕೋಟೆಯನ್ನು ಎತ್ತಿ ನೋಡಿದರು, ಎದ್ದು ಮಾಸ್ತರರ ಮಗ್ಗುಲಿಗೆ ಬಂದು ನಿಂತರು. ಅವರ ಹೆಗಲ ಮೇಲೆ ಕೈಯಿಟ್ಟು ಹೇಳಿದರು "ಮಾಸ್ತರರೇ, ನೀವು ನಮ್ಮ ನಿಯಮ ಉಲ್ಲಂಘಿಸಿದ್ದು ನಮ್ಮ ಸಂಸ್ಥೆಯ ಪುಣ್ಯ. ನಿಮ್ಮ ಬಗ್ಗೆ ನಾನು ಹೆಮ್ಮೆ ಪಡುತ್ತೇನೆ. ನನಗೂ ನಿಮ್ಮಂಥ ಗುರುಗಳು ಸಿಗಬೇಕಾಗಿತ್ತು. ಮುಂದಿನ ಜನ್ಮದಲ್ಲಿ ಯಾದರೂ ಸಿಗಲೆಂದು ದೇವರಲ್ಲಿ ಪ್ರಾರ್ಥಿಸುವೆ." "ಈ ಲಕೋಟೆಯಲ್ಲಿ ಹಣ ಇದೆ. ವಿದ್ಯಾರ್ಥಿಗೆ ಕಳಿಸಿರಿ. ಉಳಿದ ಹಣದಿಂದ ನಿಮ್ಮ ಮಗುವಿಗೆ ತೊಟ್ಟಿಲನ್ನು ಖರೀದಿಸಿರಿ. ನಾನು ನಿಮ್ಮ ಮನೆಗೆ ಬಂದು ತೊಟ್ಟಿಲು ತೂಗಲು ಅನುಮತಿಕೊಡಿರಿ."

ಮಾಸ್ತರರಿಗೆ ದಿಕ್ಕೇ ತೋಚಲಿಲ್ಲ. ಎದ್ದು ನಿಂತರು. ಎರಡೂ ಕಣ್ಣುಗಳು ತುಂಬಿದವು ದೃಷ್ಟಿ ಮಂಜಾಯಿತು. ಅಧ್ಯಕ್ಷರ ಸ್ಥಳದಲ್ಲಿ ದೇವರು ನಿಂತು ನಗುವಂತೆ ಕಂಡಿತು. ಮಾಸ್ತರರು ದೇವರ ಕಾಲಿಗೆ ನಮಸ್ಕರಿಸಿದರು.

ಯಾವನು ಕಾನೂನಿಗೆ ಪೂರ್ಣ ಮರ್ಯಾದೆ ಕೊಡುವನೋ ಅವನು ಕಾನೂನು ಭಂಗ ಚಳವಳಿಗೆ ಅತ್ಯಂತ ಅರ್ಹ.

—ಗಾಂಧೀಜಿ

ಉಪಾಧ್ಯಾಯರ ದಿನ: ಒಂದು ವಿವೇಚನೆ

ಡಾ|| ಎ. ಎಸ್. ರಾಘವಕುಮಾರಿ
ರೀಡರ್, ಶಿಕ್ಷಣಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು-೬

ಬದಲಾಗುತ್ತಿರುವ ಸಮಾಜದಲ್ಲಿ ಮನೆಯಲ್ಲಿಯೇ ತಂದೆ ತಾಯಿ ಇಲ್ಲವೆ ಪೋಷಕರು ತಮ್ಮ ಮಕ್ಕಳಿಗೆ ಕಲಿಸಲಾಗದಂಥ ವಿಷಯಗಳನ್ನು ಔಪಚಾರಿಕ ಶಿಕ್ಷಣ ವ್ಯವಸ್ಥೆಯಲ್ಲಿ ಕ್ರಮಬದ್ಧವಾಗಿ ಕಲಿಸಿಕೊಡುವುದಕ್ಕೆಂದು ನೇಮಕವಾಗಿರುವ ವ್ಯಕ್ತಿಯೇ 'ಶಿಕ್ಷಕ'. ಪ್ರತಿಯೊಂದು ಮಗುವಿಗೂ ಅನೇಕ ವಿಷಯಗಳನ್ನು ಅರ್ಥವಾಗುವ ರೀತಿಯಲ್ಲಿ ಬೋಧಿಸಿ ಕಲಿಕೆ, ಅರಿವು, ಮನೋಭಾವ, ಆಸಕ್ತಿ, ಸಾಮರ್ಥ್ಯ, ಸಮಯಪ್ರಜ್ಞೆ ಮುಂತಾದವುಗಳನ್ನು ಬೆಳೆಸಿಕೊಳ್ಳಲು ಸ್ಫೂರ್ತಿ ನೀಡುವ ವ್ಯಕ್ತಿ ಈತ. ಕೆಲವು ಸಂದರ್ಭಗಳಲ್ಲಿ ತಂದೆ-ತಾಯಿ, ಬಂಧು-ಬಳಗ, ಹಿತೈಷಿ ಹಾಗೂ ಮಿತ್ರರಿಗಿಂತಲೂ ಒಂದು ಪಾಲು ಹೆಚ್ಚಿನ ಜವಾಬ್ದಾರಿ ತೆಗೆದುಕೊಂಡು, ಶ್ರಮಿಸಿ ಮಗುವಿನ ಸರ್ವತೋಮುಖ ಬೆಳವಣಿಗೆಗೆ ದಾರಿದೀಪವಾಗಿ ಇರಬಲ್ಲ ವ್ಯಕ್ತಿಯೂ ಹೌದು. ಒಳ್ಳೆಯ ಬುನಾದಿ ಹಾಕುವುದರ ಮೂಲಕ ಹೇಗೆ ಒಂದು ಭವ್ಯವಾದ ಸೌಧ ನಿರ್ಮಾಣವಾಗುತ್ತದೆಯೋ ಅಂತೆಯೇ ಉತ್ತಮ ಶಿಕ್ಷಕರಿಂದ ಕಲಿತಂಥ ವ್ಯಕ್ತಿ (ವಿದ್ಯಾರ್ಥಿ) ಸಮಾಜಕ್ಕೆ ಉತ್ತಮ ಕೊಡುಗೆಯಾಗುತ್ತಾನೆ. 'ರಾಷ್ಟ್ರದ ಭವಿಷ್ಯವು ತರಗತಿಯಲ್ಲಿ ರೂಪುಗೊಳ್ಳುತ್ತವೆ' ಮತ್ತು 'ಇಂದಿನ ಮಕ್ಕಳೇ ನಾಳೆಯ ರಾಷ್ಟ್ರನಿರ್ಮಾಪಕರು' ಎಂಬ ಹೇಳಿಕೆಗಳನ್ನು ಇಲ್ಲಿ ನೆನಪಿಗೆ ತಂದುಕೊಳ್ಳುವುದು ಉಚಿತ.

ಪ್ರತಿ ವರ್ಷ ಸೆಪ್ಟೆಂಬರ್ ೫ ರಂದು ಶಿಕ್ಷಕರ ದಿನವನ್ನು ಭಾರತಾದ್ಯಂತ ಆಚರಿಸುತ್ತಿರುವುದು ಸರಿಯಷ್ಟೆ. ಇದು ಭಾರತದ ರಾಷ್ಟ್ರಪತಿಗಳಾಗಿದ್ದ ಡಾ|| ಎಸ್. ರಾಧಾಕೃಷ್ಣನ್‌ರವರು ಹುಟ್ಟಿದ ದಿನ. ಇವರೊಬ್ಬ ಗಣ್ಯ ತತ್ತ್ವಶಾಸ್ತ್ರಜ್ಞರೂ ಉತ್ತಮ ಹಾಗೂ ಭಾವಾತ್ಮಕ ಶಿಕ್ಷಕರೂ ಆಗಿದ್ದರು. ಆತ್ಮೀಯತೆ, ಸರಳತೆ, ಸಜ್ಜನಿಕೆ, ಸ್ವತಂತ್ರ ಆಲೋಚನೆ, ಸಹಾಯ ಮನೋಭಾವ, ಅಧ್ಯಯನ ಮುಂತಾದವು ಇವರು ಮೈಗೂಡಿಸಿಕೊಂಡಿದ್ದ ಹಲವಾರು ಉತ್ತಮ ಗುಣಗಳು. ಇಂಥ ಮಹಾನುಭಾವರನ್ನು ಕುರಿತು ರೇಡಿಯೋ, ದೂರದರ್ಶನ ಹಾಗೂ ಅನೇಕ ಸಂಘಸಂಸ್ಥೆಗಳು ಕೆಲವು ಕಾರ್ಯಕ್ರಮಗಳನ್ನು ವಿಶೇಷವಾಗಿ ಈ ಸಂದರ್ಭದಲ್ಲಿ ಸಂಘಟಿಸುತ್ತಿವೆ. ಇಂಥ ಕಾರ್ಯಕ್ರಮಗಳಲ್ಲಿ ಭಾಗವಹಿಸಿಯಾದರೂ ಶಿಕ್ಷಕರು ತಮ್ಮಲ್ಲಿರುವ ನ್ಯೂನತೆಗಳನ್ನೋ ಅಸಾಮರ್ಥ್ಯಗಳನ್ನೋ ಗಮನಿಸಿಕೊಂಡು ಅವಕ್ಕೆ ಪರಿಹಾರ ಕಂಡುಕೊಳ್ಳಲು ಎಡೆ ಮಾಡಿಕೊಳ್ಳಬಹುದು. ಆ ಮಹಾನ್ ವ್ಯಕ್ತಿಯ ತತ್ತ್ವಗಳನ್ನು ಅರ್ಥಮಾಡಿ

ಕೊಂಡು ಅವುಗಳನ್ನು ಇಂದಿನ ಶಿಕ್ಷಕರು ತಮ್ಮ ವೃತ್ತಿ ಹಾಗೂ ನಿತ್ಯಜೀವನಗಳಲ್ಲಿ ಅನ್ವಯ ಮಾಡಿಕೊಳ್ಳಬೇಕು ಎಂಬ ಮನೋಭಾವವನ್ನಾದರೂ ಬೆಳೆಸಿಕೊಂಡಲ್ಲಿ ಶಿಕ್ಷಕರ ಸೇವಾ ಪ್ರತಿಜ್ಞೆ ಸಾರ್ಥಕವಾದಂತೆ ಆಗುತ್ತದೆ. ಇದೇ ನಾವು ಡಾ|| ರಾಧಾಕೃಷ್ಣನ್ ಅವರಿಗೆ ಸಲ್ಲಿಸಬಹುದಾದ ನಿಜವಾದ ಗೌರವ; ಉಪಾಧ್ಯಾಯರ ದಿನಾಚರಣೆಯ ನಿಜಮೌಲ್ಯದ ಗ್ರಹಿಕೆ.

ಶಿಕ್ಷಕ ಎಂದರೆ ಯಾರು ಎಂಬುದು ಎಲ್ಲರಿಗೂ ತಿಳಿದ ವಿಷಯವೇ. ಆದರೆ ಆತ/ಆಕೆ ನಿರ್ವಹಿಸುವ ಕಾರ್ಯಗಳು ಎಷ್ಟರಮಟ್ಟಿಗೆ ಸಮರ್ಪಕವಾಗಿವೆ? ಒಂದು ವೇಳೆ ಅಸಮರ್ಪಕವಾಗಿದ್ದರೆ ಕಾರಣಗಳಾವುವು ಎಂಬುದನ್ನು ವಿಶ್ಲೇಷಣೆ ಮಾಡಿ ತಿಳಿಯುವುದು ಲೇಸು.

ಶಿಕ್ಷಕ ಎಂಬ ಪದಕ್ಕೆ ಇಂಗ್ಲಿಷ್‌ನಲ್ಲಿ ಟೀಚರ್ ಎಂದು ಕರೆಯುತ್ತಾರೆ. ಈ ಪದವನ್ನು ಕೇಳಿದೊಡನೆ 'ಒನ್ ಹು ಟೀಚಸ್ ಈಸ್ ಎ ಟೀಚರ್' ಎಂಬ ಹೇಳಿಕೆ ನೆನಪಿಗೆ ಬರುತ್ತದೆ. ಶಾಲೆಯ ಪ್ರಗತಿ, ವಿದ್ಯಾರ್ಥಿಗಳ ಅಭಿವೃದ್ಧಿ ಹಾಗೂ ತನಗಾಗೂ ಶಿಕ್ಷಕ ಅನೇಕ ಕಾರ್ಯಗಳನ್ನು ಮಾಡುತ್ತಿರುತ್ತಾನೆ. ಪುರುಷ ಮತ್ತು ಮಹಿಳೆಯರಿಬ್ಬರೂ ಈ ವೃತ್ತಿಯಲ್ಲಿ ಇರುವುದರಿಂದ ಇಬ್ಬರಿಗೂ ಶಿಕ್ಷಕ ಎನ್ನುವ ಪದ ಅನ್ವಯವಾಗುತ್ತದೆ. ವಿವಿಧ ಕಾರ್ಯಗಳನ್ನು ವಿವಿಧ ಸಂದರ್ಭ, ಪರಿಸರ ಹಾಗೂ ಕಲಿಕಾರ್ಥಿಗಳಿಗಾಗಿ ಸಂಘಟಿಸಲು ಬಹುಮುಖ ಪಾತ್ರಗಳನ್ನು ಶಿಕ್ಷಕ ನಿರ್ವಹಿಸಬೇಕಾಗುತ್ತದೆ. ಇದು ಅನಿವಾರ್ಯವೂ ಹೌದು. ಹಂತ, ಪ್ರದೇಶ, ವಿಷಯ, ಪರಿಸರ, ಲಿಂಗ, ಶೈಕ್ಷಣಿಕ ಸಂಸ್ಥೆಯ ನಿರ್ವಹಣೆ—ಹೀಗೆ ಯಾವುದೇ ಆಗಿರಬಹುದು. ಕಲಿಸುವ ವೃತ್ತಿಯನ್ನು ಕೈಗೆತ್ತಿಕೊಂಡು ವ್ಯಕ್ತಿ ಕಡೆಯ ಪಕ್ಷ ಕೆಲವೊಂದು ಗುಣಲಕ್ಷಣ, ಸಾಮರ್ಥ್ಯ, ಕೌಶಲ, ಜ್ಞಾನಸಂಪತ್ತು ಮುಂತಾದವುಗಳನ್ನು ಪಡೆದುಕೊಂಡಿರಬೇಕಾಗುತ್ತದೆ. ತಾನು ಪಡೆದಂಥ ಶಿಕ್ಷಣ ಹಾಗೂ ತರಬೇತಿಗಳ ಆಧಾರದ ಮೇಲೆ ಈ ಅಂಶಗಳನ್ನು ವೃದ್ಧಿಪಡಿಸಿಕೊಳ್ಳುವುದರ ಜೊತೆಗೆ ಪ್ರತಿ ವರ್ಷ ಹೊಸ ಅಂಶಗಳನ್ನು ಪತ್ತೆ ಹಚ್ಚಿ ತನ್ನ ವ್ಯಕ್ತಿತ್ವವನ್ನು ಉತ್ತಮಪಡಿಸಿಕೊಳ್ಳಬೇಕಾಗುತ್ತದೆ. ಈ ಉದ್ದೇಶವನ್ನು ಇಟ್ಟುಕೊಂಡೇ ನಾವು ಪ್ರತಿ ವರ್ಷ ಸೆಪ್ಟೆಂಬರ್ ೫ರಂದು ಶಿಕ್ಷಕರ ದಿನವನ್ನು ಆಚರಿಸುತ್ತಿದ್ದೇವೆ. ಅನುಭವ, ಅವಲೋಕನ, ಸಮೀಕ್ಷೆ ಮತ್ತು ಸ್ವಮೌಲ್ಯಮಾಪನಗಳ ನೆರವಿನಿಂದ ಶಿಕ್ಷಕ ತನ್ನ ನಿರೀಕ್ಷೆ, ಆಸೆ, ಮನೋಭಾವ, ಕೆಲಸ ಮಾಡುವ ಪರಿ, ಬರೆಯುವ ಶೈಲಿ ಮುಂತಾದವುವನ್ನು ತಿದ್ದಿಕೊಳ್ಳುವ ಪ್ರಯತ್ನ ಮಾಡಿಕೊಂಡರೆ ಮುಂದಿನ ಅವಲೋಕನ ಸುಧಾರಣೆಗಳಿಗೆ ಇಂಥ ದಿನಾಚರಣೆಗಳು ಎಡೆಮಾಡಿಕೊಡುತ್ತವೆ.

ಶಿಕ್ಷಕನೊಬ್ಬ ತಾನು ಏನು ಮಾಡುತ್ತಿದ್ದೇನೆ, ಏಕೆ ಈ ಕೆಲಸವನ್ನು ಹೀಗೆ ಮಾಡುತ್ತಿದ್ದೇನೆ ಎಂಬ ಅರಿವು, ಅರ್ಥಮಾಡಿಕೊಳ್ಳುವಿಕೆ ಮತ್ತು ವಿಶ್ಲೇಷಣೆಗಳನ್ನು ಮಾಡದೆ ತಡೆರಹಿತ ವಾಹನದಂತೆ ಮುಂದುವರಿಯುತ್ತಿದ್ದರೆ ಪ್ರಯೋಜನವಿರದು. ಇದರಿಂದ ತೃಪ್ತಿ ದೊರಕುವುದರ ಬದಲು ಅತೃಪ್ತಿಯೇ ದೊರೆತ ಭಾಗ್ಯವಾಗುತ್ತದೆ. ಇದಲ್ಲದೆ ಕೆಲವೊಂದು ಪ್ರಯೋಗಗಳ ಫಲಿತಾಂಶ, ಸಹೋದ್ಯೋಗಿಗಳ ಸಹಕಾರ–

ಅಸಹಕಾರಗಳು ವಿದ್ಯಾರ್ಥಿಗಳ ವಿವೇಕರಹಿತ ಟೀಕೆಗಳು, ಪ್ರತಿಕ್ರಿಯೆಗಳ ಕೊರತೆ, ಆಸಕ್ತಿಯ ಅಭಾವ, ಪರಿಸರದಲ್ಲಿ ಲಭ್ಯವಿರುವ ಅವಕಾಶಗಳನ್ನು ಬಳಸಿಕೊಳ್ಳದಿರುವಿಕೆ ಮುಂತಾದವೂ ತರಗತಿಯಲ್ಲಿನ ಅಹಿತಕರ ಹಾಗೂ ಅನಪೇಕ್ಷಿತ ವಾತಾವರಣಕ್ಕೆ ಕಾರಣ ವಾಗುತ್ತವೆ. ಇದರಿಂದ ಶಿಕ್ಷಕರು ನೆರವೇರಿಸುವ ಕೆಲಸದ ಮೇಲೆ ಪ್ರತಿಕೂಲ ಪರಿಣಾಮ ಏರ್ಪಡುವುದೆಂದು ಕೆಲವು ಸಂಶೋಧನೆಗಳು ತಿಳಿಸಿಕೊಟ್ಟಿವೆ. ಇಂಥ ಪರಿಸ್ಥಿತಿಯಿಂದ ಹೊರಬರುವುದಕ್ಕೆ ಶಿಕ್ಷಕರು ಅಂತರಾವಲೋಕನವನ್ನೂ ಸ್ವಮೌಲ್ಯಮಾಪನವನ್ನೂ ನಡೆಸಬೇಕಾಗುತ್ತದೆ. ಇದರಿಂದ ಆಸಕ್ತಿ, ಆತ್ಮವಿಶ್ವಾಸಗಳನ್ನು ಬೆಳೆಸಿಕೊಂಡು ಪ್ರತಿಯೊಬ್ಬ ಶಿಕ್ಷಕ ಇನ್ನೊಬ್ಬ ಶಿಕ್ಷಕ ಇಲ್ಲವೆ ಶಿಕ್ಷಕಿಗೆ ಉತ್ತೇಜನ, ಬೆಂಬಲ, ಸಹಕಾರಗಳನ್ನು ನೀಡುವುದು ಸಾಧ್ಯವಾಗುತ್ತದೆ. ಈ ಕೆಲಸವನ್ನು ಶಿಕ್ಷಕ ಮಾಡುತ್ತಿದ್ದಾನೆಯೇ ಎಂಬ ಪ್ರಶ್ನೆ ಮೂಡುವುದು ಸಹಜವೇ.

ಉತ್ತಮ ಶಿಕ್ಷಕ ಎಂಬ ಹೆಸರುಗಳಿಸಲು ಪ್ರತಿಯೊಬ್ಬ ಶಿಕ್ಷಕ ಸಾಕಷ್ಟು ಶ್ರಮವಹಿಸಿ ದುಡಿಯಬೇಕಾಗಿದೆ. 'ಟೀಚರ್ಸ್ ಆರ್ ಬಾರ್ನ್ ಬಟ್ ನಾಟ್ ಮೇಡ್' ಎಂಬ ಪ್ರಾಚೀನ ಹೇಳಿಕೆ ಎಲ್ಲರಿಗೂ ತಿಳಿದದ್ದೇ. ಆದರೆ 'ಅಭ್ಯಾಸಾನುಸಾರಿಣೀ ವಿದ್ಯಾ' (ಕಲಿತಂತೆ ವಿದ್ಯೆ) ಪ್ರಾಕ್ಟೀಸ್ ಮೇಕ್ಸ್ ಇಟ್ ಪರ್‌ಫೆಕ್ಟ್ ಮತ್ತು 'ಹಾಡ್ತಾ ಹಾಡ್ತಾ ರಾಗ, ನರಳ್ತಾ ನರಳ್ತಾ ರೋಗ' ಎಂಬ ಹೇಳಿಕೆಗಳು ಈ ಅಂಶವನ್ನು ಸ್ಪಷ್ಟಪಡಿಸುತ್ತವೆ. ಮುಂದುವರಿದ ರಾಷ್ಟ್ರಗಳಲ್ಲಿ ಆದರ್ಶಪ್ರಾಯ ಶಿಕ್ಷಕರು ಎನಿಸಿರುವವರು ಕೆಲಸಮಾಡುವ ಪರಿಯನ್ನು ಕೇಳಿ, ತಿಳಿದುಕೊಂಡು ನಾವು ಅಂತೆಯೇ ಕೆಲಸಮಾಡುವುದು ಒಳ್ಳೆಯದು. ಮುಂದಿನ ಶತಮಾನದಲ್ಲಿ ನಾವು ಬಾಳಿ, ಬದುಕಬೇಕಾಗಿರುವುದರಿಂದಲೂ, ಪ್ರಸ್ತುತ ನಮ್ಮ ಸಮಾಜದ ಮೇಲೆ ವೈಜ್ಞಾನಿಕ ಹಾಗೂ ತಂತ್ರಜ್ಞಾನಗಳ ಪ್ರಭಾವ ಹೆಚ್ಚಾಗುತ್ತಿರುವುದರಿಂದಲೂ ಯುಕ್ತ ಹಾಗೂ ಒಳ್ಳೆಯ ವೃತ್ತಿ ಅವಕಾಶಗಳು ಲಭ್ಯವಾದಾಗ ಅದರಲ್ಲಿ ಬೆಳೆಯಲು, ಪ್ರಗತಿ ಕಾಣಲು ಅಪೂರ್ವ ಸಾಧನೆಗಳಿಗಾಗಿ ವಂಚನೆ ಇಲ್ಲದೆ ಯೋಜನೆಮಾಡಿಕೊಂಡು ಪ್ರತಿಯೊಬ್ಬ ಶಿಕ್ಷಕನು ದುಡಿಯಬೇಕು, ದುಡಿಮೆಯಿಂದ ಕಲಿಯಬೇಕು ಮತ್ತು ತಾನೇನು ಎಂಬುದನ್ನು ನಿರೂಪಿಸಬೇಕು. 'ಕೃಷಿತೋ ನಾಸ್ತಿ ದುರ್ಭಿಕ್ಷಂ' (ಕೃಷಿಯಿಂದ ಬರಗಾಲ ಇಲ್ಲ), 'ಕಷ್ಟೇ ಫಲಿ' (ಕಷ್ಟಪಟ್ಟರೆ ಫಲವುಂಟು) ಎಂಬ ಹೇಳಿಕೆಗಳಲ್ಲಿ ಇರುವಂತೆಮಾಡುವ ಇಲ್ಲವೆ ಮಾಡಬೇಕಾದ ಕೆಲಸದ ಬಗ್ಗೆ ಒಲವು, ವಿಶ್ವಾಸ, ಗೌರವಗಳನ್ನು ಇಟ್ಟುಕೊಂಡಲ್ಲಿ ಎಷ್ಟೇ ಕಠಿಣವಾದ ಕಾರ್ಯವನ್ನಾದರೂ ಸಮರ್ಪಕವಾದ ರೀತಿಯಲ್ಲಿ ಪೂರ್ಣಮಾಡಿ ಯಶಸ್ಸು ಗಳಿಸಬಹುದು. 'ಮನಸ್ಸಿದ್ದಲ್ಲಿ ಮಾರ್ಗ ಉಂಟು' ಎಂಬ ನಾಣ್ಣುಡಿಯನ್ನು ನೆನಪಿಸಿಕೊಂಡಲ್ಲಿ ಮಾತ್ರ ಉದ್ದೇಶಿತ ಕೆಲಸ ಫಲಪ್ರದವಾಗುವುದು.

ಈಗ ವಿವಿಧ ಹಂತಗಳಲ್ಲಿ ತಮ್ಮದೇ ಆದ ಶೈಲಿಯಲ್ಲಿ ಪಾಠಗಳನ್ನು ಕಲಿಸುತ್ತಿರುವ ಶಿಕ್ಷಕರನ್ನು ಕುರಿತಂತೆ ವಿಚಾರಮಾಡೋಣ.

ಪೂರ್ವ ಪ್ರಾಥಮಿಕ ಹಂತದಲ್ಲಿ ವೇಳಾಪಟ್ಟಿ ಹಾಗೂ ಪಠ್ಯಕ್ರಮಗಳ ಜಂಜಾಟ ಇಲ್ಲ; ಏನು ಕಲಿಸಿದರೂ ನಡೆಯುತ್ತದ

...ದ್ಧಿಯಿಲ್ಲ ಎಂಬ ಧೋರಣೆ ಕೆಲವರು ...ಳಿಸಿಕೊಂಡಿದ್ದಾರೆ ಎಂಬ ಮಾತಿನಲ್ಲಿ ...ತಾಂಶ ಇಲ್ಲದಿಲ್ಲ. ಶಿಸ್ತು, ಸಂಯಮ, ...ಮಾರ್ಗದರ್ಶನ ಹಾಗೂ ಉಪಯುಕ್ತ ...ತಿಯುಗಳನ್ನು ಮುಂದಿನ ಹಂತದಲ್ಲಿ ...ಿಸಲೇಬೇಕು. ಈಗ ಅದಕ್ಕಾಗಿ ತಲೆಕೆಡಿಸಿ ...ಳ್ಳುವುದು ಏಕೆ ಎಂದುಕೊಂಡು ಕಾಲ ...ರಣ ಮಾಡುವ ಶಿಕ್ಷಕರು ಅಂದೂ ಇದ್ದರು ...ದೂ ಇದ್ದಾರೆನ್ನಲು ಅಡ್ಡಿಯಿಲ್ಲ.

...ಪ್ರಾಥಮಿಕ ಹಂತ ಕಲಿಕಾರ್ಥಿ/ ...ದ್ಯಾರ್ಥಿಯ ಜೀವನಕ್ಕೆ ಅಸ್ತಿಬಾರ ...ಾಪಾದಿಯಲ್ಲಿರುವ ಹಂತ. ಇಲ್ಲಿ ದಿಢೀರನೆ ...ೇಕ ಹೊಸ ಪರಿಕಲ್ಪನೆಗಳನ್ನು ...ಚಯಿಸಲಾಗುತ್ತಿದೆ. ಉದಾಹರಣೆಗೆ— ...ಳಾಪಟ್ಟಿಯ ಅನುಸರಣೆ, ಪಠ್ಯಕ್ರಮ, ...ಯಾದಶಿಸ್ತು, ತರಗತಿಯ ಕಾರ್ಯಗಳಿಗೆ ...ಟ್ಟ ಸಮಯವನ್ನು ಮೀಸಲಾಗಿಡು ...ು, ಮುಂತಾದವು. ಆದರೆ ಇವು ಏಕೆ ...ತ್ಯ ಮತ್ತು ಎಷ್ಟರಮಟ್ಟಿಗೆ ವ್ಯಕ್ತಿಯ ...ವನದಲ್ಲಿ ಉಪಯೋಗಕ್ಕೆ ಬರುತ್ತವೆ ...ಬುದರ ವಿವೇಚನೆ ಇದ್ದಂತೆ ಕಾಣು ...ಲ್ಲ. ಒಂದು ವೇಳೆ ಯುಕ್ತವಾದುದನ್ನು ...ದ್ಯಾರ್ಥಿ ಕೇಳಿದರೂ ಅದನ್ನು ಬದಿಗೊತ್ತಿ ...ತ ಮುಂದುವರೆಸುವ ವರ್ಗಕ್ಕೆ ಸೇರಿರುವ ...ಕರೂ ಇದ್ದಾರೆ. ಮಾಡಿದ ತಪ್ಪನ್ನು ...ುವುದಾಗಲೀ ತಿಳಿಯದ್ದನ್ನು ಸಾವಕಾಶ ...ಗಿ ಕಲಿಸುವುದಾಗಲಿ ಅತೀವಿರಳವೆನಿಸು ...ವೆ. ಇಂಥ ಸಂದರ್ಭಗಳು ಎದುರಾಗದಂತೆ ...ಮ್ಮ ಚಾಕಚಕ್ಯತೆಯನ್ನು ಪ್ರದರ್ಶಿಸುವ ...ಕರೂ ಇದ್ದಾರೆ.

...ಈ ಪರಿಸ್ಥಿತಿಯಿಂದ ಹೊರಬಂದ ...ದ್ಯಾರ್ಥಿಗಳು ಇತರರ ಒತ್ತಾಯ ದಿಂದಲೋ ಇಲ್ಲವೆ ಸ್ವಇಚ್ಛೆಯಿಂದಲೋ ಪ್ರೌಢಶಾಲೆಗೆ ಸೇರಿಕೊಳ್ಳುತ್ತಾರೆ. ಮಕ್ಕಳು ಬೆಳೆದಂತೆಲ್ಲ ಅವರಸುತ್ತಲಿರುವ ಪ್ರಪಂಚವೂ ವಿಶಾಲವಾಗುತ್ತ ಹೋಗುತ್ತದೆ. ಅಂದರೆ, ಇವರು ಕಲಿಯುವುದೂ ಅಧಿಕ, ಉಂಟಾಗುವ ಸಮಸ್ಯೆಗಳೂ ಅಧಿಕ. ಇವಲ್ಲದೆ ಪ್ರತಿಯೊಬ್ಬ ವಿದ್ಯಾರ್ಥಿಗೂ ತನ್ನ ಆಸೆ, ಅಭಿಮಾನ, ಅರಿವುಗಳನ್ನು ಕಂಡುಕೊಳ್ಳಲು ಯುಕ್ತ ಪರಿಸರಗಳು ಅನಿವಾರ್ಯ. ಆದರೆ ಇವುಗಳಿಗೆ ಇತಿಮಿತಿ ಇದೆ ಎಂಬುದನ್ನು ಮರೆಯಬಾರದು. ಇದನ್ನರಿತು ಪ್ರೌಢ ಹಂತದ ಶಿಕ್ಷಕರು ತಮ್ಮ ಕಾರ್ಯಕ್ರಮ ಗಳನ್ನು ಸಂಘಟಿಸುತ್ತಿದ್ದಾರೆಯೇ? ಅನುಮಾನವೇ ಬಾರದೆ, ಸಂಶಯಗಳೇ ಅದೇ ಸುಸ್ಥಿತಿಯಲ್ಲಿ ಇದ್ದು ಒಬ್ಬ ವಿದ್ಯಾರ್ಥಿ ಶಾಲೆ ಬಿಟ್ಟು ಹೋಗಿರಬಹುದು. ಇವನ್ನು ಕಲಿಕೆಯಲ್ಲಿ ಹಿಂದುಳಿದು ಶೈಕ್ಷಣಿಕ ಹಿಂದುಳಿ ಯುವಿಕೆಗೆ ಎಡೆಮಾಡಿಕೊಟ್ಟಿರಲು ಸಾಧ್ಯ ವುಂಟು. ವಿದ್ಯಾರ್ಥಿಯನ್ನು ಇಂಥ ಪರಿಸ್ಥಿತಿ ಯಿಂದ ಮುಕ್ತಗೊಳಿಸಲು ಸಾಧ್ಯವೇ?

ಪ್ರಾರಂಭದ ಹಂತಗಳಲ್ಲಿ ಸರಿಯಾಗಿ ಇಲ್ಲವೆ ಕ್ರಮಬದ್ಧವಾದ ರೀತಿಯಲ್ಲಿ ಕಲಿಯಲಾಗದವರೂ ವಿದ್ಯಾಭ್ಯಾಸವನ್ನು ಮುಂದುವರಿಸಬೇಕೆಂಬ ನಿರ್ಣಯತೆಗೆದು ಕೊಂಡು ಉನ್ನತ ಶಿಕ್ಷಣವನ್ನು ಕೈಗೆತ್ತಿ ಕೊಂಡರೆ ಅಲ್ಲಿನ ಶಿಕ್ಷಕರ ಪಾಡು ಹೇಳ ತೀರದು. ಇನ್ನು ವಿದ್ಯಾರ್ಥಿಗಳ ಪರಿಸ್ಥಿತಿ ಯಂತೂ ಶೋಚನೀಯವೇ ಸರಿ. 'ಅಪ್ರಿಯಂ ನಬ್ರೂಯಾತ್' (ಅಹಿತವಾದು ದನ್ನು ಹೇಳಬಾರದು) ಎಂಬ ತತ್ತ್ವವನ್ನು ಅನುಸರಿಸುತ್ತಿರುವುದರಿಂದ ಬಿಸಿತುಪ್ಪ ವನ್ನು ಗಂಟಲಿನಲ್ಲಿ ಹಾಕಿಕೊಂಡಂತೆ ಇರು

ತ್ತಿದೆ ಇಲ್ಲಿನ ಶಿಕ್ಷಕರ ಪರಿಸ್ಥಿತಿ. "ಇದು ತಪ್ಪು, ಸರಿಯಲ್ಲ" ಎಂದು ಹೇಳಿದರೆ ವಿದ್ಯಾರ್ಥಿಗಳಿಗೆ ರುಚಿಸುವುದಿಲ್ಲ; ಹೇಳದೆ ಮುಂದುವರೆಯಲು ಶಿಕ್ಷಕರಿಗೆ ಒಗ್ಗುವುದಿಲ್ಲ. ಹೀಗಾಗಿ ಎರಡೂ ಸಮೂಹಗಳು ಅನೇಕಾನೇಕ ಸಮಸ್ಯೆಗಳನ್ನು ಪ್ರತಿಬಂಧಕಗಳನ್ನೂ ಎದುರಿಸುತ್ತಿರಬೇಕಾಗುತ್ತದೆ. ಈ ದ್ವಂದ್ವ ಪರಿಸ್ಥಿತಿಯಿಂದ ವಿಮುಕ್ತಿ ಇದೆಯೋ? ಹಾಗಿದ್ದರೆ ಅಂದು ಎಂದು ಎಂಬುದೇ ಪ್ರಶ್ನೆ.

ಬೋಧನೆ ಎಂಬುದು ಮೊದಲೇ ಜಟಿಲವಾದ ಪರಿಕಲ್ಪನೆ. ಈಗಾಗಲೇ ತಿಳಿಸಿರುವಂತೆ ಸಾಮಾಜಿಕ ಪರಿಸರ ಈ ಜಟಿಲತೆಗೆ ಪೂರಕವಾಗಿದೆ. ಆದ್ದರಿಂದಲೇ ಬೋಧನಾ ಕಲಿಕಾ ಪರಿಸರ ಕೆಲವರಿಗೆ ಸಂತೋಷ ತೃಪ್ತಿಗಳನ್ನು ನೀಡುತ್ತಿದೆಯಾದರೆ ಏಕ್ಕವರಿಗೆ ಬೇಸರ, ಅತೃಪ್ತಿ, ಸಮಸ್ಯೆಗಳನ್ನು ಹೆಚ್ಚಿಸುತ್ತಿದೆ. ಇದಕ್ಕೆ ಪರಿಹಾರ ಇದೆಯೇ? ಇದೆ ವ್ಯಕ್ತಿಗಳ ವರ್ತನೆಗಳಲ್ಲಿ ಬದಲಾವಣೆ, ಉತ್ತಮ ಸಾಮಾಜಿಕ ಸಂಬಂಧಗಳು, ಲಭ್ಯ ಸೌಲಭ್ಯಗಳ ಸದುಪಯೋಗ, ಪರಿಸ್ಥಿತಿಯ ಗ್ರಹಿಕೆ, ಸುಧೃಡ ಮನೋಭಾವ, ಪರಿಸರದ ವಿಶ್ಲೇಷಣೆ, ಅವಲೋಕನ, ಪರೀಕ್ಷೆ, ಮೌಲ್ಯಮಾಪನ ಮುಂತಾದವುಗಳಿಂದ ಈ ಪರಿಸ್ಥಿತಿಯನ್ನು ಸುಧಾರಿಸಬಹುದು.

ಹಿಂದಿನ ಕಾಲದಲ್ಲಿ ಶಿಕ್ಷಕನಿಗೆ ವಿದ್ಯಾರ್ಥಿಯಿಂದ ಮಾತ್ರವಲ್ಲ ಕುಟುಂಬ ಸಮಾಜಗಳೆರಡೂ ಗೌರವ ಕೊಡುತ್ತಿದ್ದವು. ತಂದೆ ತಾಯಿಗಳ ಮಾತಿಗಿಂತಲೂ ಶಿಕ್ಷಕರ ಮಾತಿಗೆ ವಿದ್ಯಾರ್ಥಿಗಳು ಹೆಚ್ಚು ಮಾನ್ಯತೆ ಕೊಡುತ್ತಿದ್ದರು. ಗುರುಗಳ ಮಾತೆಂದರೆ ವೇದ ವಾಕ್ಯದಂತಿತ್ತು. ಶಿಕ್ಷಕರು ಕಲಿಸಿದ್ದ ನ ಚಾಚೂತಪ್ಪದೇ ಕಲಿಯುತ್ತಿದ್ದ ರ ಸಾಮಾಜಿಕ ಪರಿಸರದಲ್ಲಿ ಸಮಸ್ಯೆಗಳಿದ್ದ ರ ಅವು ಈ ಎರಡೂ ಸಮೂಹಗಳಿಗೆ—ಅಂದರೆ ವಿದ್ಯಾರ್ಥಿ ಮತ್ತು ಶಿಕ್ಷಕ—ಅಷ್ಟಾ ತೊಂದರೆ ನೀಡುತ್ತಿರಲಿಲ್ಲ. ಆದ್ದರಿಂದಲೇ ಏನೋ ಶಿಕ್ಷಕ ವಿದ್ಯಾರ್ಥಿಗಳ ನಡುವಿ ಸಂಬಂಧ ಉತ್ತಮವಾಗಿತ್ತು. ತಂದೆ ತಾಯಿ ಗಳನ್ನು ಬಿಟ್ಟು ಗುರುವಿನ ಜೊತೆಯಲ್ಲಿ— ಅಂದರೆ, ಗುರುಕುಲದಲ್ಲಿ—ವಾಸಿಸುತ್ತ ಗುರುವಿನ ಕೆಲಸಗಳಲ್ಲಿ ನೆರವಾಗುತ್ತ ಕಷ್ಟ ಕಾರ್ಪಣ್ಯಗಳನ್ನು ತಿಳಿಯುತ್ತ ವಿವಿಧ ವಿದ್ ಗಳನ್ನು ಕಲಿಯುತ್ತಿದ್ದರು. ಈ ವಿದ್ಯಾರ್ಥಿ ಗಳಲ್ಲಿ ಜ್ಞಾನ, ಪ್ರತಿಭೆ, ಧ್ಯೇಯ ವಿಧೇಯತೆ, ನಿರ್ದಿಷ್ಟತೆ, ನಿಯಮ ಸಂಸ್ಕಾರ ಮುಂತಾದವನ್ನು ಸ್ಪಷ್ಟವಾ ಗುರುತಿಸಬಹುದಿತ್ತು.

ಭಾರತಕ್ಕೆ ಸ್ವಾತಂತ್ರ್ಯ ಬಂದು ಐದು ದಶಕಗಳಾಗಿದ್ದರೂ ಕೆಲವೊಂದು ಕೆಲ ಗಳನ್ನು (ಅಂದರೆ ಬೋಧನಾ ಸಾಮಗ್ರಿ ನೀಡುವ ಅನುಭವ ಇಲ್ಲವೆ ಒದಗಿಸುವ ಚಟುವಟಿಕೆ ಮುಂತಾದವು) ತಮ್ಮ ಅವಶ್ಯಕತೆ, ಇಚ್ಛೆಗಳಿಗೆ ಅನುಗುಣವಾಗಿ ರೂಪಿಸಿಕೊಂಡು ಕೆಲಸವನ್ನು ಆರಂಭಿಸಲು ಶೈಕ್ಷಣಿಕ ಸಂಸ್ಥೆಗಳಾಗಲೀ, ಸಹೋದ್ಯೋಗಿ ಗಳಾಗಲೀ, ಕಲಿಕಾರ್ಥಿಗಳಾಗಲೀ ಶಿಕ್ಷಕರಿ ಯುಕ್ತ ಸ್ವಾತಂತ್ರ್ಯನೀಡಿಲ್ಲ. ಎಲ್ಲೋ ಯಾರೋ ಯಾವುದೋ ಸಂದರ್ಭಕ್ಕೆ ತಕ್ಕಂತೆ ರೂಪಿಸಿರುವ ಚೌಕಟ್ಟಿನಲ್ಲಿ ಇದ್ದು ಕೆಲಸ ನಿರ್ವಹಿಸಬೇಕಾಗಿದೆ ವಿಜ್ಞಾನ ಹಾಗೂ ತಂತ್ರಜ್ಞಾನಗಳ ಯು ವೆಂದು ಹೇಳುತ್ತ ೨೧ನೆಯ ಶತಮಾನದ

ರುವ ನಾವು ಬೇರೆಯವರು ನಡೆಸಿರುವ ಸಂಶೋಧನೆಗಳ ಬಗ್ಗೆ ತಿಳಿದುಕೊಳ್ಳಲಾಗದೆ, ಹೊಸ ವಿಧಿವಿಧಾನಗಳನ್ನು ಬಳಸಲಾಗದೆ ನಮ್ಮ ಪಾಠಪ್ರವಚನಗಳನ್ನು ನಿರ್ಜೀವವಾಗಿಯೇ ಉಳಿಸಿಕೊಂಡು ಮುಂದುವರೆಯುತ್ತಿದ್ದೇವೆ. ಅಂದರೆ, ನಿರ್ಜೀವ ವಸ್ತುವಿಗೆ ಜೀವಕೊಟ್ಟಂತಾಗಲಿಲ್ಲವೇ? ಇದು ಸರಿಯೇ ಎನ್ನುವುದೇ ಪ್ರಶ್ನೆ.

ಸಾಮಾಜಿಕ ಬದಲಾವಣೆ, ಆಧುನೀಕರಣ, ನಗರೀಕರಣ, ಕೈಗಾರಿಕೀಕರಣ ಮುಂತಾದವುಗಳ ಪ್ರಭಾವದಿಂದ ಜನಜೀವನ, ಸಾಮಾಜಿಕರಚನೆ, ಸಾಮಾಜಿಕ ಸಂಬಂಧಗಳಲ್ಲಿ ಬದಲಾವಣೆಗಳು ಆಗಿವೆ ಹಾಗೂ ಆಗುತ್ತಿವೆ. ಇಷ್ಟೆಲ್ಲ ಆದರೂ ಶಿಕ್ಷಕರು ಮಾಡಬೇಕಾಗಿರುವ ಕಾರ್ಯಗಳಲ್ಲಾಗಲಿ, ಅವರು ಇರುವ ಪರಿಸರದಲ್ಲಾಗಲೀ ಬದಲಾವಣೆ ಆಗದಿರುವುದು ಶೋಚನೀಯ.

ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ವಿಚಾರಗಳನ್ನು ತಿಳಿಯಬೇಕು. ಕಲಿಯಬೇಕು ಎಂಬ ಹಂಬಲ ಇಂದಿನ ವಿದ್ಯಾರ್ಥಿಗೆ ಇದೆ. ಯಾವುದೇ ಕೆಲಸ ಮಾಡುವುದಕ್ಕಾಗಲೀ, ತನಗೆ ಸಾಕಷ್ಟು ಸ್ವಾತಂತ್ರ್ಯ ಇದೆ ಎಂದು ತಿಳಿದಿರುವ ಇಂದಿನ ವಿದ್ಯಾರ್ಥಿ 'ಐ ಆಮ್ ಎ ಫ್ರೀ ಬರ್ಡ್' ಎಂದು ಹೇಳುತ್ತಿದ್ದರೂ ಅನೇಕ ರೀತಿಯ ಒತ್ತಡಗಳಿಗೆ ಸಿಲುಕಿಕೊಳ್ಳುತ್ತಿದ್ದಾನೆ. ತನ್ನಲ್ಲಿರುವ ಅಭಾವ, ಆಕಾಂಕ್ಷೆ, ದಾಹ ಮುಂತಾದವುಗಳಿಂದಾಗಿ ಅವನಿಗೆ ನಿರ್ದಿಷ್ಟದಿಕ್ಕಿನಲ್ಲಿ ಮುಂದೆ ಸಾಗಲು ಆಗುತ್ತಿಲ್ಲ. ತನ್ನ ಪ್ರತಿಭೆ ಹಾಗೂ ಗುಣಗಳನ್ನು ಪ್ರಕಟಪಡಿಸುವುದರಲ್ಲಿ ವಿಫಲನಾಗಿದ್ದಾನೆ. ಇವುಗಳನ್ನು ಪ್ರದರ್ಶಿಸಲೋಸುಗ ತಾನು ರೂಪಿಸಿಕೊಂಡಿರುವ, ಸಾಧಿಸಬೇಕಾಗಿರುವ ಧ್ಯೇಯಗಳನ್ನೇ ಮರೆಯುತ್ತಿದ್ದಾನೆ. ಇದರ ಸಲುವಾಗಿ ಆತ ನಿಯಮಗಳಿಗೆ ಬಾಹಿರವಾಗಿದ್ದುಕೊಂಡು ಇಲ್ಲವೆ ಅವುಗಳನ್ನು ಉಲ್ಲಂಘಿಸಿ ತನ್ನ ಕಾರ್ಯಗಳಲ್ಲಿ ನಿರತನಾಗುತ್ತಿದ್ದಾನೆ. ಇಂದಿನ ವಿದ್ಯಾರ್ಥಿಯಲ್ಲಿ ಸಂಸ್ಕಾರ, ಶಾಂತಿ, ವಿವೇಕ, ವಿವೇಚನೆ ಮುಂತಾದವು ಬೂದಿ ಮುಚ್ಚಿದ ಕೆಂಡದಂತಾಗಿವೆ.

ವಿಜ್ಞಾನ ಮತ್ತು ತಂತ್ರಜ್ಞಾನಗಳಲ್ಲಿನ ಸಂಶೋಧನೆಗಳು ಈ ಸಮಾಜಕ್ಕೆ ಅನೇಕ ಕೊಡುಗೆಗಳನ್ನು ಕೊಟ್ಟಿದೆ ನಿಜ. ಉದಾಹರಣೆಗೆ—ನಿಧಾನವಾಗಿ ಕಲಿಯುವ ವಿದ್ಯಾರ್ಥಿಯೊಬ್ಬ ತನ್ನಷ್ಟಕ್ಕೆ ತಾನು—ಅಂದರೆ, ತನ್ನದೇ ಆದ ವೇಗದಲ್ಲಿ—ಇತರರಿಗೆ ತಿಳಿಯದಂತೆ ಕಲಿಯಲು ಸಾಧನಗಳನ್ನೂ (ಎಲೆಕ್ಟ್ರಾನಿಕ್ ಕಲಿಕಾ ಪ್ರಯೋಗಶಾಲೆ, ಕ್ರಮವಿಧಿಕೃತ ಪಠ್ಯ, ಕ್ರಮವಿಧಿಕೃತ ಪರೀಕ್ಷೆ, ಬೋಧನೆಯಂತ್ರ) ಒದಗಿಸಿಕೊಟ್ಟಿದೆ. ಆದರೆ ಶಿಕ್ಷಕ ಮತ್ತು ಕಲಿಕಾರ್ಥಿಗಳ ನಡುವೆ ಮುಖಾಮುಖೀ ಸಂಬಂಧಗಳ ಹಾಗೂ ಮಾನವ ಸಂಬಂಧಗಳು ಇದ್ದಾಗ ಮಾತ್ರ ಪ್ರಭಾವಯುತ ಕಲಿಕೆ ಉಂಟಾಗುತ್ತದೆ ಎಂಬ ಅಂಶವನ್ನು ಸಂಶೋಧನೆಗಳು ಸ್ಪಷ್ಟಪಡಿಸಿವೆ. ಆದ್ದರಿಂದ ಶಿಕ್ಷಕನ ಸ್ಥಾನ ಬಲು ದೊಡ್ಡದು. ಆತ ನವನವೋನ್ಮೇಷಿ. ಈ ಸ್ಥಾನವನ್ನು ಯಾರಿಂದಲೂ ತುಂಬಲಾಗದು. ಆತ ಪೂರ್ಣತ್ವವನ್ನು ಪಡೆಯಬೇಕಾಗಿದೆ. ಶಿಕ್ಷಕ ನಿತ್ಯ ನೂತನನೂ, ನಿತ್ಯ ಕಲಿಕಾರ್ಥಿಯೂ ಆದರೆ ಇದು ಸಾಧ್ಯವಾಗುತ್ತದೆ. ಆದಕಾರಣ ಮುಂದಿನ ಜನಾಂಗದವರಿ

ಗಾಗಿ ಇಲ್ಲಿ ಸೂಚಿಸಿರುವ ಪಾತ್ರಗಳನ್ನು ಶಿಕ್ಷಕ ನಿರ್ವಹಿಸಬೇಕಾಗುತ್ತದೆ.

೧. ಕಲಿಕಾಸಕ್ತರಿಗೆ ಹೊಸ ಸನ್ನಿವೇಶ ಮತ್ತು ಅವಕಾಶಗಳನ್ನು ಒದಗಿಸಿ ಕೊಡುವುದು.

೨. ಬೋಧನಾ ವಿಷಯಕ್ಕೆ ಸಂಬಂಧಿಸಿದ ಹೊಸ ಪುಸ್ತಕ ಹಾಗೂ ವಿಚಾರ ಗಳನ್ನು ಅರ್ಥಮಾಡಿಕೊಳ್ಳುವುದು, ವಿಶ್ಲೇಷಿಸುವುದು ಮತ್ತು ಅನ್ವಯ ಮಾಡಿಕೊಳ್ಳುವುದು.

೩. ವಿದ್ಯಾರ್ಥಿಗಳಿಗೆ ವಿವಿಧ ಅವಕಾಶ ಗಳು ಹಾಗೂ ಸಾಧನ ಸಾಮಾಗ್ರಿ ಗಳನ್ನು ಒದಗಿಸುವುದು.

೪. ವಿದ್ಯಾರ್ಥಿಗಳಿಗೆ ಯುಕ್ತ ಸಮಯ ದಲ್ಲಿ ಯುಕ್ತ ಮಾರ್ಗದರ್ಶನ ನೀಡು ವುದು.

೫. ಆಸಕ್ತಿ, ಮನೋಭಾವ, ಸಾಮರ್ಥ್ಯ ಮುಂತಾದವನ್ನು ಬೆಳೆಸಿಕೊಳ್ಳಲು ಉತ್ತೇಜನ ಕೊಡುವುದು.

೬. ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಲು ಹಾಗೂ ಬಲಪಡಿಸಿಕೊಳ್ಳಲು ಬೆಂಬಲಕೊಡುವುದು.

೭. ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿರುವ ಸಾಮರ್ಥ್ಯ, ಕೌಶಲ, ಜ್ಞಾನ, ಪ್ರತಿಭೆ ಮುಂತಾದುವನ್ನು ಬಳಸಿಕೊಳ್ಳಲು ಪ್ರಯತ್ನಿಸುವುದು.

೮. ಸ್ವತಂತ್ರವಾಗಿ ಕಲಿಯಲು, ಕೆಲಸ ಮಾಡಲು ಹಾಗೂ ನಿರ್ದೇಶನ ಕೊಡಲು ಅವಕಾಶ ನೀಡುವುದು.

೯. ಕರ್ತವ್ಯ ಮತ್ತು ಹೊಣೆಗಾರಿಕೆ ಗಳನ್ನು ಅರ್ಥಮಾಡಿಕೊಂಡು ತನಗೆ ವಿಧಿಸಿದ ಪಾತ್ರಗಳನ್ನು ಸರಿಯಾಗಿ ನಿರ್ವಹಿಸುವುದು.

೧೦. ನಿರ್ವಹಿಸಬೇಕಾಗಿರುವ ಪಾತ್ರ ಗಳನ್ನು ಪರೀಕ್ಷೆ ಮತ್ತು ವಿಶ್ಲೇಷಣೆ ಗಳ ಮೂಲಕ ಅರ್ಥಮಾಡಿಕೊಳ್ಳು ವುದು.

೧೧. ಕೆಲಸ ಮಾಡುವ ಉಮೇದಿನಲ್ಲಿ ಕುಟುಂಬ ಹಾಗೂ ಸಮಾಜ ಹಾಕಿ ರುವ ಕಟ್ಟಳೆಗಳನ್ನು ಪಾಲಿಸು ವುದು.

೧೨. ಹೊಸ ವಿಧಿ, ವಿಧಾನ ಹಾಗೂ ತಂತ್ರ ಗಳ ಸಹಾಯದಿಂದ ಹೊಸ ವಿಷಯ ಗಳನ್ನು ಬೋಧಿಸುವುದು.

೧೩. ಅವಲೋಕನ, ಸಮೀಕ್ಷೆ, ಪರೀಕ್ಷೆಗಳ ಬಳಿಕ ಅಗತ್ಯವಿದ್ದಲ್ಲಿ ತನ್ನ ವ್ಯಕ್ತಿತ್ವಕ್ಕೆ ಹೊಸ ಅಂಶಗಳನ್ನು ಸೇರಿಸಿಕೊಳ್ಳುವುದು.

೧೪. ಶಿಕ್ಷಣದ ಗುಣಮಟ್ಟವನ್ನು ಸುಧಾರಿ ಸಲು ಪ್ರಯತ್ನಿಸುವುದು.

೧೫. ಶೈಕ್ಷಣಿಕ ವ್ಯವಸ್ಥೆಯಲ್ಲಿರುವ ಚಿಕ್ಕ ಚಿಕ್ಕ ನ್ಯೂನತೆಗಳನ್ನು ಸರಿಪಡಿಸು ವುದು.

೧೬. ಶೈಕ್ಷಣಿಕ ವ್ಯವಸ್ಥೆಗಾಗಲಿ, ಕಲಿಕಾ- ರ್ಥಿಗಳಿಗಾಗಲಿ, ಇತರ ಶಿಕ್ಷಕರಿಗಾಗಲಿ ಇಲ್ಲವೆ ಸಮಾಜದ ಸದಸ್ಯನಿಗಾಗಲಿ ಹಾನಿತರುವಂಥ ಸಾಮಾಜಿಕ ಪಿಡುಗುಗಳನ್ನು ನಿರ್ಮೂಲಮಾಡು ವುದು.

೧೭. ವಿದ್ಯಾರ್ಥಿ ಮಿತ್ರರಿಗೆ ಉಪಯುಕ್ತ ವಾದ ಕೆಲಸಗಳಲ್ಲಿ ತನ್ನಲ್ಲಿ ತೊಡಗಿಸಿ ಕೊಳ್ಳುವುದು ಇತ್ಯಾದಿ.

ಡಾ|| ಎಸ್. ರಾಧಾಕೃಷ್ಣನ್ ಅವರ ಹುಟ್ಟುಹಬ್ಬವನ್ನು ಉಪಾಧ್ಯಾಯರ ದಿನವನ್ನಾಗಿ ಆಚರಿಸುವುದರ ಮೂಲಕ ಶಿಕ್ಷಕರಲ್ಲಿ ಇರುವ ಸುಪ್ತ ವಿಶೇಷ ಪ್ರತಿಭೆಗಳು ಬದಲಾಗುತ್ತಿರುವ ಸಮಾಜದ ಅಗತ್ಯಗಳಿಗೆ ಅನುಗುಣವಾಗಿ ಹೊರಹೊಮ್ಮಲು ಶಿಕ್ಷಕರು ದೃಢಪ್ರತಿಜ್ಞೆಯನ್ನು ಕೈಗೊಳ್ಳಬೇಕಾಗಿದೆ. ಪ್ರತಿಜ್ಞೆಯನ್ನು ಸಾಮೂಹಿಕವಾಗಿ ಕೈಗೊಂಡರೆ ಮಾತ್ರ ಸಾಲದು; ಅದು ಪ್ರತಿಯೊಬ್ಬ ಶಿಕ್ಷಕನ ಅನುಷ್ಠಾನದ ಉಸಿರಾಗಬೇಕು. 'ನುಡಿದಂತೆ ನಡೆಯದಿದ್ದೊಡೆ ಅದೆಂತು ಒದಗುವನಯ್ಯ' ಎಂದು ಹೇಳಿದ ಶಿವಶರಣರ ವಚನದ ಸಾರ್ಥಕ್ಯವನ್ನು ಉಪಾಧ್ಯಾಯರ ದಿನಾಚರಣೆಯಲ್ಲಿ ಶಿಕ್ಷಕರು ಕಂಡುಕೊಳ್ಳಬೇಕಾಗಿದೆ. ಶಿಕ್ಷಕ-ಶಿಕ್ಷಣಾರ್ಥಿಗಳ ನಡುವಿನ ಸಾಮರಸ್ಯ ಇಮ್ಮಡಿಸಲು ಉಭಯರ ಸಂತತ ಪ್ರಯತ್ನ ಅತ್ಯಗತ್ಯ. ಈ ವಿಚಾರವಾಗಿ ಡಾ|| ರಾಧಾಕೃಷ್ಣನ್ ಅವರು ವಿಶೇಷ ಒತ್ತುಕೊಟ್ಟು ತಿಳಿಸಿರುವ ಅಭಿಪ್ರಾಯದ ಸಾರವಿದು: ಶಿಕ್ಷಕನ ಕೆಲಸ ಎಂದರೆ ವಿದ್ಯಾರ್ಥಿಗೆ ಬೇಕಾದ್ದನ್ನು ಮಾತ್ರ ನೀಡುವುದು ಅಲ್ಲ. ಶಿಕ್ಷಕ ನೀಡಿದ್ದನ್ನು ವಿದ್ಯಾರ್ಥಿ ಇಷ್ಟಪಡುವಂತೆ ಮಾಡುವುದೇ ಆತನ ಕೆಲಸ. ಡಾ|| ರಾಧಾಕೃಷ್ಣನ್ ಅವರ ಈ ಆಶಯವನ್ನು ಶಿಕ್ಷಕ ವರ್ಗದವರೆಲ್ಲ ನೆರವೇರಿಸುವಂತಾಗಲಿ.



ಕೇವಲ ಶಿಕ್ಷಣದಿಂದ ಜ್ಞಾನೋದಯವಾಗದು. ಶೀಲದಿಂದ ಸಂಸ್ಕಾರಗೊಂಡ ಮನಸ್ಸೇ ಜ್ಞಾನೋದಯಕ್ಕೆ ಮಾರ್ಗವಾಗುತ್ತದೆ.

ಬರೀ ನಮ್ಮ ಪೂರ್ವದ ಸಂಸ್ಕೃತಿ ಉಜ್ವಲವಾದುದೆಂದು ಹೆಮ್ಮೆ ಪಡುತ್ತಾ ಇದ್ದರೆ ಆಗಲಿಲ್ಲ. ಸದ್ಯದ ಸಮಾಜದಲ್ಲಿ ಒಂದೇ ಸಮನೆ ನಡೆದಿರುವ ನೈತಿಕ ಪತನವನ್ನು ತಡೆಯುವ ಬಗ್ಗೆ ನಾವೇನು ಮಾಡುತ್ತಿದ್ದೇವೆಂಬುದನ್ನು ಸ್ವಲ್ಪ ಯೋಚಿಸಬೇಕು.

—ಡಾ|| ರಾಧಾಕೃಷ್ಣನ್

ಆಧುನಿಕ ಭಾರತದಲ್ಲಿ ಮಹಿಳೆಯ ಸ್ಥಾನಮಾನ

ಕು॥ ಸಮತಾ ಬಿ. ದೇಶಮಾನೆ
ಸಂಶೋಧನಾ ವಿದ್ಯಾರ್ಥಿ
ಸಮಾಜಶಾಸ್ತ್ರ ಅಧ್ಯಯನ ವಿಭಾಗ
ಮಾನಸಗಂಗೋತ್ರಿ, ಮೈಸೂರು-೬

'ಎಲ್ಲಿ ಸ್ತ್ರೀಯರು ಪೂಜಿಸಲ್ಪಡುತ್ತಾರೋ, ಅಲ್ಲಿ ದೇವತೆಗಳು ರಮಿಸುತ್ತಾರೆ' ಎಂದು ಹೇಳಿದ ಪ್ರಾಚೀನ ಹಿಂದೂ ಸಂಸ್ಕೃತಿಯು ಒಡಲಲ್ಲೇ ಹೆಣ್ಣಿಗೆ ಸ್ವಾತಂತ್ರ್ಯವನ್ನು ನಿರಾಕರಿಸಿದ ಆ ಸಂಸ್ಕೃತಿ ಅವಳಿಗೆ ಸಂಕೋಲೆಯನ್ನು ಬಿಗಿದು ಧ್ವನಿ ಎತ್ತದಂತೆ ಮಾಡಿದೆ. ಪ್ರಾಚೀನ ಕಾಲದಲ್ಲಿ ಮಹಿಳೆಯರ ಸ್ಥಿತಿ ಇಂದಿಗಿಂತ ಉತ್ತಮವಾಗಿತ್ತು. ಯಾವ ಲಿಂಗಭೇದವಿಲ್ಲದೆ ಎಲ್ಲರಿಗೂ ವಿದ್ಯಾಭ್ಯಾಸ ಮತ್ತು ಉಪನಯನದ ಸಂಪೂರ್ಣ ಹಕ್ಕಿತ್ತು.

ಜವಾಹರಲಾಲ್ ನೆಹರು ಒಂದೆಡೆ ಹೀಗೆ ಹೇಳುತ್ತಾರೆ. "ಮಹಿಳೆಗೆ ಸ್ವಾತಂತ್ರ್ಯ ದೊರೆಯಬೇಕಾದರೆ ವಿವಾಹ ಒಂದು ವೃತ್ತಿ ಎಂಬ ಭಾವನೆ ಮೊದಲು ಮರೆಯಬೇಕು. ಸ್ವಾತಂತ್ರ್ಯವು ಆರ್ಥಿಕ ಸ್ಥಿತಿಗತಿಗಳ ಮೇಲೆ ಅವಲಂಬಿಸಿದೆ. ಮಹಿಳೆ ಆರ್ಥಿಕವಾಗಿ ಸ್ವಾತಂತ್ರಳಾಗದೆ ಹಾಗೂ ಸ್ವಯಂ ಗಳಿಕೆಯಲ್ಲಿ ತೊಡಗದಿದ್ದರೆ ಅವಳು ಗಂಡ ಅಥವಾ ಇನ್ಯಾರ ಮೇಲೋ-ಅವಲಂಭಿತಳಾಗಿರಬೇಕಾಗುತ್ತದೆ, ಅಲ್ಲಿ ತನ್ನ ವೈಯಕ್ತಿಕ ವಿಚಾರಕ್ಕೆ ಅವಕಾಶ ಕುಂಠಿತವಾಗುತ್ತದೆ. ಪರಾವಲಂಬಿಗಳೆಂದಿಗೂ ಸ್ವತಂತ್ರರಲ್ಲ ಸ್ತ್ರೀ ಪುರುಷರ ಸಂಬಂಧ ಪರಸ್ಪರ ಅವಲಂಬನೆ ಇಲ್ಲವಂತಹ ಸ್ವತಂತ್ರ ಹಾಗೂ ಸಂಗಾತಿಯಾಗಿರುವಂಥದ್ದು."

ವೈದಿಕ ಸಂಸ್ಕೃತಿಗೆ ಸುಮಾರು ೩,೦೦೦ ವರ್ಷಗಳ ಇತಿಹಾಸವಿದೆ, ಪರದೇಶಿಗಳಾದ ಅಲೆಮಾರಿಗಳಾದ ಆರ್ಯರು ಭಾರತವನ್ನು ಸುಮಾರು ಕ್ರಿ.ಪೂ. ೨,೩೦೦ರ ಸುಮಾರಿಗೆ ಪ್ರವೇಶಿಸುವುದಕ್ಕೆ ಮುಂಚೆಯೇ ಭಾರತದಲ್ಲಿ ಸಿಂಧೂ ನದಿಯ ನಾಗರಿಕತೆಯು ಸಾಕಷ್ಟು ಬೆಳವಣಿಗೆಯ ಹಂತದಲ್ಲಿತ್ತು. ಹರಪ್ಪ ಮೊಹೆಂಜೋದಾರೋದ ನಾಗರಿಕತೆಯಲ್ಲಿ ಸಹಜವಾಗಿಯೇ ಆರ್ಥಿಕ ಚಟುವಟಿಕೆಗಳಲ್ಲಿಯೂ ಸ್ತ್ರೀ ಪುರುಷರನ್ನು ಸಮಾನವಾಗಿಯೇ ಭಾವಿಸುತ್ತಿದ್ದು, ಸ್ವಯಂ ಆಸಕ್ತಿಯಿಂದ ಭಾಗವಹಿಸುತ್ತಿದ್ದರು. ವೈದಿಕ ಕಾಲದಲ್ಲಿಯೂ ಹೆಣ್ಣಿನ ಸ್ಥಾನಮಾನಕ್ಕೆ ಏನೂ ಚ್ಯುತಿ ಬಂದಂತೆ ಕಾಣುವುದಿಲ್ಲ. ಕ್ರಿ.ಪೂ. ೬ನೆಯ ಶತಮಾನದ ವೇಳೆಗೆ ಬುದ್ಧ ಮತ್ತು ಮಹಾವೀರರ ಕಾಲದಲ್ಲಿ ಮಹಿಳೆಯರ ಸ್ಥಾನಮಾನದಲ್ಲಿ ಅನೇಕ ಬದಲಾವಣೆಯನ್ನು ಕಾಣುತ್ತೇವೆ.

"ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ" ಎಂದ ಮನುವಿನ ವಿಚಾರದ ವಿರೋಧವಾಗಿ ಮಹಿಳೆಯರಲ್ಲಿ ಹೊಸ ಆತ್ಮವಿಶ್ವಾಸವನ್ನು ಮೂಡಿಸಿದವರಲ್ಲಿ ಪ್ರಥಮರು ಈಶ್ವರ

ಚಂದ್ರ ವಿದ್ಯಾಸಾಗರ. ಮಹಿಳೆ ರಾಷ್ಟ್ರದ ಉನ್ನತಿಯ ಮುಖ್ಯ ವಾಹಿನಿ ಎಂದಿದ್ದಾರೆ ಅವರು. ಪ್ರಾಚೀನ ಸಮಾಜದಲ್ಲಿ ವರ-ದಕ್ಷಿಣೆಯ ಹೆಸರೇ ಇರಲಿಲ್ಲ. "ನನಗೆ ಲಿಂಗ ಭೇದವಿಲ್ಲದ ವಿಮುಕ್ತ ಮಾನವನಿರುವ ನೂತನ ಮಾನವನ ಆವಿಷ್ಕಾರವಾಗುವ ಜಗತ್ತಿನ ಸೃಷ್ಟಿಬೇಕು" ಎಂದು ಸ್ತ್ರೀ ಇಂದು ನಿರೀಕ್ಷೆಯಲ್ಲಿದ್ದಾರೆ.

ಚಿನ್ನದ ಪಂಜರದಲ್ಲಿದ್ದರೂ ಗಿಣಿಗೆ ಅದು ಬಂಧನವೇ. ಹೆಣ್ಣು ಬಾಲ್ಯದಲ್ಲಿ ತಂದೆಯ ರಕ್ಷಣೆಯಲ್ಲಿಯೂ, ಯೌವನದಲ್ಲಿ ಪತಿಯ ಆಶ್ರಯದಲ್ಲಿಯೂ, ವೃದ್ಧಾಪ್ಯದಲ್ಲಿ ಮಕ್ಕಳ ರಕ್ಷಣೆಯಲ್ಲಿಯೂ ಇರಬೇಕೆಂದು ಮನು ವಿವರಿಸಿದ್ದಾನೆ (ಮನುಸ್ಮೃತಿ) ಅವಳಿಗೆ ನಾಲ್ಕು ಗೋಡೆಯ ಮಧ್ಯೆಯೇ ಪ್ರಪಂಚ. ಮಹಿಳೆಯನ್ನು ಕೇವಲ ಭೋಗದ ವಸ್ತುವೆಂದು ಪರಿಗಣಿಸಬೇಕು ಅಲ್ಲದೇ ಅವಳು, ವಿಷಜಂತು, ಗಂಡಿನ ನಾಶಕ್ಕೆ ಹೆಣ್ಣಿನ ಕೈವಾಡವಿರುತ್ತದೆ ಎಂದು ನುಡಿದಿದ್ದಾನೆ. ೧೯ನೆಯ ಶತಮಾನದ ಕಡೆಯ ದಿನಗಳು ಮಹಿಳೆಯರ ಪಾಲಿಗೆ ಬೆಳಕಿನ ದಿನಗಳು. ಸಾಮಾಜಿಕ ಮೌಲ್ಯಗಳು ಬದಲಾದಂತೆ ಸ್ತ್ರೀಯ ಸ್ಥಿತಿ ಗತಿಗಳಲ್ಲಿಯೂ ಹಲ ಕೆಲವು ಮಾರ್ಪಾಟು ಗಳು ಸುಧಾರಣೆಗಳು, ನಡೆದವು.

ಹೆಣ್ಣು ಸಮಾಜದ ಅವಿಭಾಜ್ಯ ಅಂಗ; ಆಕೆಗೂ ಸಮಾಜದಲ್ಲಿ ಸಮಾನ ಸ್ಥಾನ ಮಾನದ ಅಗತ್ಯವಿದೆ. ೧೯೯೧ರ ಜನಗಣ-ತಿಯ ಪ್ರಕಾರ ಭಾರತದಲ್ಲಿ ಒಟ್ಟು ಜನ ಸಂಖ್ಯೆ ೮೩,೬೨,೧೨,೧೬೧ ಇದ್ದು ಪುರುಷ ೪೩,೩೫,೮೩,೮೨೯ ಮತ್ತು ಸ್ತ್ರೀಯರು ೪೦,೨೬,೨೮,೩೩೨. ಅಕ್ಷರಸ್ಥರು ಒಟ್ಟು ಶೇ. ೫೨.೧೧. ಸ್ತ್ರೀಯರು ಶೇ. ೩೯.೪೨. ಇಂದು "ಉದ್ಯೋಗಂ ಸ್ತ್ರೀ ಲಕ್ಷಣಂ" ಬೌದ್ಧಿಕ ಹಾಗೂ ದೈಹಿಕವಾಗಿ ಎಂದು ವರ್ಗೀಕರಿಸಬಹುದು.

ಇತ್ತೀಚೆಗೆ 'ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ' ಮಾನವ ಸಂಪನ್ಮೂಲ ಸಚಿವಾಲಯ ಹೊರ ತಂದಿರುವ 'ಮಹಿಳೆಯರ ಮೇಲಿನ ದೌರ್ಜನ್ಯ' ಎಂಬ ವರದಿ ತಿಳಿಸುವಂತೆ ಪ್ರತಿ ೫೪ ನಿಮಿಷಗಳಿಗೆ ಒಬ್ಬ ಮಹಿಳೆಯ ಅತ್ಯಾಚಾರ ಪ್ರತಿ ೨೬ ನಿಮಿಷಗಳಿಗೆ ಒಂದು ದೈಹಿಕ ಪೀಡನೆ, ಪ್ರತಿ ೪೫ ನಿಮಿಷಗಳಿಗೆ ೧ ಅಪಹರಣ, ಪ್ರತಿ ೫೧ ನಿಮಿಷಗಳಿಗೆ ಒಂದು ಚುಡಾಯಿಸುವಿಕೆ, ಪ್ರತಿ ೧೦೨ ನಿಮಿಷಗಳಿಗೆ ಒಂದು ವರದಕ್ಷಿಣೆ ಸಾವು ಮತ್ತು ಪ್ರತಿ ೭ ನಿಮಿಷಗಳಿಗೆ ಒಂದು ಅಪರಾಧ ಮಹಿಳೆಯರ ಮೇಲೆ ನಡೆಯುತ್ತಿದೆ.

ಇಂದು ಮಹಿಳೆ ಸೈನ್ಯವನ್ನೂ ಸೇರಿದಂತೆ ಎಲ್ಲ ಕ್ಷೇತ್ರದಲ್ಲಿಯೂ ದಿಟ್ಟ ಹೆಜ್ಜೆ ಹಾಕುತ್ತಿದ್ದಾಳೆ. ಭಾರತದಲ್ಲಿ ೭೦೦,೦೦೦ ಮಹಿಳೆಯರಿಗೆ ವಿಶ್ವವಿದ್ಯಾನಿಲಯದ ಪದವಿಗಳು ದೊರೆತಿವೆ. ಒಂದು ದೇಶದ ನಾಯಕಿಯಾಗಿ ಸರ್ವಾನುಮತದಿಂದ ಆಯ್ಕೆಯಾದ ಪ್ರಧಾನಿ ಇಂದಿರಾಜೀ, ಮಹಿಳೆಯರಿಗೆ ಮಾದರಿಯಾದ ಮಾರ್ಗ ದರ್ಶಿನಿ ಮಾತೆ ಥೆರೆಸಾ. ಪತಂಜಲಿಯ ಆಪಿಶಲಾ, ಗಾರ್ಗಿ, ಮೈತ್ರೇಯಿ, ಅಪಲ—ಇವರು ವ್ಯಾಕರಣ, ಮೀಮಾಂಸಾ ಶಾಸ್ತ್ರಗಳ ಆಚಾರ್ಯರಾಗಿದ್ದರು. ಇದು ಸಂಪೂರ್ಣ ಪ್ರಜಾಪ್ರಭುತ್ವದ ಕಾಲವಾಗಿದೆ.

ಮಹಿಳೆಯರ ವ್ಯಕ್ತಿತ್ವದ ಬೆಳವಣಿಗೆಯನ್ನು ನಾವು ವೇದಕಾಲದಿಂದ ಹಿಡಿದು

ಆಧುನಿಕ, ವೈಜ್ಞಾನಿಕ ಯುಗದವರೆಗೂ ನೋಡಬಹುದು. ಇಂದು ವಿಶಾಲ ಜಗತ್ತಿನಲ್ಲಿ ಮಹಿಳೆ ಕಾಲಿರಿಸುತ್ತಿದ್ದಾಳೆ. ಸಾಮಾಜಿಕವಾಗಿ ಮಹಿಳೆ ಉದ್ಯೋಗದಲ್ಲಿದ್ದರೆ ಸ್ವತಂತ್ರ ಬಾಳು ಸಾಗಿಸುತ್ತಾಳೆ. ಹಿಂದಿನಂತೆ ಬಾಲ್ಯವಿವಾಹ, ಪರದಾಪದ್ಧತಿ, ಚಿತ್ತಲೆಸೇವೆ, ವರದಕ್ಷಿಣೆ ದಿನಕಳೆದಂತೆ ಜಾಗ್ರತಿಯಿಂದ ನಾಶವಾಗುತ್ತಿವೆ.

ಬಂಗಾಳ, ಬನಾರಸ್ ಮತ್ತು ಮಿಥಿಲಾ ಇವುಗಳಲ್ಲಿ ಸ್ತ್ರೀಗೆ ಆಸ್ತಿಯಲ್ಲಿ ಪಾಲುಗಾರಿಕೆಯು ಸೀಮಿತವಾಗಿದೆ. ಮಹಾರಾಷ್ಟ್ರದಲ್ಲಿ ಅಜ್ಜಿ (ತಂದೆಯ ತಾಯಿ) ನಂತರ ಸೋದರಿಯೇ ಮುಂದಿನ ಆಸ್ತಿಗೆ ಹಕ್ಕುದಾರಳು. ಭಾರತದ ಸ್ತ್ರೀಯರಲ್ಲಿ ಅಹಿಂಸೆ, ಸತ್ಯ, ಆಕ್ರೋಶ, ತ್ಯಾಗ, ಶಾಂತಿ, ದಯೆ, ಪಾಪ—ಪುಣ್ಯದ ಪರಿಕಲ್ಪನೆಗಳು ಇರುವುದರಿಂದ ಆಸ್ತಿಯ ಹಕ್ಕು ಕಾನೂನಿನಲ್ಲಿಯೇ ಗೊಳಾಡುತ್ತಿದೆ, ಶಿಕ್ಷಿತ ಸ್ತ್ರೀ ಅದನ್ನು ಪಡೆಯುತ್ತಿದ್ದಾಳೆ. ಸರಳ ಜೀವನ ಉಚ್ಚ ವಿಚಾರ ಇದು ನಮ್ಮ ಸಂಸ್ಕೃತಿಯ ತಿರುಳು.

ಶುಭಕಾರ್ಯದ ಒಡೆಯರು ಬ್ರಾಹ್ಮಣರು ಸಮಾಜದ ಅತ್ಯಂತ ಉನ್ನತ ಮಟ್ಟದಲ್ಲಿದ್ದಾರೆ. ನಂತರ—ಈ ಒಡೆಯರನ್ನು ಹಾಗೂ ಅವರ ಸಂಪತ್ತನ್ನು ರಕ್ಷಿಸಲು ಕ್ಷತ್ರಿಯ ದ್ವಿತೀಯ ಸ್ತರದಲ್ಲಿ ಹಾಗೂ ಇವರ ಭೋಗಜೀವನಕ್ಕೆ ವಿಲಾಸಮಯ ಬದುಕಿಗೆ ವೈಶ್ಯರು ವ್ಯಾಪಾರದೊಂದಿಗೆ ಈ ವ್ಯವಸ್ಥೆಯಲ್ಲಿ ತೃತೀಯ ಸ್ಥಾನ ಪಡೆದುಕೊಂಡರು. ನಂತರ ಹಾಗೂ ಕೊನೆಯದಾಗಿ ಮೇಲಿನ ಮೂರು ವರ್ಗದವರ ಸೇವೆಗಾಗಿ, ಅಶುಭ ಕಾರ್ಯಕ್ಕಾಗಿಯೇ ಮೀಸಲಾದ ವರ್ಗವೇ ಶೂದ್ರ—ಅವರ ಜೀವನ ಶೈಲಿ ಹೇಗಿರುತ್ತದೆ?

ಶೂದ್ರರ ನಿತ್ಯದ ಬದುಕು-ಬವಣೆ, ಅವ್ಯವಸ್ಥಿತವಾದ ಮನೆ, ಅರೆಹೊಟ್ಟೆಯ ಊಟ, ಶಿಕ್ಷಕರಿಲ್ಲದ ಶಾಲೆ, ಸ್ವಚ್ಛತೆ ಇಲ್ಲದ ಬಡಾವಣೆ, ಗಾಳಿ, ಬೆಳಕು, ನೀರು, ವಿದ್ಯುಚ್ಛಕ್ತಿ ಕಾಣದ ಕತ್ತಲಿನ ಮಣ್ಣಿನ ಮನೆ. ಮಕ್ಕಳ ಪಾಲನೆ, ಪೋಷಣೆಯಲ್ಲಿ ಜವಾಬ್ದಾರಿ ರಹಿತ ತಂದೆ ತಾಯಿಯರು. ಮಳೆಯ ಹನಿಯು ಮನೆಯ ಒಳಗೆ ಬಾರದಿರಲೆಂದು ಅಶಾಶ್ವತವಾಗಿ ಪ್ಲಾಸ್ಟಿಕ್ ಕವರ್ ಅಥವಾ ತೆಂಗಿನಗರಿ, ಬಿದಿರಿನಿಂದ, ಆವರಿಸಿರುವ ಮೇಲ್ಛಾವಣಿ, ಮನೆಯ ಸುತ್ತ-ಮುತ್ತಲೂ ಮಾನವನಿಗಿಂತಲೂ ಸ್ವತಂತ್ರವಾಗಿ ಓಡಾಡುವ ಹಂದಿ, ನಾಯಿಗಳು. ಸೊಳ್ಳೆಗಳ ಕಾಟ, ಅನಕ್ಷರಸ್ಥ ಕುಡುಕ ಗಂಡಂದಿರ ಕಾಟ, ನೆನೆಯಲೂ ಆಗದಂತ ಭೀಕರ ಚಿತ್ರಣ. ಇವರೇ ಅಸ್ಪೃಶ್ಯ ದಲಿತರು. ದಲಿತರು ಸಾಂಸ್ಕೃತಿಕ ಜಾಗೃತಿಯ ಮೂಲಕ ವಿಚಾರಶೀಲರಾಗಬೇಕು.

ದಲಿತ ಎಂಬ ಪದವೇ ಕಾಂಗ್ರೆಸ್ಸಿನವರು ಕೊಟ್ಟ 'ಹರಿಜನ' ಎಂಬ ಪದದ ಮುಂದುವರೆದ ರೂಪ. ಹಿಂದೆ ಕರೆಯುತ್ತಿದ್ದ ಹೊಲೆಯಮಾದಿಗ ಎಂಬ ಪದಗಳ ಪರ್ಯಾಯ ರೂಪವೇ 'ದಲಿತ' ಎಂದು ತಿಳಿದುಕೊಳ್ಳಲಾಗಿದೆ. ದಲಿತರು ಕೇವಲ ಶೋಷಿತರಷ್ಟೆ ಅಲ್ಲ. ಶೋಷಣೆಯ ಜೊತೆಗೆ ಅಮಾನವೀಯವಾದ ಹಿಂಸೆ ಕ್ರೌರ್ಯಗಳಿಗೆ ಒಳಗಾದವರು. ಒಂದು ವ್ಯಕ್ತಿತ್ವವೇ ಇಲ್ಲದವರಂತೆ ನಡೆಯಿಸಿಕೊಳ್ಳಲ್ಪಟ್ಟವರು. ನಮ್ಮ ಸಮಾಜ ಸ್ತ್ರೀಯರನ್ನು ಶೂದ್ರರೆಂದೇ ಪರಿಗಣಿಸಿರುವುದನ್ನು ಕಾಣುತ್ತೇವೆ.

ದಲಿತ ಅಂದರೆ ಹಿಂಸೆಗೆ ಒಳಗಾದವನು, ದೈಹಿಕ ಮಾನಸಿಕ ಹೊಡೆತಕ್ಕೆ ಗುರಿಯಾದವರು, ಆರ್ಥಿಕ ಸಾಮಾಜಿಕ ಶೋಷಣೆಗೆ ಬಲಿಯಾದ, ಸಾಂಸ್ಕೃತಿಕವಾಗಿ ದಿವಾಳಿಯಾದ ಜನರೇ ದಲಿತರು. ಆರ್ಯರು ಕೊಡುವ ಹಿಂಸೆಗೆ ಕಣ್ಣೀರಿಗೆ ಬದಲು ರಕ್ತ ಸುರಿಸುವ ದುರ್ಬಲವರ್ಗವೇ ದಲಿತರು. ಡಾ|| ಬಾಬಾ ಸಾಹೇಬರು ಈ ಜನರನ್ನು ಡಿಪ್ರೆಸ್ಡ್ ಕ್ಲಾಸ್ ಎಂದು ಕರೆದರು. ೧೯೩೦ ರಲ್ಲಿ ಗಾಂಧಿ ದಲಿತರನ್ನು ''ಹರಿಜನ'ರೆಂದು ಕರೆದರು.

ದಲಿತ : ೧) ಶೋಷಣೆ ಎಂಬ ಪದಕ್ಕೆ ಜಾತಿ ಭೇದವಿಲ್ಲ ; ಆರ್ಥಿಕ–ಸಾಮಾಜಿಕ, ರಾಜಕೀಯ ರಂಗದಲ್ಲೆಲ್ಲಾ ಶೋಷಣೆಗೆ ಒಳಗಾದ ಎಲ್ಲ ಜನರು ದಲಿತರು. ೨) ಪಂಚಮರು ಅಥವಾ ಬಹಿಷ್ಕೃತರು ಎಂದು ಕರೆಯಿಸಿಕೊಳ್ಳುವ ಅಸ್ಪೃಶ್ಯರೆಲ್ಲರೂ ದಲಿತರು ; ೩) ಅಸ್ಪೃಶ್ಯರೂ ಸೇರಿದಂತೆ ಅಸ್ಪೃಶ್ಯತೆಯ ನೋವನ್ನು ಅನುಭವಿಸದಿದ್ದರೂ ಅಸ್ಪೃಶ್ಯರ ಹಾಗೆ ಆರ್ಥಿಕ–ಸಾಮಾಜಿಕ ರಾಜಕೀಯ ರಂಗದಲ್ಲಿ ಶೋಷಣೆಗೆ ಒಳಗಾದ ಜನರೂ ಸೇರಿ ದಲಿತರಾಗುತ್ತಾರೆ. ಹಿಂದುಳಿದವನು, ದಮನಕ್ಕೆ ಒಳಗಾದವನು ಹಾಗೂ ಮಹಾರಾಷ್ಟ್ರದಲ್ಲಿ ದಲಿತ ಕೇವಲ ಮಹಾರ್ ಜನಾಂಗ ಮನುಷ್ಯ ಸಮಾಜದೊಂದಿಗೆ ಬದುಕಲಾರದೆ, ಊರ ಹೊರಗೆ ವಾಸಿಸಿ ಕೀಳು ವೃತ್ತಿಗೆ ಅವಲಂಬಿತರಾಗಿ ಹೆಸರು ಹೇಳಿಕೊಳ್ಳಲು ನಾಚಿಕೆಪಡುವ ಅಸ್ಪೃಶ್ಯರು ಅಥವಾ ಬಹಿಷ್ಕೃತರೆನಿಸಿಕೊಂಡವರೆಲ್ಲರೂ ದಲಿತರೆನಿಸಿಕೊಳ್ಳುತ್ತಾರೆ. 'ದಲ' ಎನ್ನುವುದು ಸಂಸ್ಕೃತ ಪದದಿಂದ ಬಂದಿದೆ, 'ದಲ' ಎಂದರೆ ಚೂರು, ತುಂಡು, ಭಾಗ, ಸೈನ್ಯ ಎಂಬುದಾಗಿ ಅರ್ಥವಿದೆ.

ಅಸ್ಪೃಶ್ಯ ಜನಾಂಗದ ಒಟ್ಟುಗೂಡಿಸಿ ಕರೆಯುವ ಪದಗಳು, ಅಸ್ಪೃಶ್ಯರು, ಅಂತ್ಯ, ಅಂತ್ಯಜರು, ಅಂತ್ಯವಸಾಯಿ, ಅತಿಶೂದ್ರರು, ಅನುಸೂಚಿತ, ದಸ್ಯು, ಆದಿಮ ಜನಾಂಗ, ಆದಿಕರ್ನಾಟಕ, ತಿರುಕ್ಕುಲತ್ತರ್, ಪಂಚಮರು ಬಹಿಷ್ಕೃತರು, ಹರಿಜನರು, ಪರಿಶಿಷ್ಠ ಜಾತಿ, ಇತ್ತೀಚೆಗೆ ಬಳಕೆಯಲ್ಲಿ ದುದ್ದು 'ದಲಿತ'. ದಲಿತಮಹಿಳೆಯರ ಸ್ಥಾನಮಾನದಲ್ಲಿ ನಿರೀಕ್ಷಿಸಿದಷ್ಟು ಬದಲಾವಣೆಯನ್ನು ನಾವು ಕಾಣದಿದ್ದರೂ ಸ್ವಲ್ಪ ಬದಲಾವಣೆಯನ್ನು ಶಿಕ್ಷಣ, ಸಂಸ್ಕೃತಿಯ ಮೂಲಕ ನಾವು ಕಂಡುಕೊಳ್ಳುತ್ತಿದ್ದೇವೆ. ಭಾರತದಲ್ಲಿ ಮೂರನೇ ಎರಡು ಭಾಗದಷ್ಟು ಜನ ಬಡತನದಲ್ಲಿದ್ದಾರೆ.

ಕ್ರಿ.ಶ. ೪೦೦ ರ ಸುಮಾರಿಗೆ ಗುಪ್ತ ದೊರೆಗಳು ಗೋಹತ್ಯೆಯು ಅಪರಾಧವೆಂದರು. ಆಗಿನಿಂದಲೇ ಅಸ್ಪೃಶ್ಯತೆಯು ಹುಟ್ಟಿರಬೇಕೆಂದು ಡಾ|| ಡಿ. ಆರ್. ಭಂಡಾರ್ಕರ್ ಅವರು ಅಭಿಪ್ರಾಯ ಪಟ್ಟಿದ್ದಾರೆ. ಸಾಮಾಜಿಕವಾಗಿ : ದಲಿತರು ಸವರ್ಣೀಯರನ್ನು ಸದಾ ರಕ್ಷಿಸುತ್ತಿರಬೇಕು. ಈ ನಿಯಮ ಮೀರಿದರೆ ಕತ್ತರಿಸಿ ಹಾಕಲಾಗುತ್ತಿತು (ಗುಡಸಿಗೆ ಮಾತ್ರ) ಹೊಸಬಟ್ಟೆ, ಬಿಳಿಬಟ್ಟೆ ಹಾಕುವಂತಿರಲಿಲ್ಲ. ಅಸ್ಪೃಶ್ಯರು ಸ್ವಾವಲಂಬಿಗಳಾಗುವಂತಿರಲಿಲ್ಲ.

ಆರ್ಥಿಕವಾಗಿ ಹೊಲಗದ್ದೆ, ತೋಟ, ತುಡಿಕೆ, ಮಡಿಕೆಗಳನ್ನು ಸ್ವಂತಕ್ಕೆ ಪಡೆಯುವ ಹಕ್ಕಿಲ್ಲದ ಅತಂತ್ರಜನರಾಗಿ

ತ್ತರು. ಜಮೀನು, ಒಡೆತನ, ಓದು-ಬರಹ ಮತ್ತು ಉದ್ಯೋಗದ ಹಕ್ಕು ಈ ವರ್ಗದವರಿಗೆ ಇರುತ್ತಿರಲಿಲ್ಲ, ಧಾರ್ಮಿಕವಾಗಿ, ಯಾವುದೇ ಸ್ಥಾನಮಾನವಿರಲಿಲ್ಲ ದೇವರು, ಧರ್ಮ, ಹಬ್ಬ, ಉತ್ಸವ, ತಮಟೆ, ಜಾಗಟೆ, ಕೊಂಬು, ಕಹಳೆ ಊದಿಕೊಂಡು ಸವರ್ಣೀಯರನ್ನು ಸಂತೋಷಪಡಿಸುವುದು ಇವರ ಆದ್ಯಕರ್ತವ್ಯವಾಗಿತ್ತು. ಶೈಕ್ಷಣಿಕವಾಗಿ ಶೂದ್ರರು ವಿದ್ಯಾಭ್ಯಾಸ ಮಾಡುವಂತಿರಲಿಲ್ಲ. ಓದಿದರೆ ಅವರ ಎರಡು ಕಣ್ಣುಗಳನ್ನು ಕಾದ ಸಲಾಕೆಯಿಂದ ಸುಡಲಾಗುತ್ತಿತ್ತು. ದೇಶದ ಶೇ. ೩೩ ಜನಸಂಖ್ಯೆ ಇರುವ ಅಸ್ಪೃಶ್ಯರ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಮತ್ತು ರಾಜಕೀಯ ಸ್ಥಾನ–ಮಾನಗಳನ್ನು ಅವಲೋಕಿಸಿದಾಗ ಅಸ್ಪೃಶ್ಯತೆಯ ಆಚರಣೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ.

ಚಪ್ಪಲಿಯಿಂದ ಮಲತಿನ್ನಿಸುವುದು ಶಿವಮೊಗ್ಗ ಜಿಲ್ಲೆಯ ತತ್ತೂರಿನಲ್ಲಿ ನಡೆದರೆ ಅದೇ ಜಿಲ್ಲೆಯ ಚಂದ್ರಗುತ್ತಿಯಲ್ಲಿ ದಲಿತ ಮಹಿಳೆಯರಿಗೆ ದೇವರ ಹೆಸರಿನಿಂದ ಬೆತ್ತಲೆ ಸೇವೆ ಮಾಡಿಸುತ್ತಾರೆ.

ಮನುಕುಲಕ್ಕೆ ಶಾಪವಾದ ಜಾತಿ ಪದ್ಧತಿ ಅಸ್ಪೃಶ್ಯತೆಗೆ ಮೂಲ ಕಾರಣವಾಗಿದೆ. ಡಾ|| ಅಂಬೇಡ್ಕರ್ ನೀಡಿದ ಸಂವಿಧಾನ ದಲಿತರ ಉಸಿರು. ಈ ಸಂವಿಧಾನವನ್ನು ಕಾಪಾಡಿಕೊಳ್ಳುವ ಛಲ ದಲಿತರಲ್ಲಿ ಕೂಡಲೇ ಮೂಡಬೇಕಾಗಿದೆ. ಇಂದು ವಿದ್ಯಾವಂತರಾಗಿ ಸಂಘಟನೆಯಿಂದ ಹೋರಾಡಬೇಕಾಗುತ್ತದೆ. ಹೋರಾಟವು ನಿರಂತರವಾಗಿರುತ್ತದೆ ಅದಕ್ಕೆ ಸಾವಿಲ್ಲ, ಅಂತ್ಯವಿಲ್ಲ. ಮಹಿಳೆಯು ಕೇವಲ ಮಕ್ಕಳನ್ನು ಹೆರುವ ಯಂತ್ರಕ್ಕೆ ಮಾತ್ರ ಸೀಮಿತವಾಗದೆ, ದೇಶಕ್ಕೂ ಅವಳ ಸೇವೆ, ಕೊಡುಗೆ ಅಗತ್ಯವೆಂಬುದನ್ನು ಅರಿಯಬೇಕು.

ದಲಿತ ಮಹಿಳೆಯರು ತಮ್ಮಲ್ಲಿರುವ ಕೀಳರಿಮೆಯನ್ನು ಕಿತ್ತೊಗೆದು ಸ್ವತಂತ್ರ ನಾಡಿನ ಪ್ರಜಾಪ್ರಭುತ್ವದ ಪ್ರಜೆಗಳಾಗಬೇಕು. ಅದು ಕೇವಲ ಶಿಕ್ಷಣದಿಂದ ಮಾತ್ರ ಸಾಧ್ಯ. ಸಾಕ್ಷರತೆಯಿಂದ ಮಾತ್ರ ನೂತನ ಸಮಾಜಕಟ್ಟಲು ಸಾಧ್ಯ. ಅನಕ್ಷರತೆಯೇ ಎಲ್ಲ ಸಮಸ್ಯೆಗೆ ಕೇಂದ್ರ ಬಿಂದು. ಶಿಕ್ಷಣ ಪಡೆಯಲು ವಯಸ್ಸು ಅಡ್ಡಿ ಬಾರದು. ನೀವೂ ಕಲಿಯಿರಿ, ನಿಮ್ಮ ಕಂದಮ್ಮಗಳಿಗೂ ಅಕ್ಷರಜ್ಞಾನ ನೀಡಿ. ಭಾರತದ ಭವಿಷ್ಯ ಬರೆಯಲು ಲೇಖನಿ ಹಿಡಿಯಿರಿ.

ಮಣದಷ್ಟು ಒಣ ಉಪದೇಶಕ್ಕಿಂತ ಒಂದು ಗುಲಗಂಜಿ ತೂಕ ಸತ್ಕೃತಿಯೇ ಮಿಗಿಲಾದದ್ದು.

—ಗಾಂಧಿ

ನಟ್ಟಿರುಳಿನಲ್ಲಿ ನಗರವೊಂದರ ದೃಶ್ಯ

ವಿ. ಶ್ರೀನಿವಾಸ
ಸಂ. ೮/೪೩೫, ಜಕ್ಕಸಂದ್ರ ಬಡಾವಣೆ
೧ನೇ ಬ್ಲಾಕ್ ೧ನೇ ಮುಖ್ಯ ರಸ್ತೆ
ಕೋರಮಂಗಲ, ಬೆಂಗಳೂರು-೩೪

ಇಲ್ಲಿ ವರ್ಣಿತವಾಗಿರುವ ನಿಶಾನಗರಿಯ ಚಿತ್ರ ವರ್ತಮಾನನಗರ ಪಟ್ಟಣಗಳಿಗೆ ಮಾತ್ರವಲ್ಲ. ವ್ಯಕ್ತಿಯ ಮನಃಸ್ಥಿತಿಗೆ ಕೂಡ ಹಿಡಿದ ಕನ್ನಡಿ—"ಉಳಿಯುವುದಿಲ್ಲ ಭೋಗ, ಅಳಿಯುವುದಿಲ್ಲ ತ್ಯಾಗ" ಎಂಬ ಕವಿವಾಣಿ ಹೇಳುವುದೂ ಇದನ್ನೇ.

"ಇದೀಗ ಎರಡು ಗಂಟೆಯಾಯಿತು! ಇನ್ನೇನು ಆರಿಹೋಗಲಿರುವ ಸೊಡರು ಈಗೊಮ್ಮೆ ಆಗೊಮ್ಮೆ ಮಂದಕಿರಣವೊಂದನ್ನೆಸೆಯುತ್ತ ಮಂಕಾಗುತ್ತಿದೆ. ಕಾವಲುಗಾರ ತನ್ನ ಕರ್ತವ್ಯ ಮರೆತು ನಿದ್ರಾಪರವಶನಾಗಿದ್ದಾನೆ. ಸುಖಜೀವಿಗಳು, ಕಷ್ಟಜೀವಿಗಳು ಎಲ್ಲರೂ ನಿದ್ದೆಯ ಮಡಿಲಲ್ಲೊರಗಿ ವಿರಮಿಸುತ್ತಿದ್ದಾರೆ. ಧ್ಯಾನಾಸಕ್ತರು, ಘಾತುಕರು, ಬಾಳಿನಲ್ಲಿ ಹತಾಶರಾಗಿ ನೆಚ್ಚುಗೆಟ್ಟ ನತದೃಷ್ಟರು—ಇವರನ್ನು ಬಿಟ್ಟರೆ, ಮತ್ತಾರಿಗೂ ಈ ವೇಳೆಯಲ್ಲಿ ಎಚ್ಚರವಿಲ್ಲ. ಅಗೋ, ಆ ಉನ್ಮತ್ತ ಕುಡುಕನು ಮತ್ತೊಮ್ಮೆ ತನ್ನ ವಿನಾಶದ ಬಟ್ಟಲಿಗೆ ಮದಿರೆಯನ್ನು ತುಂಬುತ್ತಿದ್ದಾನೆ. ಚೋರ ತನ್ನ ನಡುರಾತ್ರಿಯ ಸಂಚಾರ ಪ್ರಾರಂಭಿಸಿದ್ದಾನೆ. ಬದುಕಿನಲ್ಲಿ ನಿರಾಶೆಗೊಂಡ ಹತಭಾಗ್ಯ ವ್ಯಕ್ತಿ ತನ್ನ ಪವಿತ್ರ ಜೀವನವನ್ನೇ ಕೊನೆಗಾಣಿಸಲೆಂದು ಆತ್ಮಹತ್ಯೆಯ ಪಾಪಕಾರ್ಯಕ್ಕೆ ಕೈಯಿಟ್ಟಿದ್ದಾನೆ.

ಇನ್ನು ನಾನು ಗತಕಾಲದ ಇತಿಹಾಸವನ್ನೋದುತ್ತಲೋ ಇಲ್ಲವೆ ಇಂದಿನ ಪ್ರತಿಭಾನ್ವಿತ ವ್ಯಕ್ತಿಗಳ ವಿಚಿತ್ರ ಸಂಭಾಷಣೆಗಳನ್ನು ನೆನೆಯುತ್ತಲೋ ರಾತ್ರಿಯನ್ನು ಕಳೆಯುವುದು ನನಗೆ ಇಷ್ಟವಿಲ್ಲ. ಬದಲಾಗಿ, ಕೆಲವೇ ಗಂಟೆಗಳ ಹಿಂದೆ ಡಂಭದರ್ಪಗಳ ಚಂಚಲ ಪ್ರಭಾವದಿಂದ ಕುಣಿದು ಮೆರೆದು ಈಗ—ತನ್ನ ಗುಣಿತದಿಂದ ತಾನೇ ದಣಿದು ಸೋತು ನಿದ್ರಿಸುವ ಶಿಶುವಿನಂತೆ—ಎಲ್ಲವನ್ನೂ ಮರೆತು ನಿದ್ರಿಸುತ್ತಿರುವ ಈ ನಗರದಲ್ಲಿ ನಾನು ಒಂಟಿಯಾಗಿ ಸಂಚರಿಸುತ್ತೇನೆ.

ಆಹಾ! ಏನು ಕತ್ತಲೆ ಸುತ್ತಲೂ! ಆರಿಹೋಗಲಿರುವ ದೀಪ ಕ್ಷೀಣ, ಕಾಂತಿಹೀನ ಕಿರಣವೊಂದನ್ನೆಸೆಯುತ್ತಿದೆ. ಗಂಟೆಯ ಶಬ್ದವನ್ನೂ, ದೂರದಲ್ಲಿ ಎಲ್ಲಿಯೋ ಬೊಗಳುತ್ತಿರುವ ನಾಯಿಯ ಸದ್ದನ್ನೂ

ಆಧಾರ: ವಿಖ್ಯಾತ ಆಂಗ್ಲ ಸಾಹಿತಿ ಆಲಿವರ್ ಗೋಲ್ಡ್‌ಸ್ಮಿತ್ (೧೭೩೦-೧೭೭೪)ನ "ಎ ಸಿಟಿ ನೈಟ್-ಪೀಸ್" ಎಂಬ ಸುಂದರ, ಹೃದಯ ಸ್ಪರ್ಶಿ ಪ್ರಬಂಧದ ಭಾವಾನುವಾದ.

ಬಿಟ್ಟರೆ, ಮತ್ತೊಂದು ಸದ್ದು ಕೇಳಿಸುತ್ತಿಲ್ಲ. ಮಾನವರ ದರ್ಪದ ಗದ್ದಲವೆಲ್ಲವೂ ಅಡಗಿ ಹೋಗಿದೆ. ಇಂಥ ಸಂದರ್ಭದಲ್ಲಿಯೇ ಮನುಷ್ಯರ ದರ್ಪದ ಅರ್ಥಹೀನತೆ, ಶೂನ್ಯತೆ ಮನದಟ್ಟಾಗುವುದು. ಕ್ಷಣಿಕವಾದ ಈ ಮೌನವೇ ನಿರಂತರವೂ ಶಾಶ್ವತವೂ ಆಗಿ, ಈ ಮಹಾನಗರವೇ ತನ್ನ ಪ್ರಜೆಗಳಂತೆ ಅಳಿದು, ಉರುಳಿ, ಸುಡುಗಾಡಿನ ಮರುಭೂಮಿಯಾಗುವ ಒಂದು ಕಾಲವೂ ಬರುವುದು.

ಆಹಾ! ಇಂಥ ಎಷ್ಟೋ ಮಹಾನಗರಗಳು ಇಷ್ಟೇ ಮಹತ್ತರವಾದ ವಿಜಯವನ್ನು ಗಳಿಸಿ, ಇಷ್ಟೇ ನ್ಯಾಯಪರವೂ, ಅವಿತವೂ ಆದ ಆನಂದದಿಂದ ನಲಿದು, ದೂರದೃಷ್ಟಿಯಿಲ್ಲದೆ, ಅವಿವೇಕದಿಂದ ತಾವೇ ಶಾಶ್ವತವೆಂದು ಭ್ರಮಿಸಿದ್ದುವು! ಅವುಗಳ ಪೈಕಿ ಕೆಲವು ನಗರಗಳ ಗುರುತುಗಳೂ ಈಗ ಉಳಿದಿಲ್ಲ. ಇನ್ನುಳಿದ ನಗರಗಳ ಭೀಕರ ಅವಶೇಷಗಳನ್ನು ಕಂಡು ಪ್ರವಾಸಿ ನಿಟ್ಟುಸಿರಿಡುತ್ತಾನೆ. ಅವನ್ನು ಅವಲೋಕಿಸಿ ಆತ ಇಹಲೋಕದ ಸಮಸ್ತ ಸಿರಿ-ಸಂಪತ್ತುಗಳ ನಶ್ವರತೆಯನ್ನು ಕಂಡು ಮತಿವಂತನಾಗುತ್ತಾನೆ.

"ಆಹಾ! ಇಲ್ಲಿ ಅವರ ಅರಮನೆ ಇದ್ದಿತು. ಇಂದು ಅಲ್ಲಿ ಮುಳ್ಳುಗಿಡಗಳು ಬೆಳೆದು ನಿಂತಿವೆ. ಅಗೋ, ಅಲ್ಲಿ ಅವರ ವಿಧಾನಸಭೆ ಇದ್ದಿತು. ಇಂದು ಅದು ಹಾವು-ಚೇಳು ವಿಷಜಂತುಗಳ ಬೀಡಾಗಿದೆ. ಅವರ ಗುಡಿ-ಗೋಪುರಗಳು, ನಾಟಕಮಂದಿರಗಳು ಗುರುತು ಸಿಗಲಾರದಷ್ಟು ಹಾಳಾಗಿ, ಪಾಳಿನ ರಾಶಿಯಾಗಿ ಬಿದ್ದಿವೆ.

"ಅವರ ಭೋಗಲಾಲಸೆ, ಧನಪಿಪಾಸೆ ಅವರನ್ನು ತಗ್ಗಿಸಿ, ಕುಗ್ಗಿಸಿ, ಪತನಕೂಪಕ್ಕೆ ತಳ್ಳಿದುವು. ರಾಜ್ಯದ ಬಹುಮಾನ ಪುರಸ್ಕಾರಗಳು ಆಮೋದ-ವಿನೋದಗಳಿಗೆ ದೊರೆತುವೇ ಹೊರತು, ಸಮಾಜದ ಉಪಯುಕ್ತ ಪ್ರಜೆಗಳಿಗೆ ದೊರಕಲಿಲ್ಲ. ಅವರ ಸಿರಿ-ಸಂಪತ್ತುಗಳೂ ಸುಖಮಯ ಜೀವನವೂ ಪರಕೀಯರ ಕಣ್ಣು ಕುಕ್ಕಿದುವು."

"ಮೊದಲಬಾರಿ ಸೋತು ಹಿಮ್ಮೆಟ್ಟಿದರೂ ಧೃತಿಗೆಡದೆ ಮುನ್ನುಗ್ಗಿದ ಪರಕೀಯರು ಚಿತ್ತಸ್ಥೈರ್ಯದಿಂದ ಹೋರಾಡಿ ಗೆದ್ದು ಶತ್ರುಗಳನ್ನು ಸದೆಬಡಿದು ಹೇಳ ಹೆಸರಿಲ್ಲದಂತೆ ನಾಶಮಾಡಿಬಿಟ್ಟರು."

ಕೆಲವೇ ಗಂಟೆಗಳ ಹಿಂದೆ ಜನಭರಿತವಾಗಿದ್ದ ಆ ಬೀದಿಗಳಲ್ಲಿ ಈಗ ಅಲ್ಲೊಬ್ಬ, ಇಲ್ಲೊಬ್ಬ ಕಾಣಿಸುತ್ತಿದ್ದಾನೆ. ಈಗ ಓಡಾಡುತ್ತಿರುವವರು ತಮ್ಮ ದಿನನಿತ್ಯದ ಮುಸುಕನ್ನು ತೆಗೆದೊಗೆದಿದ್ದಾರೆ. ಈ ನಿಶಾಚರಿಗಳು ತಮ್ಮ ತುಚ್ಛತೆಯನ್ನು, ಸಂಕಷ್ಟವನ್ನು ಮರೆಮಾಚಿಕೊಳ್ಳದೆ ಸಂಚರಿಸುತ್ತಿದ್ದಾರೆ.

ಆದರೆ, ಬೀದಿಯಲ್ಲಿ ಬಿದ್ದಿರುವ ಈ ಬಡಪಾಯಿಗಳು ಯಾರು? ಶ್ರೀಮಂತರ ಮನೆಬಾಗಿಲುಗಳ ಬಳಿ ಬಿದ್ದು ಒಂದು ಕ್ಷಣ ತಮ್ಮ ಕಡುಕಷ್ಟವನ್ನು ಮರೆತು ವಿರಮಿಸುತ್ತಿರುವ ಈ ದೀನ ಜೀವಿಗಳು ಯಾರು?

ಅವರೋ ಅಪರಿಚಿತರು, ತಿರುಕರು, ಅನಾಥರು. ಅವರ ಸ್ಥಿತಿ-ಗತಿಗಳು ಅಪ ಹಾರ್ಯವೆನಿಸುವಷ್ಟು ದೀನ, ಹೀನ. ಅವ ಕಷ್ಟಗಳು ಮರುಕಕ್ಕೂ ಎಟುಕದವು. ಅವ

ಕಷ್ಟವನ್ನು, ದಾರಿದ್ರ್ಯವನ್ನು ನೋಡಿದರೆ, ಮರುಕಕ್ಕಿಂತ ಹೆಚ್ಚಾಗಿ ನಡುಕವುಂಟಾಗುತ್ತದೆ.

ಕೆಲವರಿಗೆ ಮೈಮುಚ್ಚಲು ಚಿಂದಿಬಟ್ಟೆಗಳು ಕೂಡ ಇಲ್ಲ. ಇನ್ನಿತರರು ರೋಗ-ರುಜಿನಗಳಿಂದ ನಶಿಸಿಹೋಗಿದ್ದಾರೆ. ಜಗತ್ತು ಅವರನ್ನು ಕೈಬಿಟ್ಟಿದೆ. ಸಮಾಜ ಅವರ ಕಷ್ಟ-ಕಾರ್ಪಣ್ಯಗಳನ್ನು ಪರಿಗಣಿಸದೆ, ಅವರನ್ನು ಹಸಿವು-ನಗ್ನತೆಗಳಿಗೆ ಗುರಿಮಾಡಿದೆ. ಇಗೋ! ಗಡಗಡನೆ ನಡುಗುತ್ತಿರುವ ಈ ಬಡ ಹೆಣ್ಣು ಜೀವಗಳು ಒಂದಾನೊಂದು ಕಾಲದಲ್ಲಿ ಸುಖವಾಗಿ ಬಾಳಿದವರೇ, ಸುಂದರಿಯರೆಂದು ಗುರುತಿಸಲ್ಪಟ್ಟವರೇ.

ವಿಷಯಲಂಪಟ, ಭೋಗಪ್ರಿಯ ಧೂರ್ತರಿಂದ ಶೀಲಹರಣಕ್ಕೊಳಗಾದ ಈ ಬಡಪಾಯಿಗಳು ಮಾಗಿಯ ಕೊರೆಯುವ ಚಳಿಯಲ್ಲಿ ಹೊರಗೆ ಬಿದ್ದಿದ್ದಾರೆ. ಬಹುಶಃ, ಅವರು ತಮ್ಮನ್ನು ವಂಚಿಸಿದ ಕಲ್ಲೆದೆಯ ಕಟುಕರ ಮನೆಗಳ ಬಳಿಬಿದ್ದು ಅವರನ್ನು ಬೇಡುತ್ತಿದ್ದಾರೆ, ಅನುನಯಿಸುತ್ತಿದ್ದಾರೆ. ಆ ಪಾಪಿಗಳು ಇವರನ್ನು ಶಪಿಸುವರೇ ಹೊರತು ಇವರಿಗೆ ಸಹಾಯಮಾಡುವವರಲ್ಲ.

ಅಯ್ಯೋ, ಏಕೆ, ನಾನೇಕೆ ಮಾನವನಾಗಿ ಹುಟ್ಟಿದೆ? ಮಾನವನಾಗಿ ಹುಟ್ಟಿ ಈ ಬಡಪಾಯಿಗಳ ಕಷ್ಟವನ್ನು ಕಣ್ಣಾರೆ ನೋಡುತ್ತಿದ್ದರೂ ಅವರಿಗೆ ಸಹಾಯ ಮಾಡಲಾರೆನಲ್ಲ! ಮನೆ-ಮಠಗಳಿಲ್ಲದ, ದೀನ, ಅನಾಥ ಪ್ರಾಣಿಗಳು! ಸಮಾಜವು ನಿಮ್ಮ ಮೇಲೆ ನಿಂದೆಯನ್ನು ಹೊರಿಸುವುದಲ್ಲದೆ ನಿಮಗೆ ನೆರವು ನೀಡದು. ದೊಡ್ಡವರೆನಿಸಿಕೊಂಡವರಿಗೆ ಕಿಂಚಿತ್ ಕಷ್ಟವೆಂದರೂ ಸಾಕು, ಶ್ರೀಮಂತರಿಗೆ ಒಂದಿಷ್ಟು ಅಸೌಖ್ಯವುಂಟಾಯಿತೆಂದು ಊಹಾ-ಪೋಹಗಳಿದ್ದರೂ ಸಾಕು, ಜನರು ತಮ್ಮ ವಾಕ್‌ಶಕ್ತಿಯನ್ನೆಲ್ಲ ವ್ಯಯಮಾಡಿ, ಉತ್ಪ್ರೇಕ್ಷೆಗೊಳಿಸಿ, ನಮ್ಮ ಗಮನವನ್ನು ಸೆಳೆದು, ನಮ್ಮಲ್ಲಿ ಅವರ ಬಗ್ಗೆ ಸಹಾನುಭೂತಿ ಹುಟ್ಟುವಂತೆ ಮಾಡಿಬಿಡುತ್ತಾರೆ. ಬಡವರಾದರೋ ಕೇಳುವವರೇ ದಿಕ್ಕಿಲ್ಲದೆ ಗೋಳಿಡುತ್ತಾರೆ. ಮದೋನ್ಮತ್ತ ಅಧಿಕಾರಶಾಹಿಯ ತೀರ ಕೆಳಮಟ್ಟದ ನೌಕರನೂ ಅವರಿಗೆ ಕಿರುಕುಳ, ಹಿಂಸೆ ಕೊಡುತ್ತಾನೆ. ಇತರರನ್ನು ರಕ್ಷಿಸುವ ಕಾಯಿದೆ-ಕಾನೂನುಗಳು ಬಡವರ ಪಾಲಿಗೆ ಶತ್ರುಗಳಾಗುತ್ತವೆ.

ಅಯ್ಯೋ! ಇದೆಂಥ ಸೂಕ್ಷ್ಮಸಂವೇದನೆ! ನನ್ನ ಮನೋಧರ್ಮಕ್ಕೆ, ನನ್ನ ಮನಸ್ಸಿನ ಸಂವೇದನೆಗೆ ತಕ್ಕಂತೆ ನನಗೆ ಅದೃಷ್ಟದ ಔದಾರ್ಯವಾದರೂ ಏಕೆ ಲಭಿಸಲಿಲ್ಲ? ಪರರಕಷ್ಟವನ್ನು ನಿವಾರಿಸುವ ಸಾಮರ್ಥ್ಯವಿಲ್ಲದ ದಯಾರ್ದ್ರತೆಯಿಂದ ದಯೆತೋರಿಸುವ ಮೃದುಹೃದಯಿಯೇ ಸಹಾಯ ಕೋರುವ ದೀನನಿಗಿಂತಲೂ ಹೆಚ್ಚು ದುಃಖಿಯಾಗುತ್ತಾನೆ.

ಗ್ರಾಮ ಜೀವನ ಸ್ವಾತಂತ್ರ್ಯಪೂರ್ವ - ಸ್ವಾತಂತ್ರ್ಯಾ ನಂತರದ ಬದುಕು

ಎಸ್. ರೋಹಿಣಿಶರ್ಮ

ತ್ಯಾಗರಾಜ ಎಕ್ಸ್‌ಟೆನ್‌ಷನ್, ಅಜ್ಜಂಪುರ
ತರೀಕೆರೆ, ಚಿಕ್ಕಮಗಳೂರು ೫೭೭ ೫೪೭

"ಇದೇನು ಭಾರತ ದೇಶವಲ್ಲ. ನೀವು ಕಾಣುತ್ತಿರುವುದು ದಿಲ್ಲಿ ಪಟ್ಟಣ. ಭಾರತವನ್ನು ನೋಡುವುದಾದರೆ ಹಳ್ಳಿಗಳನ್ನು ಸಂದರ್ಶಿಸಿ, ಅದೇ ನಿಜವಾದ ಭಾರತವು. ಅದರಲ್ಲಿಯೇ ನಿಮಗೆ ಭಾರತದ ಆತ್ಮ ಕಾಣುವುದು." ಈ ವಾಕ್ಯವನ್ನು ೧೯೪೭ರ ಆಗಸ್ಟ್‌ನಲ್ಲಿ ನಡೆದ ಏಷ್ಯಾದ ರಾಷ್ಟ್ರಗಳ ಪ್ರತಿನಿಧಿಗಳ ಪರಿಷತ್ತಿನಲ್ಲಿ ಮಹಾತ್ಮ ಗಾಂಧಿಯವರು ಹೇಳಿದ ಮಾತುಗಳು!

ನಿಜ! ಅವರು ನುಡಿದಂತೆ ಭಾರತ ಗ್ರಾಮಗಳ ದೇಶ. ಶೇ|| ೮೦ರಷ್ಟು ಜನರು ಈ ಭಾರತದಲ್ಲಿ ಕೃಷಿಯನ್ನೇ ಅವಲಂಬಿಸಿ ಜೀವಿಸುತ್ತಿದ್ದಾರೆ. ಮಳೆ ಬಂದರೆ ಬೆಳೆ ಕಾಣುವ ರೈತರಿಗೆ ಬೆಳಗಿನಿಂದ ಬೈಗಿನವರೆಗೂ ದುಡಿಯುವುದೊಂದೇ ಕಾಯಕ. ಅತ ಕೈಕಟ್ಟಿ ಕುಳಿತನೆಂದರೆ ದೇಶದ ಜನತೆ ಹೊಟ್ಟೆಗೆ ತಣ್ಣೀರು ಬಟ್ಟೆ.

ಗ್ರಾಮದ ಕಲ್ಪನೆ ನಿನ್ನೆ ಮೊನ್ನೆಯದಲ್ಲ. ಕ್ರಿ.ಪೂ. ೬೫೦೦ರ ಸುಮಾರಿಗೆ ಇರಾಕಿನಲ್ಲಿ ಸ್ಥಾಪಿತವಾದ ಮನೆಗಳು ಸಧ್ಯಕ್ಕೆ ನಮಗೆದೊರೆತಿರುವ ಪ್ರಾಚೀನಗ್ರಾಮಗಳು. ಭಾರತದಲ್ಲಿಯೂ ಕೂಡ ಆ ಸಮಯಕ್ಕೆ ಹಳ್ಳಿಗಳ ಉದಯವಾಗಿರಬೇಕು. ಗ್ರಾಮದ ಉದಯ ಸಾಮಾಜಿಕ ವಿಕಾಸದ ಒಂದು ಹಂತ. ಆಗಿನ ಕಾಲದಲ್ಲಿ ಗ್ರಾಮವನ್ನು ಆಡಳಿತದ ಮುಖ್ಯಘಟ್ಟವೆಂದು ಪರಿಗಣಿಸುತ್ತಿದ್ದರು. ಮನುಧರ್ಮ ಶಾಸ್ತ್ರದಲ್ಲಿ ಗ್ರಾಮಗಳ ಬಗ್ಗೆ ದಾಖಲಾತಿ ಸಿಕ್ಕಿದರೆ ವೇದದಲ್ಲಿ ಸೂಚಿತವಾದ ಜನವಸತಿಗಳು ಅಥವಾ ಕೌಟಿಲ್ಯನು ಹೇಳಿದ ಗ್ರಾಮಗಳು ಹಾಗೂ ಶುಕ್ರನೀತಿ ಸಾರದಲ್ಲಿ ಬರುವ ಗ್ರಾಮ-ಪಲ್ಲಿ. ಕುಂಭಗಳು ಗ್ರಾಮಜೀವನದ ಮೇಲೆ ಬೆಳಕು ಚೆಲ್ಲುತ್ತವೆ. ಹಳ್ಳಿ, ಪಳ್ಳಿ, ಊರು, ಗುಡಾ, ಗಾಂವ್, ಕಸಬಾ, ಖೇಡಾ ಎಂದು ಪರಿಚಿತವಾಗಿರುವ ಸಮುದಾಯವನ್ನು ಹಳ್ಳಿಗಳೆಂದು ಗುರುತಿಸಲಾಗುತ್ತಿತ್ತು, ಪಳ್ಳಿಯು ಗ್ರಾಮದ ಅರ್ಧದಷ್ಟೆಂದು, ಕುಂಭ ಪಳ್ಳಿಯ ಅರ್ಧದಷ್ಟೆಂದೂ ತಿಳಿದುಬರುತ್ತದೆ.

ಮನು ತನ್ನ ಧರ್ಮಶಾಸ್ತ್ರದಲ್ಲಿ ಗ್ರಾಮ, ನಗರ, ಪುರಗಳೆಂಬುದಾಗಿ ಜನ ವಸತಿಗಳನ್ನು ಮೂರು ವರ್ಗಗಳಾಗಿ ವಿಂಗಡಿಸಿ ಗ್ರಾಮವನ್ನೇ ಮುಖ್ಯ ಘಟಕವಾಗಿ ಪರಿಗಣಿಸಿದ್ದಾನೆ. ಗ್ರಾಮದ ಉದಯಕ್ಕಿಂತ

ಮೊದಲು ಮಾನವನದು ಅಲೆಮಾರಿ ಬದುಕು. ಅಲೆಮಾರಿ ಬದುಕನ್ನು ನಿಲ್ಲಿಸಿ ಕೃಷಿ ಅವಲಂಬನೆಯ ನಂತರ ಗ್ರಾಮ ಜೀವನದ ಕಲ್ಪನೆ ಮಾನವನಲ್ಲಿ ಮನೆ ಮಾಡಿತು. ಇದರಿಂದ ಸಂಸ್ಕೃತಿಯ ವೃದ್ಧಿಯೂ, ಪೋಷಣೆಯೂ ಆಯಿತು.

ಅಂದಿನ ಗ್ರಾಮ ಜೀವನ:

ಅಂದು ಗ್ರಾಮದ ಹಿರಿಯನಾದ "ಗ್ರಾಮಿಣಿ" ಎಂಬುವವನಿಂದ ಗ್ರಾಮದ ಆಡಳಿತವೆಲ್ಲಾ ನಡೆಯುತ್ತಿತ್ತು. ಎಲ್ಲಿ ನೋಡಿದರೂ ಸ್ವಯಂ ಪರಿಪೂರ್ಣತೆ ಇತ್ತು. ಬಡವ-ಬಲ್ಲಿದ, ಮೇಲು-ಕೀಳೆಂಬ ತಾರತಮ್ಯವೇ ಇರಲಿಲ್ಲ. ಪ್ರತಿಯೊಬ್ಬರಿಗೂ ಸಮಾನ ಹಕ್ಕುಗಳ ಜೊತೆ ಅಧಿಕಾರವೂ ಇತ್ತು. ಗ್ರಾಮಸ್ಥರೆಲ್ಲರೂ ಸೇರಿ ತಮ್ಮ ತಮ್ಮ ಊರಿನ ಹಿರಿಯ ಜ್ಞಾನಿ-ಅನುಭವಸ್ಥನನ್ನು "ಗ್ರಾಮಿಣಿ" ಎಂದು ಆಯ್ಕೆ ಮಾಡಿಕೊಳ್ಳುತ್ತಿದ್ದರು.

ಭಾರತದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಗ್ರಾಮ ಪಂಚಾಯಿತಿಗಳ ಮೂಲಕವೇ ವ್ಯವಸ್ಥಿತ ರೀತಿಯಲ್ಲಿ ಗ್ರಾಮಾಡಳಿತ ನಡೆಯುತ್ತಿತ್ತು. ಪರಕೀಯರ ಆಕ್ರಮಣ, ರಾಜ್ಯ ಕ್ರಾಂತಿಗಳು, ಆಯಾ ರಾಜ್ಯದ ಅರಸರ ಬದಲಾವಣೆ ಏನೇ ಆಗಲಿ ಗ್ರಾಮದ ಆಡಳಿತ ಸ್ವತಂತ್ರವಾಗಿ ನಡೆದು ಬರುತ್ತಿತ್ತು. ಅಂದು ಬಡತನ, ಕೊರತೆಯ ಬಾಳು ಜನರನ್ನು ಆವರಿಸಿದ್ದರೂ ತೃಪ್ತಿಯ ಜೀವನ ನಡೆಸಿ ಧರ್ಮ-ಸಂಸ್ಕೃತಿ ಮುಂತಾದ ಜೀವನ ಮೌಲ್ಯಗಳೊಂದಿಗೆ ಬದುಕಿ ಬಾಳುತ್ತಿದ್ದರು. ಆದರೆ ಹತ್ತೊಂಬತ್ತನೆಯ ಶತಮಾನದ ಅಂತ್ಯದ ಕಾಲದಲ್ಲಿ ಗ್ರಾಮದ ವ್ಯವಸ್ಥೆ ತುಂಬ ಹದಗೆಟ್ಟಿತ್ತು. ಅಂದು ಗ್ರಾಮವನ್ನು ಪುಟ್ಟ ದ್ವೀಪಕ್ಕೆ ಹೋಲಿಸಬಹುದಿತ್ತು. ಸರಿಯಾದ ಸಂಪರ್ಕ ವ್ಯವಸ್ಥೆ ಇಲ್ಲದೆ ಮಳೆಗಾಲದ ಕೆಲವು ತಿಂಗಳಂತೂ ಪರಸ್ಪರ ಒಬ್ಬರಿಗೊಬ್ಬರು ಸರಿಯಾಗಿ ಮುಖವನ್ನೇ ಕಾಣದ ದಿನಗಳೂ ಇರುತ್ತಿದ್ದವು. ಸಾಮಾಜಿಕ ಪರಿಸ್ಥಿತಿ ತುಂಬಾ ಕಠಿಣವಾಗಿದ್ದು ಸಂಪ್ರದಾಯಶೀಲವಾಗಿದ್ದವು. ಮೂಢ ನಂಬಿಕೆ, ಕಂದಾಚಾರ; ಪ್ರಾಣಿಬಲಿ, ಅಸ್ಪೃಶ್ಯತೆ, ಬಾಲ್ಯ ವಿವಾಹ, ದೇವದಾಸಿಯಂಥ ಅನಿಷ್ಟ ಪದ್ಧತಿಗಳು ಎಲ್ಲೆಡೆಯೂ ತಾಂಡವಾಡುತ್ತಿತ್ತು. ಜಾತೀಯ ಭಾವನೆಯೂ ಅಷ್ಟೇ ತೀವ್ರಗತಿಯಲ್ಲಿದ್ದು ಸ್ಪರ್ಶರು, ಅಸ್ಪರ್ಶರೆಂದು ಎರಡು ವಿಧವಾಗಿ ಪರಿಗಣಿಸಲ್ಪಟ್ಟು ವರ್ಣ ವ್ಯವಸ್ಥೆಗೆ ಹೊರಗಿನವರನ್ನು ಪಂಚಮರೆಂದು ಅವರನ್ನು ಎಲ್ಲಾ ವಿಧದಲ್ಲೂ ದೂರ ಇಟ್ಟು ಊರಿನ ಹೊರಗೇ ವಸತಿಗಳ ವ್ಯವಸ್ಥೆ ಮಾಡುತ್ತಿದ್ದರು. ಅದೇ ರೀತಿ ಸ್ತ್ರೀಯರನ್ನೂ ಕೂಡ ಅಷ್ಟೇ ಶೋಷಣೆಯಿಂದ ನಡೆಸಿಕೊಳ್ಳುತ್ತಿದ್ದರು. ವಿಧವೆಯರಿಗೆ ಆಸ್ತಿಯ ಹಕ್ಕನ್ನು ಕೇಳುವ, ಸ್ವತಂತ್ರವಾಗಿ ಬಾಳಲೂ ಬಿಡದ ವ್ಯವಸ್ಥೆ ಆಗ ಇತ್ತು. ಉತ್ತಮ ವೈದ್ಯಕೀಯ ಶುಶ್ರೂಷೆಗಳಿಲ್ಲದೆ ಜನರು ರೋಗರುಜಿನಗಳಿಗೆ ತುತ್ತಾಗಿ ಆಯುಸ್ಸಿನ ಕಾಲು ಭಾಗ ಕಳೆಯುವುದರೊಳಗೆ ಇಹಯಾತ್ರೆ ಪೂರೈಸುತ್ತಿದ್ದರು.

ಆಗ ಕೃಷಿಯನ್ನೇ ಮುಖ್ಯ ಕಸುಬಾಗಿಟ್ಟುಕೊಂಡು ತಮಗೆ ಬೇಕಾದ ಆಹಾರ ಪದಾರ್ಥಗಳನ್ನೇ ಹೆಚ್ಚಾಗಿ ಬೆಳೆಯುತ್ತಿದ್ದರು. ಕೆಲವರು ಸ್ವಂತ ಭೂಮಿ

ಹೊಂದಿದ್ದರೆ ಮತ್ತೆ ಕೆಲವರು ಗೇಣಿ ಜಮೀನನ್ನು ಸಾಗುವಳಿ ಮಾಡಿಕೊಂಡು ಬಾಳುತ್ತಿದ್ದರು. ಇನ್ನುಳಿದವರು ಕೃಷಿ ಕಾರ್ಮಿಕರಾಗಿ ಮತ್ತು ಜೀತದಾಳುಗಳಾಗಿ ಜೀವನ ನಿರ್ವಹಿಸುತ್ತಿದ್ದರು. ಗ್ರಾಮದ ಆಡಳಿತ ವಂಶಪಾರಂಪರೆಯಾಗಿ ಬಂದು ಊರಿನ ಮುಖ್ಯಸ್ಥರು ದರ್ಪದಿಂದ ಆಡಳಿತ ನಡೆಸುತ್ತಿದ್ದರು. ಆದರೆ ಒಂದು ಗ್ರಾಮವೆಂದ ಮೇಲೆ ಕುಂಬಾರ, ಕಮ್ಮಾರ, ಬಡಗಿ, ಮಡಿವಾಳ ಮುಂತಾದ ಆಯಗಾರರೂ ಇರುತ್ತಿದ್ದು ಪರಸ್ಪರ ಸಹಕಾರದಿಂದ ಕೊಡುಕೊಳ್ಳುವ ಕೆಲಸವೂ ನಡೆಯುತ್ತಿತ್ತು.

ಬ್ರಿಟೀಷರ ಆಳ್ವಿಕೆಯಲ್ಲಿ ಜನಜೀವನ:

ಇಂಥ ಬಡತನದ ಜೀವನ ನಡೆಸುತ್ತಿದ್ದ ಗ್ರಾಮದ ಜನರ ಸ್ಥಿತಿಗತಿಗಳನ್ನು ಅರಿತ ಬ್ರಿಟೀಷರಿಗೆ ತೂಕಡಿಸುತ್ತಿರುವವನಿಗೆ ಹಾಸಿಗೆ ಹಾಸಿಕೊಟ್ಟಂತಾಗಿ ಅವರನ್ನು ಶೋಷಿಸಲು ಮೊದಲು ಮಾಡಿದರು. ಗ್ರಾಮ ಹಾಗು ಪಟ್ಟಣದ ಅಧಿಕಾರಗಳೆಲ್ಲವೂ ಅವರ ಅಧೀನವಾದವು. ಭೂಕಂದಾಯ ವಸೂಲಾತಿ ಮುಂತಾದುವುಗಳನ್ನು ಮಾತ್ರ ಗ್ರಾಮದವರೇ ಮಾಡಬೇಕಾಯಿತು. ಗ್ರಾಮದ ಮುಖ್ಯಸ್ಥನಿಗೆ ಮೊದಲಿದ್ದ ಬೆಲೆ ಬ್ರಿಟೀಷರ ಆಳ್ವಿಕೆಯಿಂದಾಗಿ ಕವಡೆಯಷ್ಟೂ ಬೆಲೆಯಿಲ್ಲದೆ ಎಲ್ಲವೂ ಅವರು ಹೇಳಿದಂತೆ ಕೇಳಬೇಕಾಯಿತು. ನ್ಯಾಯ ನೀತಿಗೆ ಸ್ವಲ್ಪವೂ ಬೆಲೆ ಇಲ್ಲದೆ ಗ್ರಾಮ ಸಂಸ್ಥೆಗಳು ಕ್ರಮೇಣ ತಮ್ಮ ಅಸ್ತಿತ್ವವನ್ನು ಕಳೆದುಕೊಂಡವು. ಅವರ ಆಳ್ವಿಕೆಯ ನೀತಿ, ವ್ಯಾಪಾರ ತಂತ್ರಗಳು ಗ್ರಾಮೀಣ ಜನತೆಯ ಮೇಲೆ ತೀವ್ರ ಪರಿಣಾಮ ಬೀರಿ ಬಡತನದ ರೇಖೆ ಇನ್ನೂ ಮೇಲೆ ಏರಿತು.

ಬ್ರಿಟೀಷರಿಗೆ ಯಂತ್ರಶಕ್ತಿ-ನೌಕಾಬಲ ಇದ್ದುದರಿಂದ ಉತ್ಪಾದನಾಶಕ್ತಿ ಯಂತ್ರದ ಮೂಲಕವೇ ನಡೆದು ಗ್ರಾಮದ ಕೈಕಸಬುಗಳಿಗೆ ಧಕ್ಕೆಯುಂಟಾಯಿತು. ನಿರುದ್ಯೋಗ ಹೆಚ್ಚಾಯಿತು. ನಮ್ಮ ದೇಶದ ರೈತರು ಕಷ್ಟಪಟ್ಟು ಬೆಳೆದ ಎಣ್ಣೆ ಬೀಜಗಳು, ಹತ್ತಿ, ಸೆಣಬು, ರೇಷ್ಮೆ, ಕಬ್ಬು ಮುಂತಾದ ಪ್ರಮುಖ ವಸ್ತುಗಳನ್ನು ಯಥೇಚ್ಛವಾಗಿ ಉತ್ಪಾದಿಸುವಂತೆ ಪ್ರೋತ್ಸಾಹಿಸಿ, ತಾವು ಕಡಿಮೆ ದರದಲ್ಲಿ ಅದನ್ನು ಕೊಂಡು ತಮ್ಮ ದೇಶಕ್ಕೆ ಹಡಗುಗಳ ಮೂಲಕ ಸಾಗಿಸುತ್ತಿದ್ದರು. ಇಂಥ ಮಾಲುಗಳನ್ನು ತಾವು ಸ್ವದೇಶಕ್ಕೆ ಕೊಂಡೊಯ್ಯುವ ಸಲುವಾಗಿ ವ್ಯಾಪಾರ ತಂತ್ರ ಹೂಡಿ ನಾಣ್ಯದ ಪದ್ಧತಿಗಳನ್ನು ಜಾರಿಗೆ ತಂದರು. ಇದರಿಂದ ರೈತರು ತಾವು ಬೆಳೆದ ಉತ್ಪಾದನಾ ವಸ್ತುಗಳನ್ನು ಕಡಿಮೆ ಬೆಲೆಗೆ ಮಾರಿ ಪರದೇಶದಿಂದ ಬರುವ ಸಿದ್ಧವಸ್ತುಗಳನ್ನು ಹೆಚ್ಚಿನ ಬೆಲೆಗೆ ಕೊಳ್ಳುವ ಸ್ಥಿತಿ ಭಾರತೀಯರಿಗೆ ಬಂದಿತು. ಇದರಿಂದ ಆದಾಯಕ್ಕಿಂತ ವೆಚ್ಚವೇ ಹೆಚ್ಚಾಯಿತು. ಗ್ರಾಮದ ಸಂಪತ್ತು ಬರಿದಾಗಿ ಬೊಕ್ಕಸ ಖಾಲಿಯಾದಂತಾಯಿತು. ತಮ್ಮ ತಮ್ಮಲ್ಲಿ "ಅರಳಿಕಟ್ಟೆ" ಪಂಚಾಯ್ತಿ ಮೂಲಕ ಬಗೆಹರಿಸಿಕೊಳ್ಳುತ್ತಿದ್ದ ವ್ಯಾಜ್ಯಗಳನ್ನು ಬ್ರಿಟೀಷರು ಜಾರಿಗೆ ತಂದ ನ್ಯಾಯಾಲಯಗಳ ಮೂಲಕವೇ ಬಗೆಹರಿಸಿಕೊಳ್ಳಬೇಕಾಯಿತು. ಇದಕ್ಕಾಗಿ ಗ್ರಾಮಸ್ಥರು ಪಟ್ಟಣಕ್ಕೆ ಅಲೆಯತೊಡಗಿದರು. ನಗರದ

ರುಚಿ ಗ್ರಾಮೀಣ ಜನತೆಗೆ ಒಂದಲ್ಲಾ ಒಂದು ವಿಧದಲ್ಲಿ ಅಂಟಿಕೊಂಡಿತು. ನ್ಯಾಯಾಲಯದಲ್ಲಿ ಹಣವಿಲ್ಲದೆ ಬಲ-ಜಯವಿರಲಿಲ್ಲ. ಹಣವನ್ನು ವ್ಯಯಿಸಿ ನ್ಯಾಯ ಪಡೆಯಬೇಕಾಯಿತು. ಇಂಥ ವ್ಯವಸ್ಥೆಗಳು ಗ್ರಾಮೀಣ ಜನರನ್ನು ಋಣ ಬಾಧೆಗೆ ಒಳಪಡಿಸಿತು.

ಸ್ವಾತಂತ್ರ್ಯನಂತರದ ಬದಲಾವಣೆ:

ಬ್ರಿಟೀಷರು ಭಾರತವನ್ನು ಬಿಟ್ಟು ತೊಲಗಿದ ಮೇಲೆ ಗಾಂಧೀಜಿ, ಜವಹರ ಲಾಲ್ ನೆಹರೂ, ವಲ್ಲಭಾಯ್ ಪಟೇಲ್ ಮೊದಲಾದವರು ಮೊದಲು ಮಾಡಿದ್ದು ಹಳ್ಳಿಗಳ ಉದ್ಧಾರ. ರಾಮರಾಜ್ಯದ ಕನಸನ್ನು ಕಂಡ ಗಾಂಧೀಜಿಯವರಿಗೆ ಹಳ್ಳಿಯ ಜನರ ಬದುಕಿನ ಮೇಲೆ ಕಣ್ಣು. ಅಧರ ದಾರುಣವಾದ ಬದುಕನ್ನು ಕಂಡು ಮನನೊಂದು ಕೆಲವೊಂದು ಪ್ರಗತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡು ಅವರ ಉದ್ಧಾರಕ್ಕಾಗಿಯೆ ಶ್ರಮಿಸಿದರು. ಪ್ರಜಾರಾಜ್ಯದ ಮೂಲಕ ಪಂಚವಾರ್ಷಿಕ ಯೋಜನೆಗಳನ್ನು ಕೈಗೊಂಡಿತು. ಹಳ್ಳಿಗಳ ವ್ಯಕ್ತಿತ್ವವನ್ನೇ ಬದಲಿಸಲು ಈ ಯೋಜನೆಗಳು ಕೇಂದ್ರ ಸರಕಾರದ ಹಾಗೂ ರಾಜ್ಯ ಸರಕಾರದ ಮೂಲಕ ಶ್ರಮಿಸುತ್ತಿವೆ. ಈ ಯೋಜನೆಯಿಂದಾಗಿ ಸಂಪರ್ಕಸಾಧನಗಳು ಸುಧಾರಿಸಿ ಗ್ರಾಮೀಣ ಪರಿಸರವೂ ಸುಧಾರಿಸುತ್ತಿದೆ. ಮಲೆನಾಡಿನ ಜನತೆಗೆ ಮಾರಿಯಾಗಿ ಕಾಡುತ್ತಿದ್ದ ಮಲೇರಿಯಾ ಮಾಯವಾಗಿ ಅದರಿಂದ ಸಾಯುವವರ ಸಂಖ್ಯೆಯೂ ಕಡಿಮೆ ಆಗುತ್ತಿದ್ದರೂ ಮತ್ತೆ ಹೋದೆಯಾ ಪಿಶಾಚಿ ಎಂದರೆ ಬಂದೆ ಗವಾಕ್ಷಿಯಲ್ಲಿ" ಎನ್ನುವಂತೆ ಮಲೇರಿಯಾ ಮತ್ತೆ ದೇಶದ ಎಲ್ಲೆಡೆ ವ್ಯಾಪಿಸುತ್ತಿದ್ದರೂ ಮುಂಜಾಗರೂಕತಾ ಕ್ರಮವಾಗಿ ಸಾರ್ವಜನಿಕ ಆರೋಗ್ಯ ಕಾರ್ಯಕ್ರಮಗಳ ಮೂಲಕ ನಿರ್ಮೂಲನದತ್ತ ಮತ್ತೆ ಶ್ರಮಿಸುತ್ತಿದೆ- ಗ್ರಾಮಗಳಲ್ಲಿ ವಿದ್ಯುತ್‌ದೀಪ, ರೇಡಿಯೋ, ಗಿರಣಿಗಳು, ಕುಡಿಯುವ ನೀರಿನ ಬಾವಿ, ರಸ್ತೆ, ಸೇತುವೆಗಳು, ಗುಡಿಕೈಗಾರಿಕೆಗಳು ಒಂದೆರಡಲ್ಲ, ಎಲ್ಲಾ ವಿಧದಲ್ಲಿಯೂ ಸುಧಾರಣೆಯ ಗಾಳಿ ಬೀಸುತ್ತಿದೆ. ಪಂಚಾಯತ್ ರಾಜ್ಯ ಮಸೂದೆಯ ಅನ್ವಯ ಮಂಡಲ ಪಂಚಾಯ್ತಿ ಮೂಲಕ ಆಡಳಿತ ಕಾರ್ಯಗಳನ್ನು ನಡೆಸಿಕೊಂಡು ಬರುವ ಸುಧಾರಣೆ ಇತ್ತೀಚಿನ ದಿನಗಳಲ್ಲಿ ನಡೆಯುತ್ತಿದೆ. ಎಲ್ಲಾ ರಂಗಗಳಲ್ಲೂ ಸ್ತ್ರೀಯರಿಗೆ ಮೀಸಲಾತಿ ಸಿಗುತ್ತಿದೆ.

ಸಾರಿಗೆ ಸಂಪರ್ಕದಿಂದಾಗಿ ತಾವು ಬೆಳೆದ ದವಸ ಧಾನ್ಯಗಳನ್ನು ಮಾರುಕಟ್ಟೆಗೆ ನೇರವಾಗಿ ಕೊಂಡೊಯ್ದು ಬೆಳೆಗೆ ತಕ್ಕ ಬೆಲೆ ಕಂಡುಕೊಳ್ಳುತ್ತಿದ್ದಾರೆ. ಸಮೂಹ ಸಂಪರ್ಕ ಸಾಧನಗಳಿಂದ ಗ್ರಾಮದ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಚಟುವಟಿಕೆಗಳು ಹೆಚ್ಚುತ್ತಿವೆ. ಭೂ ಸುಧಾರಣೆಯ ಕಾಯ್ದೆ ಬಂದು ಉಳುವವನೇ ಭೂ ಒಡೆಯನಾಗಿ, ಆಧುನಿಕ ಕೃಷಿ ತಂತ್ರಜ್ಞಾನ ಬಳಸಿ "ಹಸಿರುಕ್ರಾಂತಿಯ" ಹರಿಕಾರರಾಗುತ್ತಿದ್ದಾರೆ. ಶಿಕ್ಷಣದಲ್ಲಿಯೂ ಕೂಡ ಹೆಚ್ಚಿನ ಪ್ರಗತಿ ಕಂಡುಬರುತ್ತಿದೆ. "ಅಕ್ಷರ ಕ್ರಾಂತಿ" ಮೂಲಕ ವಯೋವೃದ್ಧರನ್ನೂ ಕೂಡ ಸಾಕ್ಷರರನ್ನಾಗಿ ಮಾಡುವತ್ತ ಸಂಕಲ್ಪಕೈಗೊಂಡಿದ್ದು ಸಫಲತೆ ಹೊಂದುತ್ತಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರ

ಗಳು ಗ್ರಾಮೀಣ ಪ್ರದೇಶದ ರೈತರಿಗಾಗಿ ಕೃಷಿ, ನೀರಾವರಿ, ವಿದ್ಯುತ್ ಯೋಜನೆಗಳಿಗಾಗಿ ಸಾವಿರಾರು ಕೋಟಿರೂ ಖರ್ಚು ಮಾಡುತ್ತಿವೆ.

"ರೈತ ಸಾಲದಲ್ಲಿಯೇ ಹುಟ್ಟಿ, ಸಾಲದಲ್ಲಿ ಬೆಳೆದು ಸಾಲದಲ್ಲಿಯೇ ಸಾಯುದಂತಿರಲು ಸಾಲಕೊಡುವ ಸಹಕಾರಿ ಸಂಘಗಳ ಮೂಲಕ ರೈತರಿಗೆ ಸರ್ಕಾರವು ವಿಧವಿಧದ ಸವಲತ್ತುಗಳನ್ನು ಕೊಟ್ಟು ರೈತನ ಬಾಳನ್ನು ಹಸನಗೊಳಿಸಲು ಶ್ರಮಿಸುತ್ತಿದೆ. ಆದರೂ ಗ್ರಾಮೀಣ ಜನರ ಬದುಕು ಕಷ್ಟ ಕಾರ್ಪಣ್ಯದ ತವರೂರು. ಸಕಾಲದಲ್ಲಿ ಮಳೆ ಇದ್ದರೆ ಬೆಳೆ. ಕೈಕೊಡುತ್ತಿರುವ ಮಳೆ ರಾಯನ ಮುನಿಸಿನಿಂದಾಗಿ ನೀರಾವರಿಗಾಗಿ ಪಂಪ್ ಸೆಟ್‌ಗಳನ್ನು ಆಶ್ರಯಿಸಿಕೊಂಡ ರೈತನಿಗೆ ಸಕಾಲದಲ್ಲಿ ವಿದ್ಯುತ್ ಸೌಲಭ್ಯವೂ ಇಲ್ಲವಾದರೆ ಅವನ ಪಾಡು ದೇವರಿಗೇ ಪ್ರೀತಿ. ಅಲ್ಲದೆ ದಿನೇದಿನೇ ಏರುತ್ತಿರುವ ಜನಸಂಖ್ಯೆ, ಬಿಡುವಿನ ದಿನಗಳಲ್ಲಿ ದುಡಿಯಲು ಅನುಕೂಲವಾಗುವಂಥ ಗುಡಿಕೈಗಾರಿಕೆಗಳಿಲ್ಲದಿರುವುದು. ಕೆಲವು ಗುಡಿಕೈಗಾರಿಕೆಗಳಿಗೆ ಅವಕಾಶ ಇದ್ದರೂ ಆ ವೃತ್ತಿಯನ್ನು ಹಿಡಿದ ಕುಟುಂಬದವರು ಬೇರೆ ವೃತ್ತಿಯನ್ನಾಶ್ರಯಿಸಿರುವುದು ಬಡತನಕ್ಕೆ ಮತ್ತಷ್ಟು ಉದಾಹರಣೆಯೇ ಸರಿ.

ಜೈನಗ್ರಂಥಗಳಲ್ಲೂ, ರಾಮಾಯಣ, ಮಹಾಭಾರತದಲ್ಲೂ ಗ್ರಾಮೀಣಕಲ್ಪನೆಯು ಉಲ್ಲೇಖವಿದೆ. ಇಂದೂ ಕೂಡ ಮಲೆನಾಡಿನಲ್ಲಿ ಒಂದೇ ಮನೆ ಇದ್ದರೂ ಕೂಡ "ಹಳ್ಳಿ" ಎಂದೇ ಗುರುತಿಸುತ್ತಾರೆ. ಈಗೀಗ ಪಾಶ್ಚಿಮಾತ್ಯರ ಪ್ರಭಾವ, ಯಂತ್ರ-ತಂತ್ರಗಳ ಆಗಮನ, ಅಂತಾರಾಷ್ಟ್ರೀಯ ಮಾರುಕಟ್ಟೆಯು ನಾಗರೀಕರಣದಿಂದ ಗ್ರಾಮ ಜೀವನ ಬದಲಾಗುತ್ತಿದೆ. ಗ್ರಾಮ ಜೀವನದಲ್ಲಿ ಹಿಂದಿದ್ದ ಸಹಕಾರ ಮನೋಭಾವನೆ, ಸೌಹಾರ್ದತೆ, ಪ್ರಾಮಾಣಿಕತೆಗಳು ಮರೆಯಾಗುತ್ತಿರುವುದು ಖೇದದ ಸಂಗತಿ.

ಮತ್ತೊಂದುಕಡೆ ಸುಶಿಕ್ಷಿತರು, ಪಟ್ಟಣವಾಸಿಗಳಿಗೆ ಹಳ್ಳಿಗಳ ಬಗ್ಗೆ ನಿರ್ಲಕ್ಷ್ಯ. ಸಾಕಷ್ಟು ಕೊರತೆಗಳು, ದೌರ್ಬಲ್ಯಗಳು, ಲೋಪ-ದೋಷಗಳು ಇದ್ದರೂ ನಿರಾಶರಾಗಬೇಕಿಲ್ಲ. ಕಾರಣ ಇಂದು ಹಳ್ಳಿಯಿಂದ ದಿಲ್ಲಿಯವರೆಗೆ ಇರುವ ಅನೇಕ ಉನ್ನತ ಸರ್ಕಾರಿ ಅಧಿಕಾರಿಗಳು, ನೆಲಸಿರುವ ಅಸಂಖ್ಯಾತ ಉದ್ದಿಮೆದಾರರೂ, ಕಾರ್ಖಾನೆ ಮಾಲಿಕರೂ ಗ್ರಾಮದ ಮೂಲದವರೇ ಆಗಿರುವುದು ಧನಾತ್ಮಕ ಅಂಶ. ಅಂತೆಯೇ ಹತ್ತನೇ ತರಗತಿಯಿಂದ ಸ್ನಾತಕೋತ್ತರ ಪದವಿತನಕ ಗ್ರಾಮಮೂಲದ ಮಕ್ಕಳೂ ಕೆಲವರು ಪ್ರತಿಭಾವಂತರಾಗಿದ್ದಾರೆ—ಅಗ್ರಶ್ರೇಣಿಯಲ್ಲಿದ್ದಾರೆ. ಇನ್ನು ರಾಜಕಾರಣಿಗಳಲ್ಲಿ, ಸಾಹಿತಿಗಳಲ್ಲಿ, ನ್ಯಾಯವಾದಿಗಳಲ್ಲಿ—ಇತ್ತೀಚೆಗೆ ಪತ್ರಿಕಾರಂಗದಲ್ಲಿಯೂ ಗ್ರಾಮಸ್ಥರದ್ದೇ ಸಿಂಹಪಾಲು ಎನ್ನುವುದು ಅಪ್ರಿಯಸತ್ಯ. ಆದ್ದರಿಂದ ಸರ್ಕಾರ-ಸಮಾಜ, ವಿವಿಧ ರಾಜಕೀಯ ಪಕ್ಷಗಳ ಮುಂಚೂಣಿ ನಾಯಕರು ಒಂದಾಗಿ ದುಡಿದರೆ-ದುಡಿದು ಯಶಸ್ವಿಯಾದರೆ, ಗಾಂಧೀಜಿ ಕನಸಿನ ರಾಮರಾಜ್ಯ ಖಂಡಿತ ಆದೀತು! ಪ್ರಾಯಶಃ ಅದೇ ಗ್ರಾಮರಾಜ್ಯವೂ ಆದೀತು!

ನೊಂದ ತಾಯಿಯ ಎಚ್ಚರಿಕೆ ನುಡಿ

ನೀರದ ಎನ್. ನಾಗರಾಜರಾವ್
೨೨೩೫, ೨೩ನೇ ಕ್ರಾಸ್, ಬನಶಂಕರಿ
೨ನೇ ಹಂತ, ಬೆಂಗಳೂರು-೫೬೦೦೭೦

ನನಗೆ ನೆನಪಿದ್ದಷ್ಟು, ನನ್ನ ಮಗ ರೈಯನ್ ಕಾರು ನಡೆಸಲು ತವಕಪಟ್ಟು ಕೊಳ್ಳುತ್ತಿದ್ದುದು ವ್ಯಕ್ತವಾಗುತ್ತಿತ್ತು. ಅವನ ಹದಿನಾರನೇ ಹುಟ್ಟಿದ ಹಬ್ಬದ ದಿನ ಬೆಳಗ್ಗೆ ಒಂಭತ್ತು ಗಂಟೆಗೇ ಕಾರು ನಡೆಸುವ ಲೈಸನ್ಸ್‌ಗಾಗಿ ಅರ್ಜಿ ಹಾಕಿಯೇ ಬಂದುಬಿಟ್ಟ. ಜೊತೆಗೆ ತನ್ನ ಕಾರು ನಡೆಸುವ ಪರೀಕ್ಷೆಗಾಗಿ ಬುಕ್ ಮಾಡಿಯೂ ಬಂದಿದ್ದ. ಒಂದು ವರ್ಷದ ನಂತರ ೧೯೯೩ನೆಯ ಡಿಸೆಂಬರ್ ೧೪ರಂದು ಅವನಿಗೆ ಡ್ರೈವಿಂಗ್ ಪರೀಕ್ಷೆ ನಡೆದು, ಅದರಲ್ಲಿ ಪೂರ್ಣ ಅಂಕ ಪಡೆದು ಉತ್ತೀರ್ಣನೂ ಆಗಿದ್ದ. ಅದೇ ದಿನ, ನಾನು ಮತ್ತು ನನ್ನ ಗಂಡ ಗೇರಿ ಇಬ್ಬರೂ ಸೇರಿ ಅವನಿಗೆ ಒಂದು ಹಳೇ ಕಾರು, ಆದರೆ ಒಳ್ಳೆಯ ಸ್ಥಿತಿಯಲ್ಲಿತ್ತು. ಫೋರ್ಡ್ ಲೇಸರ್ ಕಾರನ್ನು ಕೊಂಡು ಕೊಟ್ಟೆವು. ಆ ಸಣ್ಣ ಕಾರು ಅವನಿಗೋಸ್ಕರವೇ ತಯಾರಿಸಿದ್ದಾರೇನೋ ಅನ್ನುವಷ್ಟು ಅನುಕೂಲವಾಗಿತ್ತು. ಬಹಳ ಕಡಿಮೆ ಪೆಟ್ರೋಲ್ ಖರ್ಚಾಗುತ್ತಿತ್ತು. ರಿಪೇರಿ ಸರ್ವೀಸ್ ಮಾಡಿಸಬೇಕಾದರೂ ಜಾಸ್ತಿ ಖರ್ಚಾಗುತ್ತಿರಲಿಲ್ಲ.

ರೈಯನ್ ಜೀವನದಲ್ಲಿ ಎಲ್ಲಾ ಹದಿಹರೆಯದ ಹುಡುಗರಂತೆಯೇ ಉತ್ಸಾಹದಿಂದ ತುಂಬಿ ತುಳುಕುತ್ತಿದ್ದ ಹದಿನೇಳು ವರ್ಷದ ಹುಡುಗನಾಗಿದ್ದ. ಅವನು ಟೆನ್ನಿಸ್ ಮತ್ತು ಕ್ರಿಕೆಟ್ ಪಟುವಾಗಿದ್ದ. ಟೆಲಿವಿಷನ್‌ನಲ್ಲಿ ಬರುವ ಎಲ್ಲಾ ಆಟಗಳನ್ನೂ ನೋಡಿ ಆನಂದಿಸುತ್ತಿದ್ದ. ರೈಯನ್ ಎತ್ತರವಾಗಿದ್ದ. ನೋಡಲು ಅತಿ ಸುಂದರನಾಗೇನೂ ಇರಲಿಲ್ಲ. ಯಾವಾಗಲೂ ಮುಗುಳ್ನಗು. ಅವನ ಮುಖದಲ್ಲಿ ಎದ್ದು ಕಾಣುತ್ತಿತ್ತು. ಅವನು ಬಹಳ ಅರ್ಥಗರ್ಭಿತವಾದ ಹಾಸ್ಯದ ಹೊನಲನ್ನೇ ಹರಿಸುತ್ತಿದ್ದ. ಅವನನ್ನು ಹುಡುಗಿಯರು ಎಲ್ಲಾ ರೀತಿಯಿಂದ ಮೆಚ್ಚಿಕೊಳ್ಳುತ್ತಿದ್ದರು. ಇಷ್ಟೆಲ್ಲದರ ಜೊತೆಗೆ ಅವನಿಗೆ ಕಂಪ್ಯೂಟರ್ ಉಪಯೋಗಿಸುವುದೂ ತಿಳಿದಿತ್ತು. ಟೌನ್‌ಪ್ಲಾನಿಂಗ್ ಬಗ್ಗೆ ಆಗಾಗ್ಗೆ ಬರುವ ಸಮಸ್ಯೆಗಳನ್ನು ತಿಳಿದುಕೊಳ್ಳುವುದಕ್ಕೆ ಹೊತ್ತನ್ನು ಸಿಗದಿ ಪಡಿಸುತ್ತಿದ್ದ.

ನಮ್ಮ ಒಬ್ಬನೇ ಮಗ ರೈಯನ್ ಅವನ ವಯಸ್ಸಿಗೆ ತಕ್ಕಂತೆ ಪಕ್ವವಾಗಿದ್ದ. ತನ್ನ ಓದಿನ ಬಗ್ಗೆ ತಿಳುವಳಿಕೆ ಇತ್ತು. ಹೆಚ್ಚು ಗಮನವಿಟ್ಟು ಓದುತ್ತಿದ್ದ. ೧೯೯೪ರ ಹೆಚ್‌ಎಸ್‌ಸಿ ಪರೀಕ್ಷೆಗೆ ಭರದಿಂದ ತಯಾರಿ ನಡೆಸುತ್ತಿದ್ದ. ಚೆನ್ನಾಗಿ ಅಂಕಗಳನ್ನು

ಮೂಲ: ೧೯೯೬ರ ಸೆಪ್ಟೆಂಬರ್ 'ರೀಡರ್ಸ್ ಡೈಜೆಸ್ಟ್'.

ತೆಗೆಯಬೇಕೆಂಬ ಇಚ್ಛೆಯಿಂದ ಕ್ರಿಸ್‌ಮಸ್ ರಜದಲ್ಲಿ ಲೆಖ್ಖದ ಮನೆ ಪಾಠಕ್ಕೂ ಹೋಗಿ ಬರುತ್ತಿದ್ದ: ೧೯೯೪ರ ಒಂದು ರಜ ದಿನ, ಕ್ರಿಸ್‌ಮಸ್ ರಜ ಮುಗಿಯಲು ಇನ್ನೇನು ಒಂದು ವಾರ ಉಳಿದಿದೆ ಎನ್ನುವಾಗ, ಅವನು ಕೆಲವು ದಿನ ತನ್ನ ಸ್ನೇಹಿತನ ಮನೆಯಲ್ಲಿದ್ದು, ರಜ ಕಳೆದು ಬರುವುದೆಂದು ಆಸೆಪಟ್ಟ. ಅವನ ಸ್ನೇಹಿತ ಇದ್ದುದ್ದು ಸಿಡ್ನಿಯ ಉತ್ತರಪಶ್ಚಿಮದಲ್ಲೊಂದು ಊರಾಗಿತ್ತು. ನಾವು "ಹಾಗೇ ಆಗಲಿ, ಹೋಗಿ ಬಾ" ಎಂದು ಒಪ್ಪಿ ಕಳುಹಿದೆವು. ಜೊತೆಗೆ "ನಿಧಾನವಾಗಿ ಕಾರು ಓಡಿಸು" ಎಂದು ಬುದ್ಧಿವಾದ ಹೇಳಲು ಮರೆಯಲಿಲ್ಲ. "ಏನೂ ಆತಂಕ ಬೇಡ ಮಮ್ಮಿ", ಅಂತ ನಗುತ್ತಾ ತನ್ನ ಲಗ್ಗೇಜನ್ನು ಹಿಡಿದು, ಕಾರಿನ ಬೀಗದ ಕೈಯನ್ನು ತಿರುಗಿಸಿ, ಕಾರನ್ನು ಹೊರಡಿಸಿಯೇಬಿಟ್ಟ. ಮಧ್ಯಾಹ್ನ ೩-೨೦ಕ್ಕೆ ರೈಯನ್ ಕಾರು ಅವನ ಸ್ನೇಹಿತನ ಊರಿನ ಹತ್ತಿರ ತಿರುವಿನಲ್ಲಿ ಹಿಡಿತ ತಪ್ಪಿತು. ಕೊನೆಗೆ ಅದು ಸಣ್ಣ ಗುಡ್ಡದಂಥಹ ಕಲ್ಲಿನ ಕಡೆಗೆ ಹೊರಳಲು ತೊಡಗಿದಾಗ ಎದುರಿಗೆ ಒಂದು ದೀಪದ ಕಂಬ ಅಡ್ಡ ಬಂತು, ಅದನ್ನು ಬಡಿಸಿಕೊಳ್ಳುವುದು ಬೇಡವೆಂದು ಕಾರಿನ ಚಕ್ರವನ್ನು ಕೈಯಿಂದ ಜೋರಾಗಿ ಗಿರಗಿರನೆ ತಿರುಗಿಸಿದ್ದಕ್ಕೆ ಕಾರು ಬುಡಮೇಲಾಗಿ ಉರುಳಿತು. ಪೊಲೀಸರು ಎಳೆ ವಯಸ್ಸಿನ ಹುಡುಗ ಅತಿ ವೇಗದಿಂದ ಕಾರೋಡಿಸಿಕೊಂಡು ಬಂದು ಅಪಘಾತ ಮಾಡಿದ್ದಾನೆ ಅಂತಲೇ ನಿಶ್ಚಯಿಸಿಬಿಟ್ಟರು!

ಹೆಲಿಕಾಪ್ಟರ್‌ನಲ್ಲಿ ಸಾಗಿಸಿ ರೈಯನ್ ಅನ್ನು ಸಿಡ್ನಿಯಲ್ಲಿರುವ ನಾರ್ತ್‌ಶೋರ್ ಆಸ್ಪತ್ರೆಗೆ ಸೇರಿಸಿದರು. ಜ್ಞಾನವಿಲ್ಲದೆ, ಮೈಯೆಲ್ಲಾ ಬ್ಯಾಂಡೇಜ್‌ನಿಂದ ಸುತ್ತಿದ ದೇಹವನ್ನು ಎಮರ್ಜೆನ್ಸಿ ಕೊಠಡಿಗೆ ತಳ್ಳುವ ಗಾಡಿಯ ಮೇಲೆ ಕೊಂಡೊಯ್ಯುತ್ತಿದ್ದಾಗ ನಾನು ಮತ್ತು ನನ್ನ ಗಂಡ ಅಲ್ಲಿಗೆ ಹೋಗಿ ಸೇರಿದೆವು; ಬಾಗಿಲು ಕಾಯುವ ಜವಾನ ನಮ್ಮನ್ನು ವೈಟಿಂಗ್ ರೂಮಿನಲ್ಲಿ ಕುಳಿತುಕೊಳ್ಳುವಂತೆ ಹೇಳಿದನು. ಅಲ್ಲಿ ಕುಳಿತ ಮೇಲೆ ನಮ್ಮಿಬ್ಬರ ಮನಸ್ಸಿನಲ್ಲಿ ಕೆಟ್ಟ ಆಲೋಚನೆಗಳೇ ಬರಲಾರಂಭಿಸಿದವು.

ಮೊದಲಿಗೆ, ಡಾಕ್ಟರ್ ಮಾತುಗಳಿಂದಲೇ ನಮಗೆ ಕಗ್ಗತ್ತಲು ಕವಿದ ಹಾಗಾಯಿತು. ತಲೆಗೆ ಬಹಳ ಜೋರಾದ ಪೆಟ್ಟು ಬಿದ್ದಿದೆ, ಆದ್ದರಿಂದ ಮೆದುಳು ಹಾನಿಯಾಗಿದೆ. ತಕ್ಷಣವೇ ಶಸ್ತ್ರಚಿಕಿತ್ಸೆ ಆಗಬೇಕು" ಎಂದು ಡಾಕ್ಟರ್ ಮಾತಾಡಿಕೊಳ್ಳುತ್ತಿದ್ದುದು ನನಗೆ ಚೆನ್ನಾಗಿ ಕೇಳಿಸಿತು. ಇಷ್ಟೆಲ್ಲಾ ಕೇಳಿಸಿಕೊಂಡಿದ್ದರೂ ನನ್ನ ಮನಸ್ಸಿನಲ್ಲಿ ಒಂದು ಕಡೆ ಮಗ ಎದ್ದು ಬಂದು "ಹಲೋ ಮಮ್ಮಿ, ಹಲೋ ಡ್ಯಾಡಿ, ನಾನು ಮಾಡಿದ ಈ ಕೆಲಸಕ್ಕೆ ವಿಷಾದಿಸುತ್ತೇನೆ. ನಾನೀಗ ಆರೋಗ್ಯವಾಗಿದ್ದೀನಿ" ಅಂತ ಬಂದು ಹೇಳುತ್ತಾನೇನೋ ಎಂದೊಂದು ಆಸೆ ಬೇರೆ ಆಗಾಗ್ಗೆ ಬರುತ್ತಿತ್ತು. ಹಾಗೆ ಬಂದು ಅವನು ಹೇಳುವುದಿರಲಿ, ಯಾವ ಸುದ್ದಿಯೂ ಇಲ್ಲದೆ ಕಾದು ಕಾದು ಕುಳಿತುಕೊಂಡಿದ್ದೇ ಆಯಿತು. ಕಡೆಗೆ ಒಬ್ಬ ಸರ್ಜನ್ ಜೋಲು ಮುಖ ಹಾಕಿಕೊಂಡು ಬಂದು "ಸಾರಿ", ಅವನು ಬದುಕಿ ಉಳಿಯುವುದು ಬಹಳ ಕಷ್ಟ ಎಂದು ಹೇಳಿ ಹೋದರು.

ಅತಿ ಎಚ್ಚರಿಕೆಯಿಂದ (ಇನ್‌ಟೆನ್ಸಿವ್ ಕೇರ್) ನೋಡಿಕೊಳ್ಳುವ ಕೊಠಡಿಯಲ್ಲಿ ನೋಡಿದಾಗ ಎದೆ ಬಿರಿಯುವ ದೃಶ್ಯ ಕಂಡಿತು. ಪೊಗರಿನಿಂದ ಕೂಡಿದ ಮಗ, ತನ್ನ ಎಲ್ಲಾ ಕೆಲಸದಲ್ಲಿ ಅತಿಯಾದ ನಂಬಿಕೆ ಇಟ್ಟುಕೊಂಡಿದ್ದವ, ಒಳ್ಳೆ ಆಟಗಾರನಾಗಿದ್ದ ನನ್ನ ಮಗ, ಅಲುಗಾಡದೇ ಒಂದು ಮುದ್ದೆಯಂತೆ ಹಾಸಿಗೆ ಮೇಲೆ ಬಿದ್ದಿದ್ದ. ಕೃತಕ ಉಸಿರಾಟದ ಯಂತ್ರವನ್ನು ಅವನ ಶ್ವಾಸಕೋಶಕ್ಕೆ ಅಳವಡಿಸಿದ್ದರು. ನಿಧಾನ ಗತಿಯ ಎದೆ ಬಡಿತ, ಜೊತೆಗೆ ಅವನ ಸುತ್ತಲೂ ರಕ್ತದೊತ್ತಡ ನೋಡುವ ಯಂತ್ರಗಳೇ ಸುತ್ತಿಕೊಂಡಿದ್ದವು. ಅವನ ಸುಂದರ ಕಂದುಬಣ್ಣದ ಕಣ್ಣುಗಳು ತೆರೆದುಕೊಂಡೇನೋ ಇದ್ದವು. ಆದರೆ ಕಣ್ಣಿನ ದೃಷ್ಟಿ ಕೇವಲ ತಾರಸಿಯೊಂದನ್ನೇ ನೋಡುತ್ತಿರುವಂತಿತ್ತು.

ನನ್ನ ಗಂಡ ಗೇರಿ ಅಲ್ಲಿ ಇಲ್ಲಿ ಹೋಗಿ ತಜ್ಞ ಡಾಕ್ಟರ್‌ಗಳನ್ನು ಕರೆದುಕೊಂಡು ಬಂದರು. ಆದರೆ ಪರಿಸ್ಥಿತಿ ಮಾತ್ರ ಹಾಗೆಯೇ ಬದಲಾಗದೆಯೇ ಇತ್ತು. ಅವನ ಮಿದುಳಿನಲ್ಲಿ ಉಸಿರಾಡುವ ಭಾಗವೊಂದೇ ಕೆಲಸ ಮಾಡುತ್ತಿತ್ತು. ಅದೂ ಸಹ ಕೃತಕ ಯಂತ್ರಗಳ ಸಹಾಯದಿಂದಲೇ ನಡೆಯುತ್ತಿತ್ತು. "ಒಮ್ಮೆ ನಾವೇನಾದರೂ ಈ ಯಂತ್ರಗಳನ್ನು ತೆಗೆದುಹಾಕಿದಲ್ಲಿ ನಿಮ್ಮ ಮಗ ರೈಯನ್ ಸ್ವತಃ ಕೆಲವು ದಿನಗಳವರೆಗೆ ಉಸಿರಾಡಬಲ್ಲ ಅಷ್ಟೆ. ಅದಕ್ಕಿಂತ ಹೆಚ್ಚಿಗೆ ಅವನು ಬದುಕಿ ಉಳಿಯಲಾರ" ಎಂದು ಡಾಕ್ಟರ್‌ಗಳು ಹೇಳಿದರು.

ಸ್ನೇಹಿತರು ಮತ್ತು ನಂಟರು ರೈಯನ್‌ಗೆ ಅಂತಿಮ ಗೌರವ ಸಲ್ಲಿಸಲು ಆಸ್ಪತ್ರೆಗೇ ಬಂದಿದ್ದರು.

ಎಲ್ಲೆಡೆ ನಿಶ್ಶಬ್ದವಾಗಿ ಬೆಳಗಿನ ಜಾವ, ನಾನು ನನ್ನ ಗಂಡ ಮಾತ್ರ ಮಗನ ಹತ್ತಿರ ಇದ್ದಾಗ, ಅನಾಹುತವಾದ ಒಂಭತ್ತು ದಿನಗಳ ನಂತರ ೪ ಗಂಟೆಗೆ ನಮ್ಮ ಮಗ ನಿಧಾನವಾಗಿ ತನ್ನ ಕೊನೆಯುಸಿರನ್ನೆಳೆದನು.

ಅಂತ್ಯಕ್ರಿಯೆಯ ಸಮಯದಲ್ಲಿ ಚರ್ಚ್ ಸ್ಕೂಲಿನ ಸ್ನೇಹಿತರು ಮತ್ತು ಉಪಾಧ್ಯಾಯರುಗಳಿಂದ ತುಂಬಿ ಹೋಗಿತ್ತು. ಅವನ ಕ್ಲಾಸಿನಲ್ಲಿ ಓದುವ ಹುಡುಗನೊಬ್ಬ, ನನ್ನ ಮಗನಿಗೆ ಆಕ್ಸಿಡೆಂಟ್ ಆದ ಜಾಗದಲ್ಲಿ ಒಂದು ಬಿಳಿ ಬಣ್ಣದ ಕ್ರಾಸ್‌ನ್ನು ತಂದು ನೆಟ್ಟನು. ಸ್ವಲ್ಪ ಹೊತ್ತಿನ ನಂತರ ಟ್ರಾಫಿಕ್ ಅಥಾರಟಿಯವರು ೮೦ ಕಿಲೋ ಮೀಟರ್ ವೇಗ ಮಿತಿ ಎಂದು ಬರೆದಿದ್ದ. ಹಳೇ ಫಲಕವನ್ನು ತೆಗೆದುಹಾಕಿ ೬೦ ಕಿಲೋ ಮೀಟರ್ ಎಂಬ ಫಲಕ ಹಾಕಿದರು.

ಪ್ರತಿಯೊಬ್ಬ ಯುವಕನೂ ತನಗೆಂದಿಗೂ ಆಕ್ಸಿಡೆಂಟ್ ಆಗುವುದೇ ಇಲ್ಲ ಎಂದು ದೃಢವಾಗಿ ನಂಬಿಕೊಂಡೇ ಇರುತ್ತಾನೆ. ಏಕೆಂದರೆ ನಾನೂ ಒಬ್ಬ ಯುವಕನ ತಾಯಿ ಆಗಿರುವುದರಿಂದ ಇದರ ಬಗ್ಗೆ ನನಗೆ ಬಹಳಷ್ಟು ಅನುಭವವಿದೆ. ೨೫ ವರ್ಷದ ಒಳಗಿನ ಯುವಕರು ಇತ್ತೀಚಿನ ವರ್ಷಗಳಲ್ಲಿ ಈ ರೀತಿ ಅಪಘಾತದಲ್ಲಿ ಸಾಯುವುದು ಬಹಳ ಹೆಚ್ಚಾಗುತ್ತಿದೆ. ಮದ್ಯಪಾನದಿಂದಾಗಲೀ ಅತಿ ವೇಗದಿಂದ ಗಾಡಿ ಓಡಿಸುವುದರಿಂದಾಗಲೀ ಈ ರೀತಿಯ ಅಪಘಾತಗಳಾಗುತ್ತವೆ ಎಂದು ಹೇಳುವುದು ತಪ್ಪು. ಏಕೆಂದರೆ ನನ್ನ ಮಗ ಕುಡುಕನಾಗಿರಲಿಲ್ಲ. ಜೊತೆಗೆ ಕಾರೂ ಅತಿ ವೇಗ

ದಿಂದ ಓಡಿಸುವವನೂ ಅಲ್ಲ, ಅನನುಭವದ ಜೊತೆಗೆ ತನ್ನ ಬಿಟ್ಟರೆ ಇಲ್ಲ ಎನ್ನುವ ಅತಿಯಾದ ನಂಬಿಕೆ. ಈ ಎರಡೂ ಸೇರಿಕೊಂಡು ನಿಜವಾಗಿ ಸಾವನ್ನಪ್ಪುತ್ತಿದ್ದಾರೆ.

ಆದ್ದರಿಂದ ಯುವಕ, ಯುವತಿಯರಿಗೆ ನನ್ನದೊಂದು ಸಂದೇಶ ಏನೆಂದರೆ, ನಿಮಗೆ ವಾಹನ ನಡೆಸುವ ಲೈಸನ್ಸ್ ಸಿಕ್ಕಿಬಿಟ್ಟದೆ ಎಂದಲ್ಲಿ ನೀವು ನುರಿತ ವಾಹನ ಚಾಲಕರಾಗಿ ಬಿಟ್ಟಿದ್ದೀರಿ ಎಂಬ ಅರ್ಥವೇನಿಲ್ಲ. ಲೈಸನ್ಸ್ ಟೆಸ್ಟಿನಲ್ಲಿ ಏನೂ ಇರುವುದಿಲ್ಲ. ಯುವಕ ಚಾಲಕನಿಗೆ ವಾಹನ ನಡೆಸುವಾಗ ಏನಾದರೂ ಕ್ಷಣಾರ್ಧದಲ್ಲಿ ಆಪತ್ತು ಬಂದಲ್ಲಿ ಆಗ ಏನು ಮಾಡಬೇಕು ಎಂಬುದರ ಅರಿವಿರಬೇಕು ಎಂಬುದೊಂದೇ ಉದ್ದೇಶ, ಜೊತೆಗೆ ಯುವಕರ ವಾಹನ ಹಿಡಿತ ತಪ್ಪಿದಾಗ ಏನು ಮಾಡಬೇಕು ಎಂಬುದರ ಬಗ್ಗೆ ತಿಳುವಳಿಕೆ ಕೊಡುವುದು. ಇದೇ ಲೈಸನ್ಸ್‌ನ ಮುಖ್ಯ ಉದ್ದೇಶ. ೧೬ನೇ ವರ್ಷದಲ್ಲಿ ನೀವು ಎಲ್ಲವನ್ನೂ ಜಯಿಸಿಕೊಂಡವರೆಂದು ಭಾವಿಸಿರಬಹುದು. ದಯವಿಟ್ಟು ಆಗಾಗ್ಗೆ ಪ್ರತಿವಾರ ಒಳ್ಳೆಯ ಜವಾಬ್ದಾರಿ ಏನೆಂದು ಅರಿತಿರುವ ಯುವಕರು, ಸಣ್ಣಪುಟ್ಟ ಬೇಜವಾಬ್ದಾರಿಯಿಂದ ಸಾವನ್ನಪ್ಪುತ್ತಿರುವವರನ್ನು ನೆನೆಸಿಕೊಳ್ಳುತ್ತಾ, ತಮ್ಮನ್ನು ತಾವು ಹಿಡಿತದಲ್ಲಿರಿಸಿಕೊಳ್ಳಲು ಪ್ರಯತ್ನಿಸಿ. ನಿಮಗೆ ಒಮ್ಮೆ ಸಾವು ಬಂದರೆ ಆಯಿತು, ಮತ್ತೊಮ್ಮೆ ಹುಟ್ಟಿ ಬರಲಾಗುವುದಿಲ್ಲ.

ಎದ್ದರೆ, ಕುಳಿತರೆ ರೈಯನ್‌ನನ್ನು ನಾವು ಬಹಳವಾಗಿ ಜ್ಞಾಪಿಸಿಕೊಳ್ಳುತ್ತೇವೆ. ಯಾವಾಗಲೂ ನಗು, ಖುಷಿಯಿಂದ ತುಂಬಿದ್ದ ಮನೆಯನ್ನು ಈಗ ಸ್ಮಶಾನ ಮೌನ ಆವರಿಸಿದೆ." "ಹಾಯ್, ಮಮ್ "ನಾನು ಬಂದುಬಿಟ್ಟಿದ್ದೇನೆ" ಎಂದು ಮತ್ತೊಮ್ಮೆ ರೈಯನ್ ಏನಾದರೂ ಬಂದು ಹೋಗುವ ಹಾಗಿದ್ದಲ್ಲಿ, ನಾನು ಏನನ್ನು ಬೇಕಾದರೂ ತ್ಯಾಗಮಾಡಲು ಸಿದ್ಧಳಾಗಿದ್ದೇನೆ.

ಮೋಟಾರ್ ಬೈಕ್ ಅಥವಾ ಸ್ಕೂಟರ್ ನಡೆಸುವ ಚಿಕ್ಕ ವಯಸ್ಸಿನ ಯುವಕ, ಯುವತಿಯರು ನಿಮಗೆ ಗೊತ್ತಿದ್ದರೆ ಅವನಿಗೆ ಇಲ್ಲ ಅವಳಿಗೆ ಈ ಲೇಖನವನ್ನು ತೋರಿಸಿ, ಆಗಲಾದರೂ ಒಂದು ಜೀವ ಉಳಿಯಲಿ.

ಯಾರು ಯಾವಾಗಲೂ ಅಜಾಗರೂಕರಾಗಿರುತ್ತಾರೆಯೊ, ಅಂಥವರು ಯಾವಾಗಲೂ ದುಃಖಿಗಳಾಗಿರುತ್ತಾರೆ. ಯಾರು ಯಾವಾಗಲೂ ಜಾಗರೂಕತೆಯಿಂದ ಇರುತ್ತಾರೆಯೋ ಅಂಥವರು ಯಾವಾಗಲೂ ಸುಖಿಗಳಾಗಿರುತ್ತಾರೆ.

—ಮಹಾವೀರ

ಪುಸ್ತಕ ಪರಿಚಯ

ಕಾರವುಕ್ಕ (ಸೋಲಿಗರ ಜೀವನಾಧಾರಿತ ಕಾದಂಬರಿ) — ಲೇಖಕರು: ಪ್ರೊ॥ ಚಂದ್ರಶೇಖರಯ್ಯ; ಪ್ರಕಾಶಕರು: ಸಂವಹನ, ೧೩/೧ ಈವಿನಿಂಗ್ ಬಜಾರ್ ಹಿಂದೆ, ಶಿವರಾಂಪೇಟೆ, ಮೈಸೂರು–೫೭೦ ೦೦೧, ಪುಟಗಳು: ೨೪೮+xii, ಮೊದಲ ಮುದ್ರಣ ೧೯೯೭, ಬೆಲೆ: ೭೦ ರೂ.

ಕಾರವುಕ್ಕ ಹೆಸರೇ ಸೂಚಿಸುವಂತೆ ಕಾಡಿನ ಮಕ್ಕಳ ಕಥೆ. ಆದಿವಾಸಿ ಜನಾಂಗವಾದ ಬಿಳಿಗಿರಿರಂಗನ ಬೆಟ್ಟದ ಕಾಡಿನಲ್ಲಿರುವ ಸೋಲಿಗರ ಜೀವನ ಬದುಕು ಬವಣೆಗಳನ್ನು ವಿಸ್ತಾರವಾಗಿ ಚಿತ್ರಿಸಿರುವ ಕೃತಿ.

ಸೋಲಿಗರಲ್ಲಿರುವ ಮುಗ್ಧತೆ, ಕಪಟವನ್ನು ಅರಿಯದ ಮನಸ್ಸು ಅವರ ಅಜ್ಞಾನವನ್ನು ನಾಡವರು ದುರುಪಯೋಗಪಡಿಸಿಕೊಳ್ಳುವ ಘಟನೆಗಳು ವಿಸ್ತಾರವಾಗಿ ವರ್ಣಿತವಾಗಿದೆ.

ಪೋಡು ಎಂದರೆ ಅವರು ವಾಸಿಸುವ ಪ್ರದೇಶ ಯಜಮಾನನಿಗೆ ಸಲ್ಲುವ ಗೌರವ, ಬಿಳಿಗಿರಿರಂಗನ ಜಾತ್ರೆಯ ಸಂಬಂಧ ಅವರಿಗಿರುವ ಆತ್ಮೀಯತೆ ಎಷ್ಟರಮಟ್ಟಿಗಿದೆಯೆಂದರೆ ತಮ್ಮ ಕುಲದ ಹೆಣ್ಣನ್ನು ರಂಗನಾಥ ಮದುವೆಯಾಗಿದ್ದು ಆತ ನಮ್ಮ ಭಾವ ಎಂದು ನಂಬಿದ್ದಾರೆ. ಪ್ರತಿವರ್ಷ ಅವರಲ್ಲಿ ಯಜಮಾನನ ಬದಲಾವಣೆಯನ್ನು ಎಲ್ಲಾ ಪೋಡುಗಳ ಸೋಲಿಗ ಹಿರಿಯರು ಸಭೆ ಸೇರಿ ನಿರ್ಣಯಿಸುತ್ತಾರೆ. ಕಾದಂಬರಿಯಲ್ಲಿ ಬರುವ ಚಲುವಾದಿ, ಜಡೇಗೌಡ, ಪಟ್ಟಿಗಾರ ಶನಿವಾರೇಗೌಡ, ಗುರುವೇಗೌಡ, ತಮ್ಮಡಿ ವೀರೇಗೌಡ, ದಾಸೇಗೌಡ, ತುಬಾಕಿಗೌಡ, ಬಶಾವ ಪಂದೇಗೌಡ, ಜಡೆಯ ತಮ್ಮ ಮುಗ್ಧತೆಯಿಂದ ತಾವು ನಂಬಿದ ಮೌಲ್ಯಗಳಿಗಾಗಿ ಮಾನವೀಯ ಗುಣದಿಂದ ಜೀವಂತಿಕೆಯ ಸೆಲೆಯಾಗಿದ್ದಾರೆ. ಒಂದು ಕಡೆ ನೆಲೆನಿಲ್ಲದ ಸೋಲಿಗರು ಆಗಾಗ ಪೋಡು ಬದಲಾಯಿಸುತ್ತಾರೆ. ಪೋಡು ಬದಲಾಯಿಸುವುದರಲ್ಲಿ ತಮ್ಮದೇ ನಂಬಿಕೆಗಳನ್ನು ಹೊಂದಿದ್ದಾರೆ. ಆನೆ ಕಾಡು ಪ್ರಾಣಿಗಳು ಗಿಡಮರಗಳನ್ನು ಪ್ರೀತಿಸುವ ಸೋಲಿಗರು ಮದುವೆಯನ್ನು ಸರಳವಾಗಿ ಆಚರಿಸುತ್ತಾರೆ. ಕಾದಂಬರಿಯಲ್ಲಿ ಜಡೆಯ ಸಿದ್ಧ ಕಾಡಿನಲ್ಲಿ ತಪ್ಪಿಸಿಕೊಳ್ಳುತ್ತಾರೆ. ಮರುದಿನ ಜೊತೆಯಾಗಿ ಬರುತ್ತಾರೆ. ಆಗ ಲೇಖಕರೊಡನೆ ಪೋಡಿನ ಯಜಮಾನ ಹೇಳುವಮಾತು "ನೋಡಿ ಬುದ್ಧಿ! ನಾನು ಹೇಳಲಿಲ್ಲವಾ.....ಬಂದವರೆ ನೋಡಿ! ಗಂಡ ಹೆಂಡ್ತಿರಾಗಿ! ಹೆಣ್ಣು ಗಂಡು ಒಪ್ಪಿದರೆ ಆಯ್ತು! ಅವರ ಸಂತೋಷವೇ ನಮ್ಮ ಸಂತೋಷ!...." ಎನ್ನುತ್ತಾನೆ ಗುರುವೇಗೌಡ. ಕಾಡಿನಲ್ಲಿ ದಂಪತಿಗಳಾದರು, ಅದಕ್ಕೆಲ್ಲಾ ಈ ಮರಗಿಡಗಳು, ಆನೆಗಳು, ಹಕ್ಕಿ ಪಕ್ಷಿಗಳು, ಈ ಗೊಂಬೆಕಲ್ಲು ಬೆಟ್ಟ ಇವೇ ಸಾಕ್ಷಿ ಎನ್ನುತ್ತಾನೆ" ತುಂಬಾ ಸರಳ

ವಾದ ಮದುವೆ ಆಚರಣೆ ಸೋಲಿಗರದು. ನಾಮಕರಣ ಪದ್ಧತಿ, ಸಾವು ಜಡೆ ಸ್ವಾಮಿ ಗುಡಿ ಪೂಜೆ ಹೀಗೆ ವಿವಿಧ ಆಚರಣೆಗಳನ್ನು ಪದ್ಧತಿಗಳನ್ನು ಸೂಕ್ಷ್ಮವಾದ ಗ್ರಹಿಕೆಯಿಂದ ಲೇಖಕರು ಹೇಳುತ್ತಾರೆ.

ರಮಣೀಯ ಸುಂದರ ಕಾಡಿನ ಮಧ್ಯ ಬದುಕು ನಡೆಸುವ ಸೋಲಿಗರು ಸಾವಿಗೆ ಹೆದುರುವವರಲ್ಲ, ದೊಡ್ಡ ಸಂಪಿಗೆ ಮಹಾ ವೃಕ್ಷದಲ್ಲಿ ತಾವು ನಂಬುವ ಜಡೇಸ್ವಾಮಿ, ಮಹಾದೇಶ್ವರ, ಬಸವೇಶ್ವರ ಕಾರಯ್ಯಾ ಸ್ವಾಮಿ ಕ್ಯಾತೇದೇವರು, ಹುಲೀರಪ್ಪ ಸಿದ್ದೇಶ್ವರರಿದ್ದಾರೆಂದು ನಂಬುತ್ತಾರೆ.

ಕಾಡಿನ ಮಕ್ಕಳಾದ ತಾವು ಕಾರಯ್ಯನ ಮಕ್ಕಳೆಂದು ಹೇಳಿಕೊಳ್ಳುತ್ತಾರೆ. ಕಾದಂಬರಿಯಲ್ಲಿ ಬರುವ ಪ್ರತಿಯೊಂದು ಪಾತ್ರವೂ ಜೀವಂತಿಕೆಯಿಂದ ಕೂಡಿದ್ದು, ಸೋಲಿಗರ ಸರಳತೆಜೀವನ ಪ್ರೀತಿಯನ್ನು ಮನೋಜ್ಞವಾಗಿ ಕೃತಿಯಲ್ಲಿ ಹಿಡಿದಿಟ್ಟಿರುವುದನ್ನು ಪ್ರತಿ ಅಧ್ಯಾಯದಲ್ಲಿ ಕಾಣಬಹುದು. ಕೆಲವುಕಡೆ ಅವರು ಆಡುವ ಭಾಷೆಯನ್ನು ತರಲು ಯತ್ನ ನಡೆಸಿದ್ದಾರೆ. ಕಾದಂಬರಿ ಕುತೂಹಲದಿಂದ ಓದಿಸಿಕೊಂಡು ಹೋಗುವ ಗುಣವನ್ನು ಪಡೆದಿದೆ. ಇದೊಂದು ಸಾಮಾಜಿಕ ಜನಾಂಗೀಯ ಸಾಂಸ್ಕೃತಿಕ ಅಧ್ಯಯನದ ಮಾರ್ಗದರ್ಶಕ ಕೃತಿ. ಸ್ವತಃ ಲೇಖಕರು ಕಾಡಿನ ಪೋಡಿನಲ್ಲಿದ್ದು ಆಚರಣೆನಂಬಿಕೆ, ಸಾಂಸ್ಕೃತಿಕ ನೆಲೆಯನ್ನು ಅರ್ಥಮಾಡಿಕೊಂಡು, ಅವರ ಸಂಕೋಚಸ್ವಭಾವದ ನಡುವೆಯೂ ಪ್ರೀತಿ ವಿಶ್ವಾಸಗಳಿಸಿ ಜೀವನವಿಧಾನ ಕಾಡು ಮತ್ತು ಪ್ರಾಣಿಗಳ ಮೇಲಿನ ಸಹಜ ಪ್ರೀತಿಯನ್ನು ಸೆರೆಹಿಡಿದಿದ್ದಾರೆ. ಅವರ ವೈದ್ಯ ಪದ್ಧತಿಯನ್ನು ಪರಿಚಯಿಸಿ, ಹೊಸ ಆಲೋಚನೆಗೆ ಮುಖಮಾಡುವ ಪ್ರೇರಣೆಯಾಗಿ ಡಾ|| ವಿವೇಕ ವೈದ್ಯಕೀಯ ನೆರವು ನೀಡುವುದನ್ನು ತಂದಿದ್ದಾರೆ. ನಾಡವರ ಸಾಂಸ್ಕೃತಿಯನ್ನು ಸುಲಭವಾಗಿ ಸ್ವೀಕರಿಸದ ಮನೋಧರ್ಮ, ಸರ್ಕಾರ ನಿರ್ಮಿಸಿಕೊಡುವ ಖಾಯಂ ಮನೆಗಳನ್ನು ನಿರಾಕರಿಸಿ ಕಾಡಿನಲ್ಲಿ ಉಳಿಯುವ ಆಶಯದಲ್ಲಿ ಕಾಣಬಹುದು.

ನಾಡಿನ ಎಷ್ಟೋ ಜನರಿಗೆ ಅಪರಿಚಿತವಾದ ಆದಿವಾಸಿಗಳ ಜೀವನ ಸಾಂಸ್ಕೃತಿಯ ಒಳನೋಟವನ್ನು ಪರಿಚಯಮಾಡುವ ಒಳ್ಳೆಯಕೃತಿ ಈ ಕಾದಂಬರಿ. ನಾಡಿನ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು, ಜನಾಂಗೀಯ ಅಧ್ಯಯನದ ಆಸಕ್ತರು ಅವಶ್ಯವಾಗಿ ಓದಲೇಬೇಕಾದ ಪುಸ್ತಕ. ಬೆಲೆ ತುಸು ಹೆಚ್ಚೆನಿಸುತ್ತದೆ. ಮುದ್ರಣ ಮುಖಪುಟ ಚೆನ್ನಾಗಿವೆ.

ಕೆ.ಸಿ. ವಿಶ್ವೇಶ್ವರಯ್ಯ
'ಸ್ನೇಹ' ೪ಎ/೨೫, ೬ನೇ ರಸ್ತೆ
ಕೆ. ಆರ್. ನಗರ

ಸಮಿತಿಯ ವಿಶೇಷ ಪ್ರಕಟಣೆಗಳು

"ಜನಪ್ರಿಯ ವಾಲ್ಮೀಕಿ ರಾಮಾಯಣ"—ರಾಷ್ಟ್ರಕವಿ ಕುವೆಂಪು

—ಸರಳ ಗದ್ಯದ ಅಂದವಾದ ಮುದ್ರಣದ ೪೨೬ ಪುಟಗಳ ಸಮಗ್ರ
ರಾಮಾಯಣದ ಬೆಲೆ .... ೫೪-೦೦ ರೂ.

"ಶರಣ ಚರಿತಾಮೃತ"—ಸಿದ್ದಯ್ಯ ಪುರಾಣಿಕ

—ಮಾದಾರ ಚೆನ್ನಯ್ಯನಿಂದ ಮೊದಲುಗೊಂಡು ೬೩ ಶಿವಶರಣರ
ಜೀವನ ಚಿತ್ರಣ ಒಳಗೊಂಡ ೮೦೦ ಪುಟಗಳ ಕೃತಿಯ ಬೆಲೆ .... ೬೫-೦೦ ರೂ.

"ಯುದ್ಧ ಮತ್ತು ಶಾಂತಿ" (ಅನುವಾದ)—ಡಾ|| ದೇ. ಜವರೇಗೌಡ

—ಮೂರು ಸಂಪುಟಗಳಲ್ಲಿ; ಪ್ರತಿ ಸಂಪುಟದ ಬೆಲೆ .... ೫೦-೦೦ ರೂ.

"ನಕ್ಷತ್ರ ವೀಕ್ಷಣೆ"—ಜಿ. ಟಿ. ನಾರಾಯಣರಾವ್

—ನಕ್ಷತ್ರಗಳನ್ನು ಕುರಿತು ಕುತೂಹಲ ತಣಿಸುವ ೧೨೦ ಪುಟಗಳ
ಕೃತಿಯ ಬೆಲೆ .... ೨೦-೦೦ ರೂ.

"ನನ್ನೂರು"—ಡಾ|| ಎಚ್. ಎಲ್. ನಾಗೇಗೌಡ

—೩೫೦ ಪುಟಗಳ ಈ ಕಾದಂಬರಿಯ ಬೆಲೆ .... ೮-೦೦ ರೂ

* ಅಂಚೆ ಮೂಲಕ ಬೇಕಾದಲ್ಲಿ ಅಂಚೆ ವೆಚ್ಚ ಪ್ರತ್ಯೇಕ.
* ೫೦೦ ರೂ ಗಳಿಗೆ ಮೇಲ್ಪಟ್ಟು ಕೊಂಡಲ್ಲಿ ೩೩ ೧/೩ ಭಾಗ ರಿಯಾಯಿತಿ.
* ಕೆಲವೇ ಪ್ರತಿಗಳು ಮಾತ್ರ ಲಭ್ಯ.

ಹೆಚ್ಚಿನ ವಿವರಕ್ಕೆ ಸಂಪರ್ಕಿಸಿ:

ಪ್ರಧಾನ ಸಂಪಾದಕ
ಕ.ರಾ.ವ.ಶಿ. ಸಮಿತಿ
೫/೧, ವಿನೋಬಾ ರಸ್ತೆ
ಮಾನಸಗಂಗೋತ್ರಿ
ಮೈಸೂರು-೫೭೦ ೦೦೬

Reg. No. KRNN.29 / WPP 6

LICENCE No. 21
LICENCED TO POST WITH PAYMENT



ಕಲ್ಪನಾ ಚಾವ್ಲಾ

Edited by Chandrashekhararadhya, Printed by Papanna
Printed & Published by Karnataka State Adult Education Council,
5/1, Vinoba Road, Manasa Gangothri, Mysore-570 006.